ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜನವರಿ 9 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 263 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದೆ ಶರಣಾದ ಆರು ನಕ್ಸಲರು

ಬೆಂಗಳೂರು, ಜ.8– ಬಂದೂಕಿನ ಮೂಲಕ ನ್ಯಾಯ ಪಡೆಯಲು ಪಶ್ಚಿಮ ಘಟ್ಟದಲ್ಲಿ ದಶಕಗಳ ಕಾಲ ಹೋರಾಟ ನಡೆಸಿದ್ದ 6 ನಕ್ಸಲರು ಶಸ್ತ್ರತ್ಯಾಗ ಮಾಡಿದ್ದಾರೆ. ಮುಖ್ಯವಾಹಿನಿಗೆ ಬರಲು ನಿರ್ಧರಿಸಿ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲೇ ಶರಣಾಗಿದ್ದಾರೆ.

ನಕ್ಸಲರಾದ ಮುಂಡಗಾರು ಲತಾ, ಸುಂದರಿ ಕುತ್ಲೂರು, ವನಜಾಕ್ಷಿ ಬಾಳೆಹೊಳೆ, ಮಾರೆಪ್ಪ ಅರೋಲಿ, ವಸಂತ್, ಜಿಶಾ ಶರಣಾಗಿದ್ದು, ಸಿಎಂ ಎಲ್ಲರಿಗೂ ಸಂವಿಧಾನ ಪುಸ್ತಕ ನೀಡಿದ್ದಾರೆ. ಈ ವೇಳೆ ನಕ್ಸಲರು ಹಲವು ಬೇಡಿಕೆ ಒಳಗೊಂಡ ಮನವಿ ಪತ್ರವನ್ನು ಸಿಎಂಗೆ ನೀಡಿದ್ದಾರೆ. ಈ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಿಎಂ, ಸಂಪುಟದಲ್ಲಿ ಚರ್ಚಿಸಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂಬ ಭರವಸೆ ನೀಡಿದ್ದಾರೆ. ಪೊಲೀಸ್ ಭದ್ರತೆಯೊಂದಿಗೆ ನಕ್ಸಲರನ್ನು ಬೆಂಗಳೂರಿನ ■6ನೇ ಪುಟಕ್ಕೆ

ಶರಣಾದ ನಕ್ಸಲರ ವಿವರ

ಮುಂಡಗಾರು ಲತಾ: ಮೂಲತಃ ಕೊಪ್ಪ ತಾಲೂಕು ಬುಕಡಿಬೈಲು ಮುಂಡಗಾರು ಗ್ರಾಮದ ಮಹಿಳೆ. ಲೋಕಮ್ಮ, ಶ್ಯಾಮಲಾ ಎಂದೂ ಗುರುತಿಸಿಕೊಂಡಿದ್ದ ಈಕೆ ಮಲೆನಾಡು ಭಾಗಗಳಲ್ಲಿ ಲತಾ ಎಂದು ಗುರುತಿಸಿಕೊಂಡಿದ್ದಾರೆ. ಮೋಸ್ಟ್ ವಾಂಟೆಡ್ ಲಿಸ್ಟ್‌ನಲ್ಲಿದ್ದ ನಕ್ಸಲರ ಪೈಕಿ ಮುಂಡಗಾರು ಲತಾ ಕೂಡ ಒಬ್ಬಾಕೆ. ಶೃಂಗೇರಿಯಲ್ಲಿ ಜೆಸಿಬಿಎಂ ಕಾಲೇಜಿನಲ್ಲಿ ಪಿಯುಸಿಗೆ ವಿದ್ಯಾಭ್ಯಾಸ ಮೊಟಕುಗೊಳಿಸಿ ನಕ್ಸಲ್ ನಾಯಕಿಯಾಗಿ ಗುರುತಿಸಿಕೊಂಡರು. ಕುದುರೆಮುಖ ರಾಷ್ಟ್ರೀಯ ಉದ್ಯಾನ ಯೋಜನೆ ವೇಳೆ ಮನೆ ಕಳೆದುಕೊಳ್ಳುವ ಸ್ಥಿತಿ ಬಂದಾಗ, 2000ನೇ ಇಸವಿಯಲ್ಲಿ ಮಾವೋವಾದಿ ಚಳವಳಿಗೆ ಧುಮುಕಿದರು. ಕರ್ನಾಟಕ, ಕೇರಳದಲ್ಲಿ ■6ನೇ ಪುಟಕ್ಕೆ

ಸಂವಿಧಾನದ ಹೊತ್ತಿಗೆ ನೀಡಿ ಸ್ವಾಗತಿಸಿದ ಸಿಎಂ



ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಗೃಹ ಸಚಿವ ಜಿ.ಪರಮೇಶ್ವರ್ ಮತ್ತು ಡಿಜಿಪಿ ಅಲೋಕ್ ಮೋಹನ್ ಸಮ್ಮುಖದಲ್ಲಿ ನಕ್ಸಲರ ಶರಣಾಗತಿ ಪ್ರಕ್ರಿಯೆ ನಡೆಯಿತು.

ಕರ್ನಾಟಕ ನಕ್ಸಲ್ ಮುಕ್ತ ರಾಜ್ಯ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ

ಬೆಂಗಳೂರು, ಜ.8– ಹಿಂಸಾಮಾರ್ಗವನ್ನು ತ್ಯಜಿಸಿ ಸಮಾಜದ ಮುಖ್ಯವಾಹಿನಿಯಲ್ಲಿ ಸೇರಿಕೊಳ್ಳಲು ನಿರ್ಧರಿಸಿರುವ ನಕ್ಸಲ್ ಚಳುವಳಿಗಾರರನ್ನು ಸ್ವಾಗತಿಸುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಅದೇ ವೇಳೆ ಬಿಜೆಪಿ ಶಾಸಕ ಸುನೀಲ್ ಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಶರಣಾದವರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ ಈಡೇರಿಸುವ ಪ್ರಯತ್ನವನ್ನು ನಮ್ಮ ಸರ್ಕಾರ ಪ್ರಾಮಾಣಿಕವಾಗಿ ಮಾಡಲಿದೆ. ಇವರ ವಿರುದ್ಧದ ಪ್ರಕರಣಗಳ ಶೀಘ್ರ ಇತ್ಯರ್ಥಕ್ಕೆ ಅಗತ್ಯವಾದ ಕ್ರಮಗಳನ್ನೂ ನಮ್ಮ ಸರ್ಕಾರ ಕೈಗೊಳ್ಳಲಿದೆ ಎಂದಿದ್ದಾರೆ. ಅನ್ಯಾಯ–ಶೋಷಣೆ ವಿರುದ್ಧದ ಪ್ರಜಾಸತ್ತಾತ್ಮಕವಾಗಿ ನಡೆಸುವ ಹೋರಾಟವನ್ನು ನಾನು ಸದಾ ಗೌರವಿಸುತ್ತಾ ಬಂದವನು. ನಮ್ಮ ಸಂವಿಧಾನದಲ್ಲಿಯೂ ಇದಕ್ಕೆ ಅವಕಾಶ ಇದೆ. ಕಾಡಿನಲ್ಲಿದ್ದುಕೊಂಡು ಶಸ್ತ್ರಾಸ್ತ್ರಗಳ ಮೂಲಕ ಹೋರಾಟ ನಡೆಸುತ್ತಿದ್ದ ನಕ್ಸಲರ ಮನವೊಲಿಸಿ ಅವರನ್ನು ನಾಡಿಗೆ ಕರೆದು ತರುವ ಪ್ರಯತ್ನವನ್ನು ಮುಖ್ಯಮಂತ್ರಿಯಾಗಿದ್ದ ಮೊದಲ ಅವಧಿಯಲ್ಲಿಯೇ ನಮ್ಮ ಸರ್ಕಾರ ಪ್ರಾರಂಭಿಸಿತ್ತು. ಕಳೆದ ಅವಧಿಯಲ್ಲಿ 12 ಮಂದಿ ನಕ್ಸಲರು ಶರಣಾಗಿ ಮುಖ್ಯವಾಹಿನಿ ಸೇರಿಕೊಂಡಿದ್ದರು. ಇದೀಗ ಆರು ಮಂದಿ ನಕ್ಸಲರು ಬಂದಿದ್ದಾರೆ. ■6ನೇ ಪುಟಕ್ಕೆ

ಡಿ.ಕೆ.ಶಿವಕುಮಾರ್ ಸಹನೆ ಕಟ್ಟೆ ಒಡೆಯುವ ಕಾಲ ಸನ್ನಿಹಿತವಾಗಿದೆ!

ಬೆಂಗಳೂರು, ಜ. 8(ಕೆಎಂಶಿ)– ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಹನೆಯ ಕಟ್ಟೆ ಒಡೆಯುವ ಕಾಲ ಸನ್ನಿಹಿತವಾಗಿದೆ ಅನಿಸುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಕ್ರಿಯಿಸಿದ್ದಾರೆ.



ಬೊಮ್ಮಾಯಿ

ಕಾಂಗ್ರೆಸ್‌ನಲ್ಲಿ ಅಭದ್ರತೆ, ಒಳ ಬೇಗುದಿ, ನಿರೀಕ್ಷಿತ ಬೆಳವಣಿಗೆಯಿಂದ ಶಿವಕುಮಾರ್ ತಮ್ಮ ವ್ಯಕ್ತಿತ್ವಕ್ಕೆ ವಿರುದ್ಧವಾಗಿ ಸಹನೆ ಪ್ರದರ್ಶನ ಮಾಡುತ್ತಿದ್ದಾರೆ. ಅದು ಅವರ ಮುತ್ಸದ್ದಿತನವೋ, ಹೈಕಮಾಂಡ್ ಸೂಚನೆಯೋ ಗೊತ್ತಿಲ್ಲ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿವಕುಮಾರ್ ಸಹನೆಯ ಕಟ್ಟೆ ಯಾವಾಗ ಒಡೆಯುತ್ತದೆ ಎನ್ನುವುದು ಮುಖ್ಯ, ಅದರ ಪ್ರಕ್ರಿಯೆಯಂತೂ ಆರಂಭವಾಗಿದೆ, ಕಾಲ ಯಾವಾಗ ಬರುತ್ತದೆ ಕಾದು ನೋಡಬೇಕು ಎಂದರು.

ಕಾಂಗ್ರೆಸ್ ಡಿನ್ನರ್ ಮೀಟಿಂಗ್‌ಗಳು ಆಂತರಿಕ ವಿಚಾರ, ಆ ಬಗ್ಗೆ ವಿಶ್ಲೇಷಣೆ ಮಾಡುವುದಿಲ್ಲ. ಬಿಜೆಪಿಯಲ್ಲೂ ಆಗಾಗ ಒಟ್ಟಿಗೆ ಊಟ ಮಾಡುತ್ತೇವೆ, ಅದರಲ್ಲಿ ಮಹತ್ವ ಏನೂ ಇಲ್ಲ. ಬಿಜೆಪಿಯಲ್ಲಿನ ಗೊಂದಲಗಳ ಬಗ್ಗೆ ಪಕ್ಷದ ಹೈಕಮಾಂಡ್ ಗಮನ ಹರಿಸಿದೆ, ■6ನೇ ಪುಟಕ್ಕೆ

ಕಾಂಗ್ರೆಸ್ ಮನೆಯಲ್ಲಿ ಕಲಹ

- ಡಿನ್ನರ್ ಮೀಟಿಂಗ್‌ಗೆ ಹೈಕಮಾಂಡ್ ಬ್ರೇಕ್ ಹಾಕಿದ್ದಕ್ಕೆ ಅಹಿಂದ ನಾಯಕರ ಅಸಮಾಧಾನ
- ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ಪರೋಕ್ಷ ವಾಗ್ದಾಳಿ

ಬೆಂಗಳೂರಿ, ಜ.8–ಗೃಹ ಸಚಿವ ಡಾ.ಜಿ.ಪರಮೇಶ್ವರ್ ಆಯೋಜಿಸಿದ್ದ ಡಿನ್ನರ್ ಮೀಟಿಂಗ್‌ಗೆ ಕಾಂಗ್ರೆಸ್ ಹೈಕಮಾಂಡ್ ಬ್ರೇಕ್ ಹಾಕಿದ ಹಿನ್ನೆಲೆಯಲ್ಲಿ ಸಚಿವರಾದ ಕೆ.ಎನ್.ರಾಜಣ್ಣ, ಸತೀಶ್ ಜಾರಕಿಹೊಳಿ, ಡಾ.ಜಿ.ಪರಮೇಶ್ವರ್ ಅವರು ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಪರೋಕ್ಷವಾಗಿ ಕಿಡಿಕಾರಿದ್ದಾರೆ.

ಈ ಕುರಿತು ತುಮಕೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕೆ.ಎನ್.ರಾಜಣ್ಣ, ಡಿ.ಕೆ.ಶಿವಕುಮಾರ್ ಬೇಜಾರಾಗಲು ನಾವು ಅವರ ಆಸ್ತಿ ಏನಾದರೂ ಬರೆಸಿಕೊಂಡಿದ್ದೇವಾ? ಇದೆಲ್ಲ ಸುಮ್ಮನೆ ಅಷ್ಟೇ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ಬಹಿರಂಗವಾಗಿಯೇ ಕೋಪ ಹೊರಹಾಕಿದ್ದಾರೆ.

ಡಿನ್ನರ್ ಪಾರ್ಟಿ ಕ್ಯಾನ್ಸಲ್ ಆಗಿಲ್ಲ ಮುಂದೂಡಿದ್ದೇವೆ ಅಷ್ಟೇ. ಕಾಂಗ್ರೆಸ್ ಹೈಕಮಾಂಡ್ ಮೊನ್ನೆ ನಡೆದಿರುವ ಡಿನ್ನರ್ ಪಾರ್ಟಿ ಬಗ್ಗೆ ಗೊಂದಲ ಆಗಿದೆ. ಆ ಗೊಂದಲದ ಜೊತೆಗೆ ಇನ್ನೊಂದು ಗೊಂದಲ ಆಗುವುದು ಬೇಡ. ಅದನ್ನು ಮುಂದೂಡಬೇಕು ಎಂದು ಹೇಳಿದೆ, ಅದಕ್ಕೆ ಮುಂದೂಡಿದ್ದೇವೆ ಎಂದರು.



ಡಾ.ಜಿ.ಪರಮೇಶ್ವರ್



ಕೆ.ಎನ್.ರಾಜಣ್ಣ



ಸತೀಶ್ ಜಾರಕಿಹೊಳಿ

ನಮ್ಮ ಊಟ, ನಮ್ಮ ಅಜೆಂಡಾ, ಬೇರೆಯವರಿಗೆ ಆತಂಕ ಏಕೆ?: ನಮ್ಮ ಊಟ, ನಮ್ಮ ಅಜೆಂಡಾ, ಬೇರೆಯವರಿಗೆ ಆತಂಕ ಏಕೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಪರೋಕ್ಷವಾಗಿ ಟಾಂಗ್ ಕೊಟ್ಟಿದ್ದಾರೆ. ನಾವು ಸಭೆ ಮಾಡಬಹುದು. ಅದನ್ನು ಯಾರೂ ತಡೆಯಲು ಸಾಧ್ಯವಿಲ್ಲ. ನಾವು ಸಭೆ ಮಾಡಬೇಕು ಎಂದೇನಿಲ್ಲಾ, ಸಮಾನಮನಸ್ಕರು ದೂರವಾಣಿ ಮೂಲಕ ಮಾತನಾಡಿ ನಮ್ಮ ಅಜೆಂಡಾ ನಿರ್ಧರಿಸಬಹುದು, ಇದಕ್ಕೆ ಯಾರ ಅಪ್ಪಣೆಯೂ ಬೇಕಿಲ್ಲ ಎಂದರು.

ಡಿನ್ನರ್ ಮೀಟಿಂಗ್ ಹೊಸದೇನಲ್ಲ, ಇದು ನಡೆಯುತ್ತಲೇ ಇರುತ್ತದೆ. ಸಭೆ ಮಾಡಿದಾಕ್ಷಣ ನಮ್ಮಲ್ಲಿ ಮುಸುಕಿನ ಗುದ್ದಾಟ ಇದೆ ಎಂದಲ್ಲ. ನಾವು ಸಭೆ ಸೇರುತ್ತಿದ್ದುದು, ಪರಿಶಿಷ್ಟ ಜಾತಿ ಮತ್ತು ಜನಾಂಗಕ್ಕೆ ಆಗಿರುವ ಅನ್ಯಾಯ ಮತ್ತು ಅವರ ಶ್ರೇಯೋಭಿವೃದ್ಧಿಗೆ ಹೊಸ ಕಾರ್ಯಕ್ರಮ ರೂಪಿಸುವ ಉದ್ದೇಶದಿಂದ. ಅಹಿಂದ ಶಕ್ತಿಯನ್ನೇ ಇಟ್ಟುಕೊಂಡು ನಾವು ರಾಜಕೀಯ ಮಾಡಬೇಕಾಗುತ್ತದೆ. ಇಲ್ಲದಿದ್ದರೆ, ಅಧಿಕಾರವನ್ನು ಪಡೆದುಕೊಳ್ಳುವವರೇ ಪಡೆದುಕೊಳ್ಳುತ್ತಿರುತ್ತಾರೆ. ಮುಂದೆ ಪಕ್ಷದ ವರಿಷ್ಠರ ಗಮನಕ್ಕೆ ತಂದು ಅನುಮತಿ ಪಡೆದೇ ಸಭೆ ಮಾಡಬಹುದು, ನಾವೆಲ್ಲಾ ಒಂದೇ ಪಕ್ಷದಲ್ಲಿದ್ದೇವೆ, ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ನಾವು ಜಿಲ್ಲಾ ಪ್ರವಾಸ ಕೈಗೊಂಡಾಗ ಸ್ಥಳೀಯ ಶಾಸಕರು ಸಮಸ್ಯೆಗಳನ್ನು ಹೇಳುತ್ತಾರೆ. ಅವರ ಸಮಸ್ಯೆಗಳಿಗೆ ಸ್ಪಂದಿಸುವುದು ನಮ್ಮ ಕರ್ತವ್ಯವಲ್ಲವೆ ಎಂದು ಪ್ರಶ್ನಿಸಿದರು.

ಸಭೆ ನಡೆಸಿದರೆ ಅವರು ಮುಕ್ತವಾಗಿ ಚರ್ಚೆ ಮಾಡುತ್ತಾರೆ. ಸಮುದಾಯಕ್ಕೆ ಏನಾಗಬೇಕು ಎಂದು ಹೇಳುತ್ತಾರೆ. ನಾವು ಒಟ್ಟಾಗಿದ್ದರೆ ಸಮಸ್ಯೆಗಳು ತ್ವರಿತವಾಗಿ ಬಗೆಹರಿಯುತ್ತವೆ. ಇದೇ ಉದ್ದೇಶಕ್ಕಾಗಿ ಪರಮೇಶ್ವರ್ ಅವರು ಔತಣಕೂಟದ ಸಭೆ ಆಯೋಜಿಸಿದ್ದರು, ಆದರೆ, ಪಕ್ಷದ ವರಿಷ್ಠರು ಬೇರೆ ■6ನೇ ಪುಟಕ್ಕೆ

ಯುಜಿಸಿ ನಿಯಮಗಳಿಗೆ ತಿದ್ದುಪಡಿ;ರಾಜ್ಯಪಾಲರೇ ಸುಪ್ರಿಂ

ಮುಖ್ಯಮಂತ್ರಿ ಸಿದ್ದರಾಮಯ್ಯ ಖಂಡನೆ

ಬೆಂಗಳೂರು, ಜ.8–ವಿಶ್ವವಿದ್ಯಾಲಯ ಧನಸಹಾಯ ಆಯೋಗದ (ಯುಜಿಸಿ) ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಿ, ರಾಜ್ಯದ ವಿಶ್ವವಿದ್ಯಾಲಯಗಳ ಉಪಕುಲಪತಿಗಳ ನೇಮಕಾತಿಗೆ ಸಂಬಂಧಿಸಿದಂತೆ ರಾಜ್ಯಪಾಲರಿಗೆ ಸರ್ವಾಧಿಕಾರ ನೀಡಿ ರಾಜ್ಯ ಸರ್ಕಾರಗಳ ಅಧಿಕಾರವನ್ನು ಕಿತ್ತುಕೊಳ್ಳಲು ಹೊರಟಿರುವ ಕೇಂದ್ರ ಸರ್ಕಾರದ ಕ್ರಮ ಖಂಡನೀಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ರಾಜ್ಯ ಸರ್ಕಾರಗಳ ಅಧಿಕಾರವನ್ನು ಮೊಟಕುಗೊಳಿಸುವ ಸಣ್ಣ ಅವಕಾಶವನ್ನೂ ಬಿಟ್ಟುಕೊಡದ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರದ ಎನ್‌ಡಿಎ ಸರ್ಕಾರದ ಕಣ್ಣು ಈಗ ರಾಜ್ಯದ ವಿಶ್ವವಿದ್ಯಾಲಯಗಳ ಮೇಲೆ ಬಿದ್ದಿದೆ. ಯುಜಿಸಿ ನೇಮಕಾತಿಗೆ ಸಂಬಂಧಿಸಿದಂತೆ ಬಿಡುಗಡೆ ಮಾಡಲಾದ ಕರಡು ನಿಯಮಾವಳಿಗಳನ್ನು ನಮ್ಮ ಸರ್ಕಾರ ಪರಿಶೀಲಿಸಿ, ಇದರ ವಿರುದ್ಧ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಯೋಚನೆ ಮಾಡಲಾಗುವುದು. ಈಗಿರುವ ನಿಯಮಾವಳಿಗಳ ಪ್ರಕಾರ ಉಪಕುಲಪತಿಗಳ ನೇಮಕಾತಿಗೆ ರಾಜ್ಯ ಸರ್ಕಾರ ಶೋಧನಾ ಸಮಿತಿಯನ್ನು ರಚಿಸುತ್ತಿತ್ತು. ಅದರಲ್ಲಿ ಕುಲಾಧಿಪತಿಗಳಾಗಿರುವ ರಾಜ್ಯಪಾಲರು ಶಿಫಾರಸು ಮಾಡುವ ವ್ಯಕ್ತಿಗಳು ಕೂಡಾ ಸದಸ್ಯರಾಗಿರುತ್ತಿದ್ದರು. ಹೊಸ ನಿಯಮಗಳ ಪ್ರಕಾರ ರಾಜ್ಯಪಾಲರು ಸೂಚಿಸುವ ವ್ಯಕ್ತಿಯೇ ಶೋಧನಾ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಇದು ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರದ ಮೇಲಿನ ನೇರ ಸವಾರಿಯಾಗಿದೆ.

ರಾಜ್ಯದ ವಿಶ್ವವಿದ್ಯಾಲಯಗಳ ಕುಲಪತಿಗಳ ನೇಮಕಾತಿಗಾಗಿ ರಾಷ್ಟ್ರಮಟ್ಟದ ಪತ್ರಿಕೆಗಳಲ್ಲಿ ಜಾಹೀರಾತು ನೀಡಿ ಅರ್ಜಿಗಳನ್ನು ಆಹ್ವಾನಿಸಬೇಕೆಂದು ಯುಜಿಸಿ ಹೊಸ ನಿಯಮಾವಳಿಗಳು ಹೇಳುತ್ತಿದೆ. ಇಲ್ಲಿಯವರೆಗೆ ಆಯಾ ರಾಜ್ಯಗಳ ವಿದ್ವಾಂಸರಿಗಷ್ಟೇ ಸೀಮಿತವಾಗಿದ್ದ ಕುಲಪತಿ ಹುದ್ದೆ ಹೊಸ ನಿಯಮಗಳು ಜಾರಿಗೆ ಬಂದರೆ ರಾಜ್ಯದ ವಿಶ್ವವಿದ್ಯಾಲಯಗಳ ಉಪಕುಲಪತಿಗಳ ಸ್ಥಾನದಲ್ಲಿ ಅನ್ಯಭಾಷಿಕರು ಬಂದು ಕೂರುವ ಅಪಾಯ ಇದೆ. ■6ನೇ ಪುಟಕ್ಕೆ

ಮಕರ ಸಂಕ್ರಾಂತಿಗೆ ವಿಶೇಷ ರೈಲು



ಬೆಂಗಳೂರು, ಜ.8–ಮಕರ ಸಂಕ್ರಾಂತಿ ಪೊಂಗಲ್ ಹಬ್ಬದ ಸಮಯದಲ್ಲಿ ಪ್ರಯಾಣಿಕರ ದಟ್ಟಣೆಯನ್ನು ನಿರ್ವಹಿಸಲು ಕೆಎಸ್‌ಆರ್ ಬೆಂಗಳೂರು ಹಾಗೂ ಡಾ ಎಂಜಿಆರ್ ಚೆನ್ನೈ ಸೆಂಟ್ರಲ್ ನಿಲ್ದಾಣಗಳ ನಡುವೆ ವಿಶೇಷ ಎಕ್ಸ್‌ಪ್ರೆಸ್ ರೈಲುಗಳನ್ನು ನೈಋತ್ಯ ರೈಲ್ವೆ ಘೋಷಿಸಿದೆ. ಬೆಂಗಳೂರು, ತೂತುಕುಡಿ, ಮೈಸೂರು ಮಧ್ಯೆಯೂ ವಿಶೇಷ ರೈಲು ವ್ಯವಸ್ಥೆ ಮಾಡಿದೆ. ರೈಲು ಸಂಖ್ಯೆ 06570 ಜ.11 ರಂದು ಮಧ್ಯಾಹ್ನ 01:00ಕ್ಕೆ ತೂತುಕುಡಿಯಿಂದ ಹೊರಟು ಜನವರಿ 12 ರಂದು ಬೆಳಿಗ್ಗೆ 06:30ಕ್ಕೆ ಮೈಸೂರಿಗೆ ತಲುಪಲಿದೆ.

ಈ ರೈಲು ಕೋವಿಲಟ್ರಿ, ಸಾತೂರ್, ವಿರುಡುನಗರ, ಮಧುರೈ, ದಿಂಡಿಗಲ್, ಕರೂರ್, ನಾಮಕ್ಕಲ್, ಸೇಲಂ, ಬಂಗಾರಪೇಟೆ, ಕೃಷ್ಣರಾಜಪುರಂ, ಕೆಎಸ್‌ಆರ್ ಬೆಂಗಳೂರು ಮತ್ತು ಮಂಡ್ಯ ನಿಲ್ದಾಣಗಳಲ್ಲಿ ನಿಲುಗಡೆ ಹೊಂದಿರಲಿದೆ.


ರಸ್ತೆ ಅಪಘಾತದ ಗಾಯಾಳುಗಳಿಗೆ 'ನಗದು ರಹಿತ ಚಿಕಿತ್ಸೆ' ಯೋಜನೆ ಘೋಷಿಸಿದ ನಿತಿನ್ ಗಡ್ಕರಿ

- 2024ರ ಸಾಲಿನಲ್ಲಿ 1.84 ಲಕ್ಷ ಮಂದಿ ಅಪಘಾತದಲ್ಲಿ ಸಾವು; ಅವರಲ್ಲಿ ಶೇ.66ರಷ್ಟು ಯುವಕರು
- ಹೆಲ್ಮೆಟ್ ಧರಿಸದೇ ಮೃತಪಟ್ಟವರು 30 ಸಾವಿರ ಜನ; ಶಾಲೆ–ಕಾಲೇಜು ದ್ವಾರದಲ್ಲೇ 10 ಸಾವಿರ ಮಕ್ಕಳು ಬಲಿ

ನವದೆಹಲಿ, ಜ.8– ರಸ್ತೆ ಅಪಘಾತದಲ್ಲಿ ಗಾಯಗೊಂಡವರಿಗೆ 'ನಗದು ರಹಿತ ಚಿಕಿತ್ಸೆಯೋಜನೆಯನ್ನು ಕೇಂದ್ರದ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಘೋಷಿಸಿದ್ದಾರೆ. ಇದರಡಿ, ಅಪಘಾತದಲ್ಲಿ ಗಾಯಗೊಂಡವರಿಗೆ 7 ದಿನಗಳ ಕಾಲ 1.5 ಲಕ್ಷದವರೆಗೆ ನಗದು ರಹಿತವಾಗಿ ಚಿಕಿತ್ಸೆ ನೀಡಲಾಗುತ್ತದೆ. ಅಪಘಾತ ಸಂಭವಿಸಿದ 24 ಗಂಟೆಗಳೊಳಗಾಗಿ ಪೊಲೀಸರು ಸಂಬಂಧಪಟ್ಟ ಸರ್ಕಾರಿ ಅಧಿಕಾರಿಗಳಿಗೆ ತಿಳಿಸಬೇಕು ಎಂದಿದ್ದಾರೆ. ಅಲ್ಲದೆ, ಹಿಟ್ ಅಂಡ್ ರನ್ ಪ್ರಕರಣಗಳಲ್ಲಿ ಮೃತಪಟ್ಟವರ ಕುಟುಂಬಕ್ಕೂ 2 ಲಕ್ಷ ಪರಿಹಾರ ನೀಡುವುದಾಗಿ ಗಡ್ಕರಿ ಘೋಷಿಸಿದ್ದಾರೆ.



ನಿತಿನ್ ಗಡ್ಕರಿ



ಅಪಘಾತ ಸಂಭವಿಸಿದ 24 ಗಂಟೆಗಳೊಳಗೆ ಗಾಯಾಳುಗಳ ಚಿಕಿತ್ಸೆಗೆ ನಾವು ನಗದು ರಹಿತ ಚಿಕಿತ್ಸೆಯ ಹೊಸ ಯೋಜನೆ ಆರಂಭಿಸಿದ್ದೇವೆ. ಪೊಲೀಸರಿಂದ ಮಾಹಿತಿ ಬಂದ ಕೂಡಲೇ 1.6 ಲಕ್ಷದವರೆಗೆ ನಾವು 7 ದಿನಗಳ ಚಿಕಿತ್ಸೆಗೆ ಹಣ ಒದಗಿಸಲಿದ್ದೇವೆ. ಹಿಟ್ ಅಂಡ್ ರನ್ ಪ್ರಕರಣಗಳಲ್ಲಿ ಮೃತಪಟ್ಟವರ ಕುಟುಂಬಕ್ಕೂ ತಲಾ 2 ಲಕ್ಷ ಪರಿಹಾರ ನೀಡುತ್ತೇವೆ ಎಂದು ಗಡ್ಕರಿ ಹೇಳಿದ್ದಾರೆ. ರಸ್ತೆ ಸುರಕ್ಷತೆಯು ಸರ್ಕಾರದ ಅತ್ಯುನ್ನತ ಆದ್ಯತೆಯಾಗಿದೆ. 2024ರಲ್ಲಿ 1.84 ಲಕ್ಷ ಮಂದಿ ಜೀವ ಕಳೆದುಕೊಂಡಿದ್ದಾರೆ ಎಂಬ ಆಘಾತಕಾರಿ ಅಂಕಿ–ಅಂಶ ಉಲ್ಲೇಖಿಸಿದ ಅವರು, 30,000 ಮಂದಿ ಹೆಲ್ಮೆಟ್ ಧರಿಸದೇ ಮೃತಪಟ್ಟಿದ್ದಾರೆ. ಅಪಘಾತಕ್ಕೀಡಾದವರಲ್ಲಿ ಶೇ.66ರಷ್ಟು ಮಂದಿ 18ರಿಂದ 34 ವರ್ಷ ವಯಸ್ಸಿನವರು ಎಂದರು.

ಶಾಲೆ ಮತ್ತು ಕಾಲೇಜುಗಳ ಪ್ರವೇಶ ಮತ್ತು ನಿರ್ಗಮನ ದ್ವಾರಗಳಲ್ಲಿ ಸೂಕ್ತ ವ್ಯವಸ್ಥೆ ಇಲ್ಲದೆ 10,000 ಮಕ್ಕಳು ಮೃತಪಟ್ಟಿದ್ದಾರೆ ಎಂದು ಗಡ್ಕರಿ ಹೇಳಿದರು. ಶಾಲಾ ಬಸ್ ಮತ್ತು ಆಟೋಗಳಿಗೂ ನಿಯಮ ರೂಪಿಸಲಾಗಿದೆ ಎಂದು ಹೇಳಿದರು. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸಾರಿಗೆ ಸಚಿವರ ಜೊತೆಗಿನ ಸಭೆ ಬಳಿಕ ಗಡ್ಕರಿ ಈ ಘೋಷಣೆಗಳನ್ನು ಮಾಡಿದ್ದಾರೆ.

ತಿರುಪತಿಯಲ್ಲಿ ಕಾಲ್ತುಳಿತ; 7 ಮಂದಿ ದುರ್ಮರಣ

ತಿರುಪತಿ, ಜ.8–ಪ್ರಸಿದ್ಧ ಯಾತ್ರಾಸ್ಥಳ ತಿರುಪತಿ ದೇವಸ್ಥಾನದ 'ವೈಕುಂಠ ದ್ವಾರ ದರ್ಶನ'ದ ಟೋಕನ್ ಪಡೆದುಕೊಳ್ಳುವ ಸಂದರ್ಭದಲ್ಲಿ ಬುಧವಾರ (ಜ.8) ರಾತ್ರಿ ಸಂಭವಿಸಿದ ಕಾಲ್ತುಳಿತದಲ್ಲಿ ಏಳು ಮಂದಿ ಮೃತಪಟ್ಟಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಹಲವರು ಗಂಭೀರವಾಗಿ ಗಾಯಗೊಂಡಿದ್ದು, ಸಾವಿನ ಸಂಖ್ಯೆ ಏರಿಕೆಯಾಗುವ ಸಾಧ್ಯತೆ ಇದೆ.

ವೈಕುಂಠ ದ್ವಾರ ದರ್ಶನ ಟಿಕೆಟ್‌ಗಾಗಿ ಸುಮಾರು 4 ಸಾವಿರಕ್ಕೂ ಹೆಚ್ಚು ಭಕ್ತರು ಮುಂಜಾನೆಯಿಂದಲೇ ವಿವಿಧ ಟಿಕೆಟ್ ಕೇಂದ್ರಗಳಲ್ಲಿ ಸರತಿ ಸಾಲಿನಲ್ಲಿ ನಿಂತಿದ್ದರು. ಟೋಕನ್ ವಿತರಣೆಗಾಗಿ ಬೈರಾಗಿ ಪಟ್ಟಿಡಾ ಪಾರ್ಕ್‌ನಲ್ಲಿ ಭಕ್ತರು ಸರತಿ ಸಾಲಿನಲ್ಲಿ ನಿಲ್ಲಲು ಅವಕಾಶ ನೀಡಿದಾಗ ಕಾಲ್ತುಳಿತ ಸಂಭವಿಸಿದೆ ಎಂದು ವರದಿಯಾಗಿದೆ. ಭಾರೀ ಸಂಖ್ಯೆಯಲ್ಲಿ ಭಕ್ತರು ಟೋಕನ್ ಪಡೆಯಲು ಯತ್ನಿಸಿದಾಗ ■6ನೇ ಪುಟಕ್ಕೆ

ಮೈಸೂರು ಜೈಲಿನಲ್ಲಿ ರಸಾಯನಿಕ ಸೇವಿಸಿ ಮೂವರು ಕೈದಿಗಳು ಸಾವು

ಮೈಸೂರು, ಜ.8(ಆರ್‌ಕೆ)– ಕೇಕ್ ತಯಾರಿಸಲು ಬಳಸುವ ರಸಾಯನಿಕ (ಎಸೆನ್ಸ್) ಸೇವಿಸಿ ಅಸ್ವಸ್ಥರಾಗಿದ್ದ ಮೈಸೂರು ಕೇಂದ್ರ ಕಾರಾಗೃಹದ ಮೂವರು ಕೈದಿಗಳು ಸಾವನ್ನಪ್ಪಿದ್ದಾರೆ.

ಕೊಳ್ಳೇಗಾಲದ ನಾಗರಾಜ್, ಹಾಸನದ ರಮೇಶ್ ಹಾಗೂ ಸಾತಗಳ್ಳಿಯ ಮಾದೇಶ್ ಸಾವನ್ನಪ್ಪಿದ ಕೈದಿಗಳು. ಕೊಲೆ ಪ್ರಕರಣದಲ್ಲಿ ರಮೇಶ್, ಮಾದೇಶ್ ಹಾಗೂ ಅತ್ಯಾಚಾರ ಪ್ರಕರಣದಲ್ಲಿ ನಾಗರಾಜ್ ಜೀವಾವಧಿ ಶಿಕ್ಷೆಗೊಳಗಾಗಿ ಮೈಸೂರು ಜೈಲಿನಲ್ಲಿದ್ದರು. ಜೈಲಿನ ಒಳಗೆ ಬೇಕರಿ ಉತ್ಪನ್ನ ತಯಾರಿಸುವ ಘಟಕದಲ್ಲಿ ಕೇಕ್ ತಯಾರಿಸುವ ಕೆಲಸ ನಿರ್ವಹಿಸುತ್ತಿದ್ದ ಈ ಮೂವರು ಅಪರಾಧಿಗಳು ಕಳೆದ ಎರಡೂವರೆ ವರ್ಷಗಳಿಂದ ಉತ್ತಮ ಗುಣಮಟ್ಟದ ಕೇಕ್ ಸಿದ್ಧಪಡಿಸುತ್ತಿದ್ದರು. 2024ರ ಡಿಸೆಂಬರ್ 28ರಂದು ಹೊಸ ವರ್ಷಕ್ಕೆ ಕೇಕ್ ತಯಾರಿಸುತ್ತಿದ್ದಾಗ ಅದಕ್ಕೆ ಬಳಸುವ ದ್ರವ ರೂಪದ ಎಸೆನ್ಸ್ (ರಸಾಯನಿಕ)ವನ್ನು ಸೇವಿಸಿ ಅಸ್ವಸ್ಥರಾಗಿದ್ದ ಮೂವರನ್ನು ಜೈಲಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಬಳಿಕ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತು.


ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿದ್ದ ಕೈದಿಗಳ ಪೈಕಿ ಚಿಕಿತ್ಸೆ ಫಲಕಾರಿಯಾಗದೆ ನಿನ್ನೆ ಮುಂಜಾನೆ ಮಾದೇಶ್, ನಾಗರಾಜ್ ಮತ್ತು ರಮೇಶ್ ಇಂದು ಬೆಳಗ್ಗೆ ಕೊನೆಯುಸಿರೆಳೆದರು. ಪ್ರಕರಣ ದಾಖಲಿಸಿಕೊಂಡಿರುವ ಮಂಡಿ ಠಾಣೆ ಇನ್‌ಸ್ಪೆಕ್ಟರ್ ನಾಗೇಶ್, ಇಂದು ಮಧ್ಯಾಹ್ನ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ದೇಹಗಳನ್ನು ವಾರಸುದಾರರಿಗೆ ಒಪ್ಪಿಸಿದರು. ಬೇಕರಿ ಉತ್ಪನ್ನ ಘಟಕದಲ್ಲಿ ಹೊಸ ವರ್ಷಕ್ಕೆ ಕೇಕ್ ತಯಾರಿಸುವಲ್ಲಿ ನಿರತರಾಗಿದ್ದ ಮಾದೇಶ್, ನಾಗರಾಜ್ ಮತ್ತು ರಮೇಶ್ ಟೇಸ್ಟ್ ಬರಲೆಂದು ಬಳಸುವ ಎಸೆನ್ಸ್ ಕುಡಿದು ತೀವ್ರ ಹೊಟ್ಟೆನೋವಿನಿಂದ ಬಳಲುತ್ತಿದ್ದರು. ಆಸ್ಪತ್ರೆಗೆ ದಾಖಲಾಗಿ ಮೂರು ದಿನಗಳಾದರೂ ಚಿಕಿತ್ಸೆಗೂ ಸ್ಪಂದಿಸದ ಕಾರಣ ವೈದ್ಯರು ಏನಾಯಿತು ಎಂದು ಕೇಳಿದಾಗ ನಾವು ಎಸೆನ್ಸ್ ರಸಾಯನಿಕ ಕುಡಿದಿದ್ದೆವು ಎಂದು ಮಾದೇಶ ನಿಜ ಬಾಯ್ಬಿಟ್ಟಿದ್ದರು. ವೈದ್ಯರು ಚಿಕಿತ್ಸೆ ನೀಡುತ್ತಿದ್ದರಾದರೂ ಅಷ್ಟರಲ್ಲಿ ಮೂವರ ದೇಹದಾದ್ಯಂತ ವಿಷ ಪ್ರಸರಿಸಿ ಚಿಕಿತ್ಸೆ ಫಲಕಾರಿಯಾಗದೇ ಅಸುನೀಗಿದ್ದಾರೆ ಎಂದು ಪ್ರಕರಣ ದಾಖಲಿಸಿಕೊಂಡಿರುವ ಮಂಡಿ ಠಾಣೆ ಪೊಲೀಸರು ತಿಳಿಸಿದ್ದಾರೆ. ತಾವು ಕುಡಿದಿರುವುದು ದ್ರವರೂಪದ ಎಸೆನ್ಸ್ ಎಂದು ಮೊದಲೇ ಹೇಳಿದ್ದರೆ ಚಿಕಿತ್ಸೆ ನೀಡಿ ಗುಣಪಡಿಸಬಹುದಿತ್ತು. ಆದರೆ, ಸತ್ಯ ಮರೆಮಾಚಿದ್ದರಿಂದ ಪರಿಸ್ಥಿತಿ ಗಂಭೀರವಾಗಿ ಸಾವನ್ನಪ್ಪಲು ಕಾರಣವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕಾರಾಗೃಹಗಳ ಡಿಐಜಿ ದಿವ್ಯಶ್ರೀ ಅವರು ವಿಷಯ ತಿಳಿಯುತ್ತಿದ್ದಂತೆಯೇ ಮೈಸೂರು ಜೈಲು ಮತ್ತು ಕೆ.ಆರ್.ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿದರು. ಆರಂಭದಲ್ಲೇ ನಿಜ ಹೇಳಿದ್ದರೆ ಚಿಕಿತ್ಸೆ ನೀಡಿ ಮೂವರ ಪ್ರಾಣ ಉಳಿಸಬಹುದಾಗಿತ್ತು. ಆದರೆ ಈಗ ಕಾಲ ಮಿಂಚಿರುವುದರಿಂದ ಪರಿಸ್ಥಿತಿ ಕೈ ಮೀರಿದೆ ಎಂದು ಮುಖ್ಯ ಜೈಲು ಅಧೀಕ್ಷಕ ರಮೇಶ್ ತಿಳಿಸಿದ್ದಾರೆ.



ಮೈಸೂರು ಮಿತ್ರ ಗುರುವಾರ 9 ಜನವರಿ 2025

ನಾಳೆ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ವೈಕುಂಠ ಏಕಾದಶಿ

ಮೈಸೂರು, ಜ.8–ನಗರದ ಕಾಳಿದಾಸ ರಸ್ತೆಯಲ್ಲಿರುವ ಇತಿಹಾಸ ಪ್ರಸಿದ್ಧ ಶ್ರೀ ಯದುಗಿರಿ ಯತಿರಾಜ ಮಠ ಇದರ ಶಾಖಾ ಮಠ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ಜ.10ರಂದು ಶುಕ್ರವಾರ ವೈಕುಂಠ ಏಕಾದಶಿಯನ್ನು ಆಯೋಜಿಸಲಾಗಿದ್ದು, ಬೆಳಗ್ಗೆ 7 ಗಂಟೆಗೆ ವೈಕುಂಠ ದ್ವಾರ ತೆರೆಯಲಾಗುತ್ತದೆ. ರಾತ್ರಿ 10 ಗಂಟೆವರೆಗೂ ಭಗವಂತನ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದರ ಜೊತೆಗೆ ವಿಷ್ಣು ಸಹಸ್ರನಾಮ, ಸಾಮೂಹಿಕ ಪಾರಾಯಣ, ಮಹಾಮಂಗಳಾರತಿ, ತೀರ್ಥ ಪ್ರಸಾದ ನಡೆಯಲಿದೆ ಎಂದು ದೇವಸ್ಥಾನದ ಮುಖ್ಯಸ್ಥ ಕೆ.ಆರ್.ಯೋಗಾ ನರಸಿಂಹನ್ (ಮುರುಳಿ ಅಯ್ಯಂಗಾರ್) ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊಬೈಲ್ 9342188323 ಅಥವಾ 7598832271 ಸಂಪರ್ಕಿಸಬಹುದು.





ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ: ಮೈಸೂರಿನ ಹಳೇ ಬಂಡಿಕೇರಿಯಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಜ.10ರಂದು ವೈಕುಂಠ ಏಕಾದಶಿ ಪ್ರಯುಕ್ತ ಬೆಳಗ್ಗೆ 6ರಿಂದ ರಾತ್ರಿ 11 ಗಂಟೆವರೆಗೆ ವಿಶೇಷ ಕಾರ್ಯಕ್ರಮ ನಡೆಯಲಿದೆ. ಅಂದು ದೇವರಿಗೆ ವಿಶೇಷ ಹೂವಿನ ಅಲಂಕಾರ, ಸಂಕಲ್ಪ ಅರ್ಚನೆ, ಕೊಡಾರೋತ್ಸವ, ಅಷ್ಟಾವದಾನ, ನೈವೇದ್ಯ, ಮಹಾಮಂಗಳಾರತಿ ನಡೆಯಲಿದೆ.

ವಿಧಾನಪರಿಷತ್ ಸದಸ್ಯ ಸಿ.ಟಿ.ರವಿಗೆ ನೈಟ್ ರೌಂಡ್ಸ್ ಕಿರುಕುಳ ಪ್ರಕರಣ

ಸಂಬಂಧಿಸಿದ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಸಿಎಂಗೆ ರಾಜ್ಯಪಾಲರ ಸೂಚನೆ

ಬೆಂಗಳೂರು,ಜ.8(ಕೆಎಂಶಿ)–ಬೆಳಗಾವಿಯ ಸುವರ್ಣ ಸೌಧದಲ್ಲಿ ಬಿಜೆಪಿಯ ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಅವರನ್ನು ಪೊಲೀಸರು ಬಂಧಿಸಿ, ರಾತ್ರಿಯಿಡೀ ಸುತ್ತಾಡಿಸಿ ಹಿಂಸೆ ನೀಡಿರುವ ಘಟನೆಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರವಿ ಅವರ ದೂರಿನ ಆಧಾರದ ಮೇಲೆ ರಾಜ್ಯಪಾಲರು ಡಿಸೆಂಬರ್ 31ರಂದು ಮುಖ್ಯಮಂತ್ರಿ ಅವರಿಗೆ ಪತ್ರ ಬರೆದು, ನೀವೇ ಖುದ್ದಾಗಿ ಮಧ್ಯೆ ಪ್ರವೇಶಿಸಿ, ಪೊಲೀಸ್ ಅಧಿಕಾರಿಗಳ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಿ ಎಂದು ಆದೇಶಿಸಿದ್ದಾರೆ. ಬಂಧನದ ನಂತರ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಬದಲು ಇಡೀ ರಾತ್ರಿ 400 ಕಿಲೋ ಮೀಟರ್ ಸುತ್ತಾಡಿಸುವ ಔಚಿತ್ಯವೇನಿತ್ತು. ನಾಲ್ಕು ಜಿಲ್ಲೆಗಳ ವ್ಯಾಪ್ತಿಯಲ್ಲಿ ಇವರನ್ನು ಸುತ್ತಾಡಿಸಿದ್ದಲ್ಲದೆ, ಕಬ್ಬಿನ ಗದ್ದೆ, ಬಯಲು ಪ್ರದೇಶ ಹಾಗೂ ಕ್ರಶರ್ ಪ್ರದೇಶಗಳಿಗೆ ಕೊಂಡೊಯ್ದಿದ್ದು ಏಕೆ. ಬಂಧನ ಸಮಯದಲ್ಲಿ ಅವರ





ತಲೆಗೆ ಪೆಟ್ಟಾಗಿ ರಕ್ತ ಸುರಿದಿದೆ, ಇದಕ್ಕೆ ಕಾರಣರಾರು. ಬೆಳಗಾವಿ ಪೊಲೀಸ್ ಆಯುಕ್ತ ಹಾಗೂ ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ ಹಿರಿಯ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು. ಘಟನೆ ನಡೆದು ಎರಡು–ಮೂರು ವಾರ ಕಳೆದರೂ ಲೋಪ ಎಸಗಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಂಡಿಲ್ಲ ಏಕೆ. ನೀವೇ ಮಧ್ಯೆ ಪ್ರವೇಶಿಸಿ ರವಿ ಅವರಿಗೆ ನ್ಯಾಯ ದೊರಕಿಸಿ ಕೊಡಬೇಕು. ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಮೂಲಕ ಅವರಿಗೆ ಎಚ್ಚರಿಕೆ ಸಂದೇಶ ನೀಡಬೇಕು ಎಂದಿದ್ದಾರೆ. ಘಟನೆ ನಂತರ ರವಿ ಅವರು ನನ್ನನ್ನು ಭೇಟಿ ಮಾಡಿ, ಎಲ್ಲಾ ವಿವರವನ್ನು ತಿಳಿಸಿರುವುದಲ್ಲದೆ, ದೂರು ನೀಡಿದ್ದಾರೆ.

ನಾನು ಅದನ್ನು ಪತ್ರದೊಂದಿಗೆ ಲಗತ್ತಿಸಿ ಸರ್ಕಾರಕ್ಕೆ ತಲುಪಿಸಿದ್ದೇನೆ, ನೀವೇ ಮುಂದಿನ ಕ್ರಮ ಕೈಗೊಳ್ಳಬೇಕೆಂದು ಸಲಹೆ ಮಾಡಿದ್ದಾರೆ. ಈ ಪತ್ರದಿಂದ ಸರ್ಕಾರ ಮತ್ತು ರಾಜ್ಯಪಾಲರ ನಡುವೆ ಮತ್ತೆ ಶೀಥಲ ಸಮರ ಆರಂಭಗೊಂಡಂತಾಗಿದೆ.

ರೀ–ಡೂ ಪ್ರಕರಣ ಸೇರಿದಂತೆ ರಾಜ್ಯಪಾಲರು ಸರ್ಕಾರಕ್ಕೆ ಬರೆದ 26 ಪತ್ರಗಳಿಗೆ ಇದುವರೆಗೂ ಸರ್ಕಾರ ಉತ್ತರ ನೀಡಿಲ್ಲ. ರಾಜಭವನದಿಂದ ಪದೇ ಪದೆ ಪತ್ರ ಬರೆಯುತ್ತಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ್ದ ರಾಜ್ಯ ಸಚಿವ ಸಂಪುಟ, ಇನ್ನು ಮುಂದೆ ಯಾವುದೇ ಪತ್ರ ಬಂದರೂ, ಅದಕ್ಕೆ ಅಧಿಕಾರಿಗಳು ಉತ್ತರ ನೀಡಬಾರದು ಎಂದು ನಿರ್ಣಯ ಕೈಗೊಂಡಿತ್ತು. ರಾಜ್ಯಪಾಲರ ಪತ್ರಗಳನ್ನು ಸಂಪುಟ ಸಭೆ ಮುಂದೆ ತಂದು ಸರ್ಕಾರದ ಸೂಚನೆಯಂತೆ ಕ್ರಮ ಕೈಗೊಳ್ಳಬೇಕು ಎಂದು ಕಟ್ಟಾದೇಶ ಮಾಡಿತ್ತು.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು: ತುರ್ತು ಕಾಮಗಾರಿ ನಿಮಿತ್ತ ಜನವರಿ 9ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5ರವರೆಗೆ ಹೂಟಗಳ್ಳಿ ಉಪವಿಭಾಗ ವ್ಯಾಪ್ತಿಯ ಗುಂಗ್ರಾಲ್ ಛತ್ರ, ಯಡ್ಡಹಳ್ಳಿ, ಯಾಚೇಗೌಡನಹಳ್ಳಿ, ಹೊಸಕೋಟೆ, ದಡದ ಕಲ್ಲಹಳ್ಳಿ, ಛತ್ರದ ಕೊಪ್ಪಲು, ರಾಮೇನ ಹಳ್ಳಿ, ಕಲ್ಲೂರು ನಾಗನಹಳ್ಳಿ, ಕಲ್ಲೂರು, ಮೀನಾಕ್ಷಿಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯಾಗಲಿದೆ. ಹಾಗೂ ಕೃಷಿ ಪಂಪ್‌ಸೆಟ್‌ಗಳಿಗೆ ಸದರಿ ದಿನಗಳಂದು ರಾತ್ರಿ 10 ಗಂಟೆಯಿಂದ ಮಾರನೇ ದಿನದ ಬೆಳಗ್ಗೆ 10 ಗಂಟೆವರೆಗೆ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುವುದು ಎಂದು ಚೆಸ್ಕಾಂನ ವಿ.ವಿ. ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕುಮಾರಸ್ವಾಮಿ ಸರ್ಕಾರ ಪತನಕ್ಕೆ ಕಾರಣರಾದವರಲ್ಲಿ ಒಬ್ಬರಾದ ಜಿಮ್ ಸೋಮನ ವಿರುದ್ಧ ರೇಪ್ ಕೇಸ್!

ಬೆಂಗಳೂರು,ಜ.8–ತಮ್ಮ ಪರಿಚಿತ ಯುವತಿಗೆ ಬಲವಂತದಿಂದ ಮದ್ಯ ಕುಡಿಸಿ ಅತ್ಯಾಚಾರ ಎಸಗಿದ ಆರೋಪದ ಮೇರೆಗೆ ಹಾಸನ ಜಿಲ್ಲೆ ಸಕಲೇಶಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡರೊಬ್ಬರ ಮೇಲೆ ಅಶೋಕನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಜಿಮ್ ಸೋಮ

ಜಯನಗರದ ನಿವಾಸಿ ಸೋಮಶೇಖರ್ ಅಲಿಯಾಸ್ ಜಿಮ್ ಸೋಮನ ಮೇಲೆ ಆರೋಪ ಕೇಳಿ ಬಂದಿದ್ದು, ಕೃತ್ಯ ಬೆಳಕಿಗೆ ಬಂದ ಬಳಿಕ ತಲೆಮರೆಸಿಕೊಂಡಿರುವ ಆರೋಪಿ ಪತ್ತೆಗಾಗಿ ಪೊಲೀಸರು ಹುಡುಕಾಡುತ್ತಿದ್ದಾರೆ.

ಕೆಲ ತಿಂಗಳ ಹಿಂದೆ ಅಶೋಕನಗರ ಸಮೀಪದ ಹೋಟೆಲ್‌ಗೆ ಸಂತ್ರಸ್ತೆಯನ್ನು ಮಾತುಕತೆ ನೆಪದಲ್ಲಿ ಕರೆಸಿ ಸೋಮ ಈ ಕೃತ್ಯ ಎಸಗಿದ್ದಾನೆ ಎಂದು ಆರೋಪಿಸಲಾಗಿದೆ. ಹಲವು ದಿನಗಳ ಹಿಂದೆ ತನ್ನ ಸ್ನೇಹಿತೆ ಮೂಲಕ ಜಿಮ್ ಸೋಮನಿಗೆ ಸಂತ್ರಸ್ತೆ ಪರಿಚಯವಾಗಿದ್ದಳು. ಈ ಸ್ನೇಹದಲ್ಲಿ ತನ್ನ ಮದುವೆಗೆ ಸುಮಾರು 6 ಲಕ್ಷ ರೂ. ಸಾಲ ಕೇಳಲು ಸೋಮನನ್ನು ಭೇಟಿಯಾಗಿದ್ದಳು. ಆಗ ಮದುವೆಗೆ ಸಹಾಯ ಮಾಡುವುದಾಗಿ ಹೇಳಿ ಯುವತಿ ಜತೆ ಆತ ಸಲುಗೆ ಬೆಳೆಸಿದ್ದಾನೆ. ನಂತರ ಕೆಲ ದಿನಗಳ ಹಿಂದೆ ಅಶೋಕನಗರ ಸಮೀಪದ ಹೋಟೆಲ್‌ಗೆ ಮಾತುಕತೆ ನೆಪದಲ್ಲಿ ಕರೆಸಿದ್ದಾನೆ. ಈ ಆಹ್ವಾನದ ಮೇರೆಗೆ ಹೋಟೆಲ್‌ಗೆ ತೆರಳಿದ ಸಂತ್ರಸ್ತೆಗೆ ಬಲವಂತವಾಗಿ ಮದ್ಯ ಕುಡಿಸಿ ಜಿಮ್ ಸೋಮ ಅತ್ಯಾಚಾರ ಎಸಗಿದ್ದಾನೆ ಎಂದು ದೂರಿನಲ್ಲಿ ಸಂತ್ರಸ್ತೆ ಆರೋಪಿಸಿದ್ದಾರೆ.

ಬಡ್ಡಿ ಹಾಗೂ ರಿಯಲ್ ಎಸ್ಟೇಟ್ ಸೇರಿ ಇತರೆ ವ್ಯವಹಾರಗಳಲ್ಲಿ ತೊಡಗಿದ್ದ ಜಿಮ್ ಸೋಮ, ರಾಜಕೀಯದಲ್ಲೂ ಸಕ್ರಿಯವಾಗಿದ್ದ. 2018ರಲ್ಲಿ ಸಕಲೇಶಪುರದಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಅಲ್ಪ ಮತಗಳಿಂದ ಆತ ಪರಾಜಿತನಾಗಿದ್ದ. ಅಲ್ಲದೆ 2019ರಲ್ಲಿ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ ಕೆಡವುವ ಕಾರ್ಯದಲ್ಲಿ ಸಕ್ರಿಯನಾಗಿದ್ದ. ಆಗ ರಾಜಕೀಯ ವಲಯದಲ್ಲಿ ಆತನ ಹೆಸರು ಭಾರಿ ಚರ್ಚೆಗೆ ಬಂದಿತ್ತು. ನಂತರ ನೇಪಥ್ಯಕ್ಕೆ ಸರಿದಿದ್ದ ಜಿಮ್ ಸೋಮ ಮತ್ತೆ ಅತ್ಯಾಚಾರ ಆರೋಪ ಹೊತ್ತು ಸದ್ದು ಮಾಡಿದ್ದಾನೆ.

ರಿಯಲ್ ಎಸ್ಟೇಟ್ ಮಾಫಿಯಾ ಜೊತೆ ಕೈ ಜೋಡಿಸಿದರೆ ಸರ್ಕಾರ ಸಹಿಸದು

● ಪೊಲೀಸರಿಗೆ ಸಿಎಂ ಸಿದ್ದರಾಮಯ್ಯ ಎಚ್ಚರಿಕೆ ● ಹೊಸದಾಗಿ ನಿರ್ಮಾಣಗೊಂಡ ಪೊಲೀಸ್ ಠಾಣೆ ಕಟ್ಟಡಗಳ ಉದ್ಘಾಟನೆ

ಬೆಂಗಳೂರು, ಜ.8(ಬಿಎಲ್‌ಯು)–ಪೊಲೀಸರು ರಿಯಲ್ ಎಸ್ಟೇಟ್ ಮಾಫಿಯಾ ಜೊತೆ ಕೈ ಜೋಡಿಸಿದರೆ ಸರ್ಕಾರ ಸಹಿಸುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಸಿದ್ದಾರೆ.

ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ನೂತನವಾಗಿ ನಿರ್ಮಿಸಿರುವ ಚಾಮರಾಜ ಪೇಟೆ, ಕಬ್ಬನ್ ಪಾರ್ಕ್ ಹಾಗೂ ಹೈಗ್ರೌಂಡ್ಸ್ ಪೊಲೀಸ್ ಠಾಣೆ ಕಟ್ಟಡಗಳ ಉದ್ಘಾಟಿಸಿ ಮಾತನಾಡಿದ ಅವರು, ಯಾವುದೇ ಕಾರಣಕ್ಕೂ ಪೊಲೀಸರು ರಿಯಲ್ ಎಸ್ಟೇಟ್ ವ್ಯವಹಾರ ಮಾಡುವವರಿಗೆ ಬೆಂಬಲ ನೀಡಬಾರದು ಎಂದು ತಾಕೀತು ಮಾಡಿದರು. ಉದ್ಯೋಗ ಇಲ್ಲ ದಿರುವಾಗ ಕೆಲವರು ಅಪರಾಧ ಜಗತ್ತಿನ ಕಡೆಗೆ ಆಕರ್ಷಿತರಾಗುತ್ತಾರೆ. ರಿಯಲ್ ಎಸ್ಟೇಟ್ ದಂಧೆ ಕಾರಣದಿಂದ ಅಪರಾಧ ಕೃತ್ಯಗಳು ಹೆಚ್ಚಾಗುತ್ತಿವೆ. ಪೊಲೀಸರು ಇದಕ್ಕೆ ಕಡಿವಾಣ ಹಾಕಬೇಕು ಎಂದರು. ರಾಜ್ಯದಲ್ಲಿ ಅಪರಾಧಗಳ ಪ್ರಮಾಣ ಕಡಿಮೆ ಆಗುತ್ತಿರುವುದು ನೆಮ್ಮದಿ ಸಂಗತಿಯಾಗಿದೆ. ಆದರೆ ಪೊಲೀಸರು ಚಾಪೆ ಕೆಳಗೆ ತೂರಿದರೆ ಅಪರಾಧಿಗಳು ರಂಗೋಲಿ ಕೆಳಗೆ ತೂರಿ ಕಾನೂನಿನಿಂದ ತಪ್ಪಿಸಿ ಕೊಳ್ಳಲು ಯತ್ನಿಸುತ್ತಾರೆ. ಆದ ಕಾರಣ ಪೊಲೀಸರು ಇದಕ್ಕೆ ಅವಕಾಶ ನೀಡಬಾರದು ಎಂದು ಸಿದ್ದರಾಮಯ್ಯ ಸಲಹೆ ನೀಡಿದರು. ಅಪರಾಧಿಗಳಿಗೆ ಹಾಗೂ ಜನಸಾಮಾನ್ಯರಿಗೆ ಭಯ ಮುಕ್ತ ವಾತಾವರಣ ನಿರ್ಮಿಸಬೇಕು. ಇದು ಬಿಟ್ಟು ರಿಯಲ್ ಎಸ್ಟೇಟ್ ವ್ಯವಹಾರಸ್ಥರ ಜೊತೆ ಭಾಗಿಯಾಗಬಾರದು ಎಂದು ಸೂಚಿಸಿದರು. ಕರ್ನಾಟಕ 7 ಕೋಟಿ ಜನಸಂಖ್ಯೆ ದಾಟಿದೆ. ಇವರೆಲ್ಲರ ರಕ್ಷಣೆ, ಆಸ್ತಿ ಪಾಸ್ತಿ, ಮಾನ, ಪ್ರಾಣ ರಕ್ಷಣೆ ನಮ್ಮ ಹೊಣೆ. ನೆಮ್ಮದಿ ಬದುಕಿಗೆ ಸುರಕ್ಷಿತ ವಾತಾವರಣ ನಿರ್ಮಾಣ ಮಾಡುವ ಜವಾಬ್ದಾರಿ ಪೊಲೀಸರ ಮೇಲಿದೆ. ಇದಕ್ಕಾಗಿ ನೂತನ ಪೊಲೀಸ್ ಠಾಣೆ ನಿರ್ಮಾಣ ಮಾಡಿ, ಅಗತ್ಯ ಸವಲತ್ತು ನೀಡಲು ಸರ್ಕಾರ ಸಿದ್ಧವಿದೆ ಎಂದು ಸಿದ್ದರಾಮಯ್ಯ ಹೇಳಿದರು.

ರಾಜ್ಯದಲ್ಲಿ ಶಾಂತಿ–ಸುವ್ಯವಸ್ಥೆ ಇದ್ದಾಗ ಅಭಿವೃದ್ಧಿ ವೇಗ ಹೆಚ್ಚುತ್ತದೆ. ಈ ಮೂಲಕ ಜನಸ್ನೇಹಿ ಪೊಲೀಸ್ ವ್ಯವಸ್ಥೆ ರೂಪಿಸಬೇಕು. ಜನರು ಪೊಲೀಸ್ ಠಾಣೆಗೆ ಬಂದಾಗ ಸೌಜನ್ಯಯುತವಾಗಿ ನಡೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪೊಲೀಸ್ ಪೇದೆಗಳು, ಎಸ್‌ಐಗಳು, ಇನ್ಸ್‌ಪೆಕ್ಟರ್‌ಗಳು ಹೆಚ್ಚೆಚ್ಚು ಕೆಲಸ ಮಾಡುತ್ತಾರೆ. ಇವರ ಯೋಗಕ್ಷೇಮದ ಜವಾಬ್ದಾರಿ ನಮ್ಮ ಮೇಲಿದೆ. ಪೊಲೀಸ್ ಸಿಬ್ಬಂದಿಯ ಗೃಹ ಯೋಜನೆಯನ್ನು ಸರ್ಕಾರ ಮುಂದುವರೆಸಲಿದೆ ಎಂದು ಇದೇ ವೇಳೆ ಸಿದ್ದರಾಮಯ್ಯ ಭರವಸೆ ನೀಡಿದರು.



ಬೆಂಗಳೂರಿನಲ್ಲಿ ನಿರ್ಮಿಸಿರುವ ಚಾಮರಾಜ ಪೇಟೆ, ಕಬ್ಬನ್ ಪಾರ್ಕ್, ಹೈಗ್ರೌಂಡ್ಸ್ ಪೊಲೀಸ್ ಠಾಣೆ ಕಟ್ಟಡಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ನಾಳೆ ಬಸ್ ನಿಲ್ದಾಣ ಸ್ಥಳಾಂತರ ಕುರಿತು ಸಭೆ

ಮೈಸೂರು,ಜ.8(ಪಿಎಂ)– ಮೈಸೂರು ಗ್ರಾಮಾಂತರ ಬಸ್ ನಿಲ್ದಾಣ ಸ್ಥಳಾಂತರ ಸಂಬಂಧ ಸದರಿ ನಿಲ್ದಾಣದ ಸುತ್ತಮುತ್ತಲ ವ್ಯಾಪಾರಸ್ಥರ ಸಭೆಯನ್ನು ಜ.10ರಂದು ಬೆಳಗ್ಗೆ 11ಕ್ಕೆ ಹೋಟೆಲ್ ಪೈ ವಿಸ್ತಾ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಗ್ರಾಮಾಂತರ ಬಸ್ ನಿಲ್ದಾಣ ಸ್ಥಳಾಂತರಿಸಲು ಕೆಎಸ್‌ಆರ್‌ಟಿಸಿಯಿಂದ ಈಗಾಗಲೇ ತೀರ್ಮಾನಿಸಿ, ಸರ್ಕಾರದ ಒಪ್ಪಿಗೆ ಪಡೆದು 120 ಕೋಟಿ ರೂ. ವೆಚ್ಚದ ಡಿಪಿಆರ್ ಸಲ್ಲಿಸಿ ಅನುಮೋದನೆ ಪಡೆದಿದೆ. ಪ್ರಸ್ತುತದ ಈ ಯೋಜನೆ ಕೈ ಬಿಡಲು ನಾವು ಒಗ್ಗಟ್ಟಾಗಬೇಕಿದೆ. ಮುಂದಿನ ಹೋರಾಟದ ಬಗ್ಗೆ ರೂಪುರೇಷೆಗಳನ್ನು ಸಭೆಯಲ್ಲಿ ತಿಳಿಸಲಾಗುವುದು. ವ್ಯಾಪಾರಸ್ಥರು ಭಾಗವಹಿಸಿ ತಮ್ಮ ಸಲಹೆಗಳನ್ನು ನೀಡಬಹುದು ಎಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಹಾಗೂ ಪದಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೌತ್ ವೆಸ್ಟರ್ನ್ ರೈಲ್ವೆಯ ಜನರಲ್ ಸೆಕ್ರೆಟರಿ ಗೋವರ್ಧನ್‌ಗೆ ಅಭಿನಂದನೆ...



ಆಲ್ ಇಂಡಿಯಾ ಓಬಿಸಿ ರೈಲ್ವೆ ನೌಕರರ ಸಂಘದ ಸೌತ್ ವೆಸ್ಟರ್ನ್ ರೈಲ್ವೆಯ ಜನರಲ್ ಸೆಕ್ರೆಟರಿಯಾಗಿ ಅವಿರೋಧವಾಗಿ ಆಯ್ಕೆಯಾದ ಗೋವರ್ಧನ್ ಅವರನ್ನು ಮೈಸೂರು ರೈಲ್ವೆ ವಿಭಾಗದ ಎಐಒಬಿಸಿ ವತಿಯಿಂದ ಅಭಿನಂದಿಸಲಾಯಿತು. ಸಂಘದ ಅಧ್ಯಕ್ಷ ವೈಶಾಖ್, ಕಾರ್ಯದರ್ಶಿ ಜಗದೀಶ್, ಶ್ಯಾಮಲಾಗೌಡ, ಮೋಹನ್, ರಂಜಿತ್‌ಕುಮಾರ್, ರವಿ, ಕೈಲಾಶ್, ಸಲೀಮ್, ಬಾಲರಾಜು, ಮಣಿಕಂಠ, ಲಿಂಗರಾಜು, ಶಂಕರಮೂರ್ತಿ, ಶಿವಶಂಕರ, ಹನುಮಂತ, ಅಂಜನಾ ಝಾ ಇತರರು ಉಪಸ್ಥಿತರಿದ್ದರು.

ಜ.11ರಂದು ಬಿವಿಬಿ ಭವನೋತ್ಸವ, ವಾರ್ಷಿಕೋತ್ಸವ ಸಮಾರಂಭ

ಮೈಸೂರು, ಜ.8 – ಮೈಸೂರಿನ ಭಾರತೀಯ ವಿದ್ಯಾಭವನದ ಭವನೋತ್ಸವ 2024–25, ವಾರ್ಷಿಕೋತ್ಸವ ಸಮಾರಂಭ ಜ.11ರಂದು ಸಂಜೆ 5.30ಕ್ಕೆ ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ನಡೆಯಲಿದೆ. ಕಾರ್ಯಕ್ರಮವನ್ನು ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಮಾಜಿ ಸದಸ್ಯ ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ರೇವಣ್ಣ ಉಪಸ್ಥಿತರಿರುವರು. 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರು ಮತ್ತು ಭಾರತೀಯ ವಿದ್ಯಾಭವನ, ಮೈಸೂರು ಕೇಂದ್ರದ ಅಧ್ಯಕ್ಷರಾದ ಡಾ.ಕೆ.ಬಿ.ಗಣಪತಿ ಅಧ್ಯಕ್ಷತೆ ವಹಿಸಲಿದ್ದಾರೆ.

ಕೂಸಿನ ಮನೆ ಕೇರ್ ಶಿಕ್ಷಕರ ಎರಡನೇ ಹಂತದ ತರಬೇತಿ




ಕೂಸಿನಮನೆ ಕೇರ್ ಶಿಕ್ಷಕರ ಎರಡನೇ ಹಂತದ 2ನೇ ತಂಡದ 2ನೇ ದಿನದ ತರಬೇತಿಯನ್ನು ತಾಲೂಕು ಯೋಜನಾಧಿಕಾರಿ ವಸಂತಲಕ್ಷ್ಮೀ ಉದ್ಘಾಟಿಸಿದರು.

ಮೈಸೂರು, ಜ.8(ಎಸ್‌ಪಿಎನ್)–ಪಿರಿಯಾಪಟ್ಟಣ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಕೂಸಿನಮನೆ ಕೇರ್ ಶಿಕ್ಷಕರ ಎರಡನೇ ಹಂತದ 2ನೇ ತಂಡದ 2ನೇ ದಿನದ ತರಬೇತಿ ಯಶಸ್ವಿಯಾಗಿ ಜರುಗಿತು. ತರಬೇತಿಗೆ ತಾಲೂಕು ಯೋಜನಾಧಿಕಾರಿ ವಸಂತಲಕ್ಷ್ಮೀ ಗಿಡಕ್ಕೆ ನೀರೆರೆಯುವ ಮೂಲಕ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಕೂಸಿನ ಮನೆ ಕೇರ್ ಟೇಕರ್ಸ್ ಉದ್ಯೋಗವು ಜವಾಬ್ದಾರಿಯುತ ಕೆಲಸವಾಗಿದ್ದು, ಚಿಕ್ಕಮಕ್ಕಳನ್ನು ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳುವುದು ನಿಮ್ಮ ಜವಾಬ್ದಾರಿಯಾಗಿದೆ ಎಂದರು.

ಕೂಸಿನಮನೆ ಮಕ್ಕಳನ್ನು ತಮ್ಮ ಮಕ್ಕಳಂತೆ ನೋಡಿಕೊಳ್ಳಬೇಕು. ತರಬೇತಿಯಲ್ಲಿ ತಿಳಿಸುವಂತೆ ಮಕ್ಕಳ ಆಟೋಟದ ಜೊತೆಗೆ ಅವರ ಆರೋಗ್ಯ, ಪೌಷ್ಟಿಕ ಆಹಾರದ ಕಡೆಗೂ ಗಮನಹರಿಸಬೇಕು. ಕೂಸಿನ ಮನೆಯಲ್ಲಿ ಕೆಲಸ ನಿರ್ವಹಿಸುವಾಗ ಮೊಬೈಲ್ ಬಳಕೆ ಸಂಪೂರ್ಣ ನಿಷಿದ್ಧ. ಮೊದಲು ಮಕ್ಕಳ ಕಾಳಜಿಗೆ ಹೆಚ್ಚಿನ ಮಹತ್ವ ನೀಡಬೇಕು ಎಂದು ತಿಳಿಸಿದರು.

ಈ ವೇಳೆ ಜಿಲ್ಲಾ ಐಇಸಿ ಸಂಯೋಜಕಿ ರಮ್ಯಾ ಅವರು ಮಾತನಾಡಿ, ಕೂಸಿನ ಮನೆಯ ಪ್ರತಿ ಕೇರ್ ಟೇಕರ್ಸ್‌ಗೆ ವರ್ಷದಲ್ಲಿ ಮೂರು ತಿಂಗಳು ಉದ್ಯೋಗ ದೊರೆಯಲಿದ್ದು, ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಸಂಪನ್ಮೂಲ ವ್ಯಕ್ತಿಗಳಾದ ಧನ್ಯರತಿ, ಡಿಟಿಸಿ ಸುರೇಶ್, ಟಿಪಿಎಂ ಚೇತನ್, ಐಇಸಿ ಸಂಯೋಜಕ ರವಿಕುಮಾರ್ ಅವರು ಹಾಜರಿದ್ದರು.


ದೇಬೂರು ಗ್ರಾಮದ ವ್ಯಕ್ತಿ ನಾಪತ್ತೆ



ಮೈಸೂರು,ಜ.8–ನಂಜನಗೂಡು ತಾಲೂಕು ದೇಬೂರು ಗ್ರಾಮದ ನಿವಾಸಿ ಪಿ.ಮಣಿಕಂಠ ಕಾಣೆಯಾಗಿದ್ದಾರೆ. ನವೆಂಬರ್ 17ರಂದು ಬೆಳಗ್ಗೆ 7.30ರ ಸಮಯದಲ್ಲಿ ಮನೆಯಿಂದ ಹೋದವನು ಇದುವರೆಗೂ ವಾಪಸ್ ಬಂದಿಲ್ಲ ಎಂದು ಪ್ರಕರಣ ದಾಖಲಾಗಿದೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ನಂಜನಗೂಡು ಗ್ರಾಮಾಂತರ ಠಾಣೆ 08221 226259 ಮೈಸೂರ್ ಕಂಟ್ರೋಲ್ ರೂಂ. 8212444800 ಸಂಪರ್ಕಿಸಲು ಕೋರಲಾಗಿದೆ.

ನಿಧನ

ಎನ್.ಎಸ್.ಬಸವರಾಜು




ಮೈಸೂರು, ಜ. 8–ಮೈಸೂರಿನ ಸಿದ್ಧಾರ್ಥನಗರ ನಿವಾಸಿ ಹಾಗೂ ನಿವೃತ್ತ ಪೊಲೀಸ್ ಸೂಪರಿಂಟೆಂಡೆಂಟ್ ಎನ್.ಎಸ್.ಬಸವರಾಜು (88) ಬುಧವಾರ ನಿಧನರಾದರು. ಶ್ರೀಯುತರು ನಿವೃತ್ತಿ ನಂತರ ವೀರಶೈವ ಮಹಾಸಭಾ, ಶ್ರೀ ಬಸವೇಶ್ವರ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ, ಮೈಸೂರು ಕಬ್ಬಳ್ಳಿ ಹಾಸ್ಟೆಲ್, ಅಕ್ಕಮಹಾದೇವಿ ಮಹಿಳಾ ಹಾಸ್ಟೆಲ್ ಅಧ್ಯಕ್ಷರಾಗಿ, ಮರಿಮಲ್ಲಪ್ಪ ಶಿಕ್ಷಣ ಸಂಸ್ಥೆ ಟ್ರಸ್ಟಿಯಾಗಿ ಸೇವೆ ಸಲ್ಲಿಸಿದ್ದರು. ಇವರು ರಾಷ್ಟ್ರಪತಿ ಪದಕ ಪುರಸ್ಕೃತರಾಗಿದ್ದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಜ.9) ಬೆಳಗ್ಗೆ 11 ಗಂಟೆಗೆ ಹುಟ್ಟೂರು ನಂಜನಗೂಡು ತಾಲೂಕು ಹೆಬ್ಯಾ ಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವೆಂಕಟಪ್ಪ ಎಸ್.ವಿ.



ಮೈಸೂರು, ಜ.8–ಮೈಸೂರು ವಿವಿಯ ನಿವೃತ್ತ ಸಹಾಯಕ ಲೈಬ್ರರಿಯನ್‌ರಾಗಿದ್ದ ಕುವೆಂಪುನಗರದ ನಿವಾಸಿ ವೆಂಕಟಪ್ಪ ಎಸ್.ವಿ.(92) ಬುಧವಾರ ರಾತ್ರಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ದಿವಂಗತರು ಪತ್ನಿ ಸರೋಜಮ್ಮ, ನಾಲ್ವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗುರುವಾರ(ಜ.9) ಮಧ್ಯಾಹ್ನ 12 ಗಂಟೆಗೆ ಕುವೆಂಪುನಗರ (ಕೆ.ಜಿ.ಕೊಪ್ಪಲು)ದಲ್ಲಿರುವ ರುದ್ರಭೂಮಿಯಲ್ಲಿ ದಿವಂಗತರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

09.01.2025 ಗುರುವಾರ, ಮಳೆ ನಕ್ಷತ್ರ: ಪೂಷಾ, 29.12.2024 ರಿಂದ 16.01.2025 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಭರಣಿ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯುವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ : ಜಯಶ್ರೀ ಹೆಗಡೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಟಿ. ಎಸ್. ಸ್ನೇಹಾ, ವ್ಯಾಖ್ಯಾನ–ಡಾ. ಬಿ. ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಹಸಿರುಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಎನ್. ಆರ್. ಪ್ರಶಾಂತ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು. ಭಾಗವಹಿಸುವವರು : ಡಾ. ರಮೇಶ್, ಪಶು ವೈದ್ಯಾಧಿಕಾರಿಗಳು, ನಾಗರಹೊಳೆ ಹುಲಿ ಸಂರಕ್ಷಿತಾ ಪ್ರದೇಶ, ಹುಣಸೂರು, ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ: 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ರಸಮಂಜರಿ, 6.10 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ: ಜಯಶ್ರೀ ಹೆಗಡೆ, 6.50 ಕೃಷಿರಂಗ–ಕಿಸಾನ್‌ವಾಣಿ, ಪ್ರಾಯೋಜಕರು: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ 'ನಂ ಕಂಪನಿ' ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ರೈತ ಉತ್ಪಾದಕ ಕಂಪನಿಗಳನ್ನು ಲಾಭದಾಯಕವಾಗಿ ಮುನ್ನಡೆಸುವುದು ಹೇಗೆ? ಈ ಕುರಿತು ಚೈತನ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಕಾರ್ಯದರ್ಶಿ ಬಿ.ಟಿ. ಬದ್ರೀಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ–ಮೈಸೂರಿನ ವಿಜಯನಗರದ ಸದ್ವಿದ್ಯಾ ಸೆಮಿರೆಸಿಡೆನ್ಷಿಯಲ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಂದ ಕಾರ್ಯಕ್ರಮ ವೈವಿಧ್ಯ (ಭಾಗ – 02), 9.30 ಕನ್ನಡ ಭಾರತಿ, 10.00 ನಾಟಕ–ವೈಶಾಲಿಯ ನಗರ ವಧು ಮೂಲಕಥೆ–ಡಾ. ನಿರುಪಮ ಬಾನುಲಿ ರೂಪ–ಎಸ್.ವಿ. ಕೃಷ್ಣಶರ್ಮ, ನಿರ್ಮಾಣ–ಉಮೇಶ್. ಎಸ್. ಎಸ್., 10.30 ಸವಿನೆನಪು– ಹಳೆಯ ಕನ್ನಡ ಚಿತ್ರಗೀತೆಗಳು

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯುದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ಕುಂಭಾಭಿಷೇಕ ಪೂಜಾ ಮಹೋತ್ಸವ, ಬೆಳಗ್ಗೆಯಿಂದ ಮಹತೋಬಾರ ಶ್ರೀ ಧರ್ಮ ಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ನೆಗಡಿ, ಕೆಮ್ಮು ಮತ್ತು ಅಸ್ತಮಾಕ್ಕೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 9 ಗಂಟೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂತ್ರಪಿಂಡ (ಕಿಡ್ನಿ) ಕಾಯಿಲೆ, ಸಂಧಿವಾತ, ಮಂಡಿ ನೋವು, ಕೀಲು ನೋವು ಮತ್ತು ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ :** ಕುವೆಂಪು ಜನ್ಮ ದಿನೋತ್ಸವ, ಉದ್ಘಾಟನೆ : ಸಾಹಿತಿ ಡಾ.ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ :ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು :ವಿಶ್ರಾಂತ ಕುಲಪತಿ ಪ್ರೊ. ಕೆ. ಚಿದಾನಂದಗೌಡ, ಶ್ರೀಮತಿ ತಾರಿಣಿ ಚಿದಾನಂದಗೌಡ, ಸ್ಥಳ: ಬಿಎಂಶ್ರೀ ಸಭಾಂಗಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಬೆಳಗ್ಗೆ 10ರಿಂದ.

■ **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ, ಬೆಂಗಳೂರು, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ :** ಯುವಜನ ಹಾಗೂ ಸಹಕಾರ ಕುರಿತು ಸಂವಾದ ಕಾರ್ಯಕ್ರಮ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಅಧ್ಯಕ್ಷತೆ : ಸಹಕಾರಿ ಅಧ್ಯಕ್ಷ ಜಿ. ನಂಜನಗೌಡ, ಪ್ರಧಾನ ವಿಷಯ ಮಂಡನೆ : ಡಾ. ಎ.ಆರ್. ಶ್ರೀನಾಥ್, ಡಾ. ಹೆಚ್.ವಿ. ರಾಜೀವ್, ಪ್ರಸಾದ್ ರೆಡ್ಡಿ, ಪ್ರೊ. ಸಿ. ಗುರುಸಿದ್ದಯ್ಯ, ಸ್ಥಳ: ಮಾನವಿಕ ಸಭಾಂಗಣ, ಮೈಸೂರು ವಿಶ್ವವಿದ್ಯಾನಿಲಯ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು :** ಸಾಂಸ್ಕೃತಿಕ, ಸಾಹಿತ್ಯಕ ಹಾಗೂ ಕ್ರೀಡಾ ವೇದಿಕೆಗಳ ಸಮಾರೋಪ, ಸಮಾರೋಪ ಭಾಷಣ : ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಅಧ್ಯಕ್ಷತೆ: ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಆರ್. ಮೂಗೇಶಪ್ಪ, ಉಪಸ್ಥಿತರು :ಎನ್.ಎಸ್.ಸುಬ್ರಹ್ಮಣ್ಯ, ಸ್ಥಳ: ಕಾಲೇಜು ಆವರಣ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

■ **ನವದೆಹಲಿಯ ಕೇಂದ್ರ ಜವಳಿ ಮಂತ್ರಾಲಯದ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ :** 'ಸಿಲ್ಕ್ ಫ್ಯಾಬ್' ರೇಷ್ಮೆ ಸೀರೆಗಳು ಮತ್ತು ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮೇಳ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 11 ರಿಂದ ರಾತ್ರಿ 8.30 ರವರೆಗೆ.

■ **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ದಿನದರ್ಶಿಕೆ ಬಿಡುಗಡೆ ಹಾಗೂ ಮಡ್ಡೀಕೆರೆ ಗೋಪಾಲ್‌ಗೆ ಅಭಿನಂದನಾ ಸಮಾರಂಭ, ಸಾನ್ನಿಧ್ಯ : ವಿಷ್ಣು ಸಾಲಿಗ್ರಾಮ ಸ್ವಾಮೀಜಿ, ಅಧ್ಯಕ್ಷತೆ: ಡಾ. ಕೆ.ರಘುರಾಂ ವಾಜಪೇಯಿ, ಉಪಸ್ಥಿತರು: ಚಲನಚಿತ್ರ ನಟ ಸುಪ್ರೀತ್, ಶ್ರೀಮತಿ ತನುಜ ಮಹೇಶ್, ಅಂಬಳೆ ಶಿವಣ್ಣ, ಸ್ಥಳ: ಪತ್ರಕರ್ತರ ಭವನ, ಮಧ್ಯಾಹ್ನ 12.30ಕ್ಕೆ.

■ **ಬೇಡನ್ ಪೊವೆಲ್ ಪಬ್ಲಿಕ್ ಸ್ಕೂಲ್ :** ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು: ನಗರಪಾಲಿಕೆ ಆಯುಕ್ತ ಆಸಾದ್ ಉರ್ ರೆಹಮಾನ್ ಷರೀಫ್, ಅಧ್ಯಕ್ಷತೆ : ಶಾಲೆ ಅಧ್ಯಕ್ಷ ಪಿ. ವಿಶ್ವನಾಥ್, ಸ್ಥಳ: ಕಲಾಮಂದಿರ, ಸಂಜೆ 4ಕ್ಕೆ.

■ **ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು, ಸದ್ವಿದ್ಯಾ ಆಂಗ್ಲೋ ಸಂಸ್ಕೃತ ಪಾಠಶಾಲೆ :** ಸದ್ವಿದ್ಯಾ ಸಂಭ್ರಮ, ಶಾಲಾ ವಾರ್ಷಿಕೋತ್ಸವ, ಅಧ್ಯಕ್ಷತೆ : ಸದ್ವಿದ್ಯಾ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಪ್ರೊ. ಎಂ.ಎಸ್.ಕೆ. ನರಹರಿಬಾಬು, ಮುಖ್ಯ ಅಭ್ಯಾಗತರು : ಚಲನಚಿತ್ರ ನಟ ವಸಿಷ್ಠ ಎನ್. ಸಿಂಹ, ಉಪಸ್ಥಿತರು : ಸಂಸ್ಥೆ ಗೌರವ ಕಾರ್ಯದರ್ಶಿ ಎಂ.ಡಿ. ಗೋಪಿನಾಥ್, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 4.30 ರಿಂದ.

■ **ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ :** ವಿಪ್ರ ಸಂಘಟನಾ ಸಭೆ ಹಾಗೂ ಬ್ರಾಹ್ಮಣ ಸಮಾವೇಶದ ಪೂರ್ವಭಾವಿ ಸಭೆ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಕೆ.ಆರ್. ಮೋಹನ್‌ಕುಮಾರ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ಡಿ.ಟಿ.ಪ್ರಕಾಶ್, ನಟರಾಜ್ ಜೋಯಿಸ್, ನಂ. ಶ್ರೀಕಂಠಕುಮಾರ್, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್. ಸತ್ಯನಾರಾಯಣ್, ಇಳೈ ಆಳ್ವಾರ್ ಸ್ವಾಮೀಜಿ, ಕೆ. ರಘುರಾಂ ವಾಜಪೇಯಿ, ಮಾ.ವಿ. ರಾಮಪ್ರಸಾದ್, ಎಂ.ಡಿ. ಪಾರ್ಥಸಾರಥಿ, ಎಚ್.ಎನ್. ಶ್ರೀಧರ್‌ಮೂರ್ತಿ, ಸೌಭಾಗ್ಯಮೂರ್ತಿ, ಸ್ಥಳ: ಅಪೂರ್ವ ಹೋಟೆಲ್ ಸಭಾಂಗಣ, ಸಂಜೆ 5.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ (ಬೆಂಗಳೂರು), ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ಬೆಂಗಳೂರು ಮಹಾರಾಣಿ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್.ಶ್ರೀಧರನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಸನಾತನ ಸಭಾ, ಜಯನಗರ, ಸಂಜೆ 6.15 ರಿಂದ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮೈಸೂರು ಮಹಾರಾಣಿ ಕಲಾ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕಿ, ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ವಿದ್ವನ್ಮಣಿ, ದರ್ಶನ ವಾರಿಧಿ ಡಾ.ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6.30ಕ್ಕೆ

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಯದುವೀರ್ ಜನ ಸಂಪರ್ಕ ಯಾತ್ರೆ

ಆಧುನಿಕ ಅಭಿವೃದ್ಧಿ ಭರಾಟೆಯಲ್ಲಿ ಗ್ರಾಮ ಪರಂಪರೆ ಮರೆಯದಿರಿ

● ಯದುವೀರ್‌ಗೆ ಅದ್ದೂರಿ ಸ್ವಾಗತ ● ಜನಪ್ರತಿನಿಧಿಗಳಿದ್ದರೆ ಸಂಸದರ ಕಾರ್ಯ ಸುಲಭ
● ಗಡಿ ಗ್ರಾಮಗಳನ್ನು ನಗರಪಾಲಿಕೆಗೆ ಸೇರಿಸಿ ● ಚಾಮುಂಡೇಶ್ವರಿ ಕ್ಷೇತ್ರ ಭವಿಷ್ಯದ ಮೂಲ ಗುರುತು



ಮೈಸೂರಿನ ಹಂಚ್ಯಾ ಗ್ರಾಮದಲ್ಲಿ ಬುಧವಾರ ನಡೆದ ಜನಸಂಪರ್ಕ ಯಾತ್ರೆ ವೇಳೆ ಸಂಸದ ಯದುವೀರ್ ಅವರು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

ಮೈಸೂರು, ಜ.8(ಬಿಎಲ್‌ಯು)– ಮೈಸೂರು–ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಇಂದು ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜನ ಸಂಪರ್ಕ ಯಾತ್ರೆ ನಡೆಸಿ, ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಹಂಚ್ಯಾ ಗ್ರಾಮಕ್ಕೆ ಭೇಟಿ ನೀಡಿದ ಯದುವೀರ್‌ಗೆ ಗ್ರಾಮಸ್ಥರು ಅದ್ದೂರಿ ಸ್ವಾಗತ ಕೋರಿದರು. ತಳಿರು ತೋರಣ ಕಟ್ಟಿ ರಸ್ತೆಯನ್ನು ಸಿಂಗರಿಸಿ, ಪಟಾಕಿ ಸಿಡಿಸಿ ಸ್ವಾಗತಿಸಿದರು. ಅಲ್ಲದೆ ಮೈಸೂರು ಪೇಟ ತೊಡಿಸಿ ಸನ್ಮಾನ ಕೂಡ ಮಾಡಿದರು.

ಈ ವೇಳೆ ಯದುವೀರ್ ಅವರು ಹಂಚ್ಯಾ ಗ್ರಾಮದ ಶ್ರೀ ದೇವಮ್ಮನವರ ದೇವಸ್ಥಾನ ಹಾಗೂ ಶ್ರೀರಾಮ ಮಂದಿರಕ್ಕೆ ಭೇಟಿ ನೀಡಿದರು. ಹಂಚ್ಯಾ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಕಳೆದ 50 ವರ್ಷಗಳ ಹಿಂದೆ ಸ್ಥಾಪನೆಯಾಗಿದ್ದು, ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಈ ಹಿನ್ನೆಲೆಯಲ್ಲಿ ಸ್ವಂತ ಕಟ್ಟಡಕ್ಕೆ ಜಾಗ ನೀಡುವಂತೆ ಗ್ರಾಮಸ್ಥರು ಒಕ್ಕೊರಲಿನಿಂದ ಮನವಿ ಮಾಡಿದರು. ಇದಕ್ಕೆ ಸಕರಾತ್ಮಕವಾಗಿ ಸ್ಪಂದಿಸಿದ ಯದುವೀರ್ ಅವರು, ಸಂಬಂಧಿಸಿದ ಅಧಿಕಾರಿಗಳ ಜೊತೆ ಮಾತನಾಡಿ ಶಾಶ್ವತ ಕಟ್ಟಡಕ್ಕೆ ಸರ್ಕಾರಿ ಜಾಗ ಕೊಡಿಸುವುದಾಗಿ ಯದುವೀರ್ ಭರವಸೆ ನೀಡಿದರು. ಮೈಸೂರು ಹಾಗೂ ಕೊಡಗು ಲೋಕಸಭಾ ಕ್ಷೇತ್ರ ಹೆಚ್ಚು ಅಭಿವೃದ್ಧಿ ಆಗಬೇಕು. ಈ ನಿಟ್ಟಿನಲ್ಲಿ ನಾನು ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುತ್ತೇನೆ ಎಂದು ಆಶ್ವಾಸನೆ ನೀಡಿದರು.


ಆಧುನಿಕತೆಗೆ ತಕ್ಕಂತೆ ಗ್ರಾಮಗಳು ಅಭಿವೃದ್ಧಿಯಾಗಬೇಕು. ಆದರೆ ಅಭಿವೃದ್ಧಿ ಭರಾಟೆಯಲ್ಲಿ ಗ್ರಾಮ ಪರಂಪರೆಯನ್ನು ಮರೆಯಬಾರದು. ಆಧುನಿಕ ಕಾಲಕ್ಕೆ ತಕ್ಕಂತೆ ಜನರಿಗೆ ಸೌಲಭ್ಯ ದೊರೆತು ಸಮಗ್ರ ಅಭಿವೃದ್ಧಿಯಾಗಬೇಕು. ಆದರೆ ಗ್ರಾಮ ಪರಂಪರೆ ಅಳಿಸದೆ ಸಂರಕ್ಷಿಸಬೇಕು ಎಂದು ಸಲಹೆ ನೀಡಿದರು. ಚಾಮುಂಡೇಶ್ವರಿ ಕ್ಷೇತ್ರ ಮೈಸೂರಿನ ಭವಿಷ್ಯದ ಮೂಲ ಗುರುತು. ಈ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿ ಆಗಬೇಕು. ಈ ನಿಟ್ಟಿನಲ್ಲಿ ನಾನು ಕಾರ್ಯ ನಿರ್ವಹಿಸುತ್ತೇನೆ ಎಂದು ವಾಗ್ದಾನ ಮಾಡಿದರು.

ತರುವಾಯ ಯದುವೀರ್ ಕ್ಷೇತ್ರದ ರಮ್ಮನಹಳ್ಳಿ ಗ್ರಾಮಕ್ಕೆ ಆಗಮಿಸಿದರು. ಅಲ್ಲಿಯೂ ಕೂಡ ಯದುವೀರ್‌ಗೆ ಗ್ರಾಮಸ್ಥರು ಭರ್ಜರಿ ಸ್ವಾಗತ ಕೋರಿದರು. ಗ್ರಾಮದಲ್ಲಿ 20 ಸಾವಿರ ಜನಸಂಖ್ಯೆ ಇದ್ದು, ಗುಣಮಟ್ಟದ ರಸ್ತೆ, ಸಮರ್ಪಕ ಕುಡಿಯುವ ನೀರು, ಬೀದಿ ದೀಪ ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯ ವಿಲ್ಲ ಎಂದು ಸಮಸ್ಯೆ ಹೇಳಿಕೊಂಡರು.

ಪ್ರೌಢಶಿಕ್ಷಣ ಹಾಗೂ ಪದವಿ ಪೂರ್ವ ಕಾಲೇಜಿಗಾಗಿ ಸುತ್ತಮುತ್ತಲ ಗ್ರಾಮದ ಮಕ್ಕಳು ಮೈಸೂರು ನಗರಕ್ಕೆ ಹೋಗಬೇಕು. ಈ ಹಿನ್ನೆಲೆ ರಮ್ಮನಹಳ್ಳಿಯಲ್ಲೇ ಹೈಸ್ಕೂಲ್ ಹಾಗೂ ಪದವಿಪೂರ್ವ ಕಾಲೇಜು ಸ್ಥಾಪನೆ ಮಾಡಬೇಕು ಎಂದು ಕೋರಿದರು. ಈ ಸಂದರ್ಭದಲ್ಲಿ ಮಾತನಾಡಿದ ಯದುವೀರ್, ಚಾಮುಂಡೇಶ್ವರಿ ಕ್ಷೇತ್ರಕ್ಕೂ ಮೈಸೂರು ಅರಮನೆಗೂ ಒಳ್ಳೆಯ ಸಂಬಂಧವಿದೆ. ಈ ಸಂಬಂಧ ಮತ್ತಷ್ಟು ಗಟ್ಟಿಯಾಗಲು ನಾನು ಪ್ರಯತ್ನಿಸುತ್ತೇನೆ. ನೀವು ಸಲ್ಲಿಸಿರುವ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖನಾಗುತ್ತೇನೆ ಎಂದು ಭರವಸೆ ನೀಡಿದರು. ಪಟ್ಟಣ ಪಂಚಾಯಿತಿ ಚುನಾವಣೆ ನಡೆದು ಜನಪ್ರತಿನಿಧಿಗಳು ಆಯ್ಕೆಯಾಗಬೇಕು. ಜನ ಪ್ರತಿನಿಧಿಗಳಿದ್ದರೆ ಲೋಕಸಭಾ ಸದಸ್ಯರು ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಸುಲಭವಾಗುತ್ತದೆ ಹಾಗೂ ವೇಗ ಪಡೆಯುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಪಟ್ಟಣ ಪಂಚಾಯಿತಿ ಚುನಾವಣೆ ನಡೆಸಬೇಕು. ಆದರೆ ಚುನಾವಣೆ ವಿಳಂಬಕ್ಕೆ ಕಾರಣ ಕರ್ತರು ಯಾರು ಎಂಬುದು ನಿಮ್ಮೆಲ್ಲರಿಗೂ ತಿಳಿದ ವಿಚಾರವಾಗಿದೆ ಎಂದು ತಿಳಿಸಿದರು.

ಸ್ಥಳಿಯ ಸಂಸ್ಥೆಗಳಲ್ಲಿ ಚುನಾಯಿತ ಸದಸ್ಯರು ಇಲ್ಲದಿದ್ದರೆ ಪ್ರಜಾಪ್ರಭುತ್ವ ಯಶಸ್ವಿಯಾಗುವುದಿಲ್ಲ. ನಿಮ್ಮದೆ ಸರ್ಕಾರ ಹಾಗೂ ನಿಮ್ಮದೆ ಜನಪ್ರತಿನಿಧಿಗಳಿರಬೇಕು. ಇದರಿಂದ ಜನರ ಸಮಸ್ಯೆಗಳು ಶೀಘ್ರ ಪರಿಹಾರವಾಗುತ್ತದೆ. ಕಳೆದ 11 ವರ್ಷದ ಅವಧಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ದೇಶದ 25 ಕೋಟಿ ಜನರನ್ನು ಬಡತನ ರೇಖೆಯಿಂದ ಹೊರಗೆ ತಂದು ಅವರಿಗೆ ಆರ್ಥಿಕ ಶಕ್ತಿ ತುಂಬಿದೆ. ಭಾರತ ಮತ್ತಷ್ಟು ಬೆಳವಣಿಗೆ ಸಾಧಿಸಲು ನರೇಂದ್ರ ಮೋದಿ ಅವರ ಪರಿಕಲ್ಪನೆಯ ವಿಕಸಿತ್ ಭಾರತ್ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಬೇಕು. ಇದು ಸಾಕಾರಗೊಳ್ಳಲು ಜನಪ್ರತಿನಿಧಿಗಳ ಜೊತೆ ಜನರು ಸಹ ಕೈಜೋಡಿಸಬೇಕು ಎಂದು ಯದುವೀರ್ ಮನವಿ ಮಾಡಿದರು. ರಮ್ಮನಹಳ್ಳಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳನ್ನು ಮೈಸೂರು ನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಬೇಕು. ಇದರಿಂದ ಇಲ್ಲಿನ ಅಭಿವೃದ್ಧಿ ಕಾರ್ಯಗಳು ವೇಗ ಪಡೆಯುತ್ತದೆ ಎಂದು ಗ್ರಾಮಸ್ಥರು ಬೇಡಿಕೆ ಸಲ್ಲಿಸಿದರು.

ಬಿಜೆಪಿ ಮುಖಂಡ ಕವಿಶ್‌ಗೌಡ, ಗ್ರಾಮದ ಮುಖಂಡರಾದ ಜವರಯ್ಯ, ವೆಂಕಟಯ್ಯ, ಮಹದೇವ, ನಾಗರಾಜು, ಕುಮಾರ್ ಸೇರಿದಂತೆ ಇತರರು ಈ ವೇಳೆ ಹಾಜರಿದ್ದರು.



ಪೊಲೀಸರು ಅಳವಡಿಸಿರುವ ಸಿಸಿಟಿವಿ ಕ್ಯಾಮರಾ ತೆರವು ಮಾಡಿಸಿ



ಮೈಸೂರಿನ ರಮ್ಮನಹಳ್ಳಿಯಲ್ಲಿ ಪೊಲೀಸ್ ಇಲಾಖೆ ಅಳವಡಿಸಿರುವ ಸಿಸಿಟಿವಿ ಕ್ಯಾಮರಾದ ದೃಶ್ಯ

ಸಂಸದರು, ಶಾಸಕರು ಸೇರಿದಂತೆ ಚುನಾಯಿತ ಪ್ರತಿನಿಧಿಗಳು ಗ್ರಾಮಕ್ಕೆ ಬಂದಾಗ ಕುಡಿಯುವ ನೀರು, ಗುಣಮಟ್ಟದ ರಸ್ತೆ, ಬೀದಿ ದೀಪ ಸೇರಿದಂತೆ ಇತರೆ ಸಮಸ್ಯೆ ಬಗ್ಗೆ ಗಮನ ಸೆಳೆಯುವುದು ಸರ್ವೆ ಸಾಮಾನ್ಯ. ಆದರೆ ಸಂಸದ ಯದುವೀರ್ ಅವರು ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜನಸಂಪರ್ಕ ಯಾತ್ರೆ ಕೈಗೊಂಡ ಸಂದರ್ಭದಲ್ಲಿ ಪೊಲೀಸ್ ಇಲಾಖೆ ಅಳವಡಿಸಿರುವ ಸಿಸಿಟಿವಿ ಕ್ಯಾಮರಾ ತೆರವು ಮಾಡಿಸುವಂತೆ ಗ್ರಾಮಸ್ಥರು ಒಕ್ಕೊರಲಿನಿಂದ ಕೋರಿದರು.

ಹೆಲ್ಮೆಟ್ ಧರಿಸದಿರುವುದು ಸೇರಿದಂತೆ ಸಂಚಾರ ನಿಯಮ ಉಲ್ಲಂಘನೆ ಮಾಡಿದರೆ ದಂಡ ವಿಧಿಸಲು ಪೊಲೀಸ್ ಇಲಾಖೆ ರಮ್ಮನಹಳ್ಳಿ ಹಾಗೂ ರಿಂಗ್ ರೋಡ್ ಜಂಕ್ಷನ್‌ನಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಿದೆ. ಅಪರಾಧ ಕೃತ್ಯಗಳು ನಡೆದ ಸಂದರ್ಭದಲ್ಲಿ ಸಿಸಿಟಿವಿ ಫುಟೇಜ್‌ನಿಂದ ಸುಳಿವು ದೊರೆಯಲಿದ್ದು, ಪೊಲೀಸ್ ಇಲಾಖೆಗೆ ಇದು ಮತ್ತೊಂದು ರೀತಿಯ ಅನುಕೂಲವಾಗುತ್ತದೆ. ಆದರೆ ಸಿಸಿಟಿವಿ ಕ್ಯಾಮರಾ ಗ್ರಾಮಸ್ಥರಿಗೆ ಬೆದರು ಬೊಂಬೆಯಂತಾಗಿದೆ. ಹೆಲ್ಮೆಟ್ ಧರಿಸದೆ ದ್ವಿಚಕ್ರ ವಾಹನದಲ್ಲಿ ಸಾಗುತ್ತಿರುವ ಕಾರಣ ದಂಡ ರಸೀದಿ ಅಂಚೆ ಮೂಲಕ ಮನೆಗೆ ಬಂದು ತಲುಪುತ್ತಿದೆ. ಇದರಿಂದ ಒಬ್ಬೊಬ್ಬ ಬೈಕ್ ಹಾಗೂ ಸ್ಕೂಟರ್ ಸವಾರನಿಗೆ 25 ರಿಂದ 30 ಸಾವಿರ ರೂಪಾಯಿ ದಂಡ ಬಾಕಿ ಇದೆ.

ಹೊಲ, ಊರಿನ ಸುತ್ತಮುತ್ತ ಬೈಕ್ ಅಥವಾ ಸ್ಕೂಟರ್‌ನಲ್ಲಿ ಓಡಾಡಲು ಹೆಲ್ಮೆಟ್ ಧರಿಸಿ ಹೋಗಬೇಕಿದೆ. ಇಲ್ಲವೆಂದರೆ ದಂಡ ಕಟ್ಟಿಟ್ಟ ಬುತ್ತಿಯಾಗಿದೆ. ಈ ಹಿನ್ನೆಲೆ ಸಿಸಿಟಿವಿ ಕ್ಯಾಮರಾ ತೆರವು ಮಾಡುವಂತೆ ಗ್ರಾಮಸ್ಥರು ಯದುವೀರ್ ಅವರ ಬಳಿ ಮನವಿ ಮಾಡಿದರು. ಈ ಬಗ್ಗೆ ಪೊಲೀಸ್ ಅಧಿಕಾರಿಗಳ ಜೊತೆ ಮಾತನಾಡುತ್ತೇನೆ ಎಂದು ಯದುವೀರ್ ಭರವಸೆ ನೀಡಿದರು.

ಸಂಸದ ಯದುವೀರ್ ಭೇಟಿಯ ಫಲಶ್ರುತಿ: ಮೈಸೂರು ಅಭಿವೃದ್ಧಿ ಸಂಬಂಧ ನಾಳೆ ಸಿದ್ದರಾಮಯ್ಯ ನೇತೃತ್ವದಲ್ಲಿ ಸಭೆ

ಸ್ಥಳೀಯ ಸಂಸದರು, ಶಾಸಕರು, ಅಧಿಕಾರಿಗಳು ಭಾಗಿ

ಮೈಸೂರು, ಜ.8(ಬಿಎಲ್‌ಯು)– ಮೈಸೂರು ವಿಮಾನ ನಿಲ್ದಾಣ ವಿಸ್ತರಣೆಗೆ ಭೂಮಿ ಹಸ್ತಾಂತರವೂ ಸೇರಿದಂತೆ ಮೈಸೂರಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಂಸದ ಯದುವೀರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಿದ್ದರು. ಅವರ ಮನವಿಗೆ ಸ್ಪಂದಿಸಿದ ಸಿದ್ದರಾಮಯ್ಯ ಅವರು ಜನವರಿ 10ರಂದು ಬೆಂಗಳೂರಿನಲ್ಲಿ ಜನಪ್ರತಿನಿಧಿಗಳು ಹಾಗೂ ಉನ್ನತ ಅಧಿಕಾರಿಗಳ ಸಭೆ ಕರೆದಿದ್ದಾರೆ. ಕಳೆದ ಎರಡು ದಿನಗಳ ಹಿಂದೆ ಯದುವೀರ್ ಅವರು ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಜೊತೆಗೂಡಿ ಮೈಸೂರಿನ ಅಭಿವೃದ್ಧಿ ಬಗ್ಗೆ ಸಿದ್ದರಾಮಯ್ಯ ಜೊತೆ ಚರ್ಚೆ ನಡೆಸಿದ್ದರು.

ಮೈಸೂರು ವಿಮಾನ ನಿಲ್ದಾಣದ ವಿಸ್ತರಣೆ ಹಾಗೂ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂಗೆ ಭೂಮಿ ಹಸ್ತಾಂತರ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳ ಬಗ್ಗೆ ಸಮಾಲೋಚನೆ ನಡೆಸಿದ್ದರು. ಮೈಸೂರಿನ ಸಮಗ್ರ ಅಭಿವೃದ್ಧಿಗೆ ಕೈಜೋಡಿಸಬೇಕೆಂದು ಯದುವೀರ್ ಅವರು ಮುಖ್ಯಮಂತ್ರಿ ಬಳಿ ಮನವಿ ಮಾಡಿದ್ದರು.

ಯದುವೀರ್ ಭೇಟಿ ಮಾಡಿದ ಎರಡೇ ದಿನಕ್ಕೆ ಸಿದ್ದರಾಮಯ್ಯ ಅವರು ಮೈಸೂರು ಜಿಲ್ಲೆಯ ಜನಪ್ರತಿನಿಧಿಗಳು ಹಾಗೂ ಉನ್ನತ ಅಧಿಕಾರಿಗಳ ಸಭೆ ಕರೆದಿದ್ದಾರೆ. ಬೆಂಗಳೂರಿನ ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣದಲ್ಲಿ ಜನವರಿ 10 ರಂದು ಸಭೆ ನಡೆಯಲಿದೆ.


ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಯದುವೀರ್ ಅವರು, ಮೈಸೂರು ಜಿಲ್ಲೆಯನ್ನು ಮಾದರಿ ಜಿಲ್ಲೆಯಾಗಿ ಮಾಡಲು ಈಗಾಗಲೇ ಸಂಕಲ್ಪ ಮಾಡಿದ್ದು, ಅಭಿವೃದ್ಧಿಗೆ ಸಂಬಂಧಿಸಿದಂತೆ ಎಲ್ಲಾ ನಾಯಕರು ಕೈ ಜೋಡಿಸಬೇಕು. ರಾಜಕೀಯವನ್ನು ಬದಿಗಿಟ್ಟು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಬೇಕಿದೆ ಎಂದು ತಿಳಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆದಿರುವ ಸಭೆಯಲ್ಲಿ ನಾನು ಭಾಗವಹಿಸುತ್ತೇನೆ. ಜಿಲ್ಲೆಯ ಎಲ್ಲಾ ನಾಯಕರು ಕೂಡ ತಪ್ಪದೆ ಹಾಜರಾಗಿ ತಮ್ಮ ಸಲಹೆ, ಸೂಚನೆ, ಅಭಿಪ್ರಾಯಗಳನ್ನು ನೀಡಿದರೆ ಅನುಕೂಲವಾಗಲಿದೆ ಎಂದು ಅಭಿಪ್ರಾಯಪಟ್ಟರು. ಮೈಸೂರು ವಿಮಾನ ನಿಲ್ದಾಣದ ವಿಸ್ತರಣೆ, ಅಂತರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ, ಕೈಗಾರಿಕಾ ಬೆಳವಣಿಗೆ, ರಸ್ತೆ ಅಭಿವೃದ್ಧಿ, ರಾಷ್ಟ್ರೀಯ ಹೆದ್ದಾರಿ, ಮೂಲ ಸೌಕರ್ಯ, ರೈಲ್ವೆ ಯೋಜನೆ ಸೇರಿದಂತೆ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಪೂರಕವಾದ ಯೋಜನೆಗಳ ಬಗ್ಗೆ ಮುಖ್ಯಮಂತ್ರಿಗಳ ಬಳಿ ಚರ್ಚಿಸಲಾಗುವುದು ಎಂದು ತಿಳಿಸಿದರು.

ನಮ್ಮ ಕ್ಷೇತ್ರದ ಜನರ ಪರವಾಗಿ ನಾನು ಸದಾ ದನಿಯಾಗಿರುತ್ತೇನೆ. ಅವರ ಸೇವೆಗೆ ನಾನು ಸದಾ ಸಿದ್ದನಿದ್ದೇನೆ ಎಂದು ಯದುವೀರ್ ಹೇಳಿದ್ದರು.

ಮಂಗಳೂರು ಬೀಚ್‌ನಲ್ಲಿ ಮೂವರು ವೈದ್ಯಕೀಯ ವಿದ್ಯಾರ್ಥಿಗಳು ಸಮುದ್ರ ಪಾಲು

ಮಂಗಳೂರು, ಜ.8– ಮಂಗಳೂರಿನ ಕುಳಾಯಿ ಬಳಿಯ ಹೊಸಬೆಟ್ಟು ಬೀಚ್‌ಗೆ ಪ್ರವಾಸಕ್ಕೆ ಬಂದಿದ್ದ ಮೂವರು ಪ್ರವಾಸಿಗರು ಸಮುದ್ರಪಾಲಾಗಿದ್ದಾರೆ. ಮೃತರು ಬೆಂಗಳೂರಿನ ಸತ್ಯವೇಲು, ಚಿತ್ರದುರ್ಗದ ಮಂಜುನಾಥ್ ಮತ್ತು ಶಿವಮೊಗ್ಗದ ಶಿವಕುಮಾರ್ ಎಂದು ತಿಳಿದುಬಂದಿದೆ. ಪ್ರವಾಸಿಗರು ಸಮುದ್ರದ ಅಲೆಗೆ ಸಿಲುಕಿದ್ದನ್ನು ಕಂಡ ಸ್ಥಳೀಯರು ಮೀನುಗಾರರು ರಕ್ಷಣೆಗೆ ಮುಂದಾಗಿದ್ದಾರೆ. ಆದರೆ ಅಷ್ಟರಲ್ಲಾಗಲೇ ಮೂವರು ಸಮುದ್ರಪಾಲಾಗಿದ್ದು ಬೀದರ್ ಮೂಲದ ಪರಮೇಶ್ವರ್ ಎಂಬಾತನನ್ನು ರಕ್ಷಿಸಿದ್ದಾರೆ. ಸುರತ್ಕಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ. ಶಿವಕುಮಾರ್ ಮತ್ತು ಸತ್ಯವೇಲು ಎಂಬವರ ಮೃತದೇಹ ಸಿಕ್ಕಿದ್ದು ಮಂಜುನಾಥ್ ಮೃತದೇಹಕ್ಕೆ ಹುಡುಕಾಟ ನಡೆಯುತ್ತಿದೆ. ಇವರೆಲ್ಲರೂ ಬೆಂಗಳೂರಿನ ಎಎಂಸಿ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳು ಎಂದು ತಿಳಿದುಬಂದಿದೆ.



ನಕ್ಕರೆ ಅದೇ ಸ್ವರ್ಗ

ಟೀಚರ್ : ಯಾರದ್ದೋ ತಪ್ಪಿಗೆ, ಇನ್ಯಾರಿಗೋ ಶಿಕ್ಷೆ. ಇದಕ್ಕೊಂದು ಉದಾಹರಣೆ ಕೊಡು.

ಗುಂಡ : ಹುಡುಗಿಗೆ ಲೈನ್ ಹೊಡೆದದ್ದು ಕಣ್ಣು, ಉದುರಿದ್ದು ಹಲ್ಲು...!

ಮೈಸೂರು ಮಿತ್ರ
ಗುರುವಾರ, 9 ಜನವರಿ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಇತರರಿಗೆ ಕೇಡು ಬಗೆಯಬೇಡಿ, ಇತರರ ಮೇಲೆ ಕಾಲು ಇಡಬೇಡಿ. ನಿಮ್ಮ ಕೈಲಾದಷ್ಟು ಇತರರಿಗೆ ಹಿತವನ್ನೇ ಮಾಡಿರಿ, ಸಾಧ್ಯವಾದಷ್ಟು ಒಳ್ಳೆಯ ಕೆಲಸಗಳಲ್ಲಿ ತೊಡಗಿ. –ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ರಾವಣನ ಮಾತಿಗೆ ಮನಸೋತವ, ರಾಮನ ಮಾತಿಗೆ ಜಾಣನಾಗುವನೇ?

ನಿಮ್ಮ ಪತ್ರಗಳು

■ ಕನ್ನಡ ಸಾರಸ್ವತ ಲೋಕದ ನಕ್ಷತ್ರ ನಾ.ಡಿಸೋಜ

ಮಾನ್ಯರೆ,



ಕನ್ನಡ ಭಾಷೆ ಎಂಬ ಸಾಹಿತ್ಯದ ಆಕಾಶದಲ್ಲಿ ಹಲವಾರು ನಕ್ಷತ್ರಗಳಿವೆ ಮತ್ತು ತಮ್ಮದೆ ಆದ ಪ್ರತಿಭೆಯಿಂದ ಸದಾ ಮಿನುಗುತ್ತಿರುತ್ತವೆ. ಅದರಲ್ಲಿನ ಒಂದು ನಕ್ಷತ್ರ ನಾ.ಡಿಸೋಜ ಅಥವಾ ನಾರ್ಬರ್ಟ್ ಡಿಸೋಜ ನಮ್ಮನ್ನು ಅಗಲಿರುವುದು ನೋವಿನ ಸಂಗತಿ.

ನಾರ್ಬರ್ಟ್ ಡಿಸೋಜ ಮೊದಲಿಗೆ 'ಪ್ರಪಂಚ' ಪತ್ರಿಕೆಗೆ ಕಥೆಗಳನ್ನು ಬರೆಯತೊಡಗಿದರು. ನಂತರ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲೂ ಇವರ ಕಥೆಗಳು ಪ್ರಕಟವಾಗತೊಡಗಿದವು. ಡಿಸೋಜರ ಮೊದಲ ಕಾದಂಬರಿ 'ಬಂಜೆ ಬೆಂಕಿ' ಪ್ರಕಟವಾದದ್ದು 1964ರಲ್ಲಿ. ಆ ನಂತರ ಮಂಜಿನ ಕಾನು, ಈ ನೆಲ ಈ ಜಲ, ಕೆಂಪು ತ್ರಿಕೋನ, ನೆಲೆ, ಮಾನವ, ಹೀಗೆ ಇವರು ಬರೆದಿರುವ ಕಾದಂಬರಿಗಳು 40ಕ್ಕೂ ಅಧಿಕ. ಪರಿಸರ ನಾಶ, ಕ್ರೈಸ್ತ ಜನಾಂಗದ ಹಿನ್ನೆಲೆ, ಭ್ರಷ್ಟಾಚಾರದ ವಸ್ತು, ಹಿಂದುಳಿದ ಬುಡಕಟ್ಟು ಜನಾಂಗದ ಚಿತ್ರಣ ಹೀಗೆ ಹಲವಾರು ವಿಷಯಗಳನ್ನೊಳಗೊಂಡ ಅವರ ಕಾದಂಬರಿಗಳು ಓದುಗರ ಮನಸೂರೆಗೊಂಡಿವೆ.ಇವರು ಪತ್ರಿಕೆಗಳಿಗೆ ಬರೆದ ಸಣ್ಣ ಕಥೆಗಳು 9 ಸಂಕಲನಗಳಲ್ಲಿ ಸಂಕಲಿತಗೊಂಡಿದ್ದು, ಸಮಗ್ರ ಕಥೆಗಳು 2 ಸಂಪುಟಗಳಲ್ಲಿ ಪ್ರಕಟವಾಗಿವೆ.

ನಾ ಡಿಸೋಜ ಅವರು ಬರೆದ ಹಲವಾರು ಕಾದಂಬರಿಗಳು ಚಲನಚಿತ್ರಗಳಾಗಿವೆ. ಇವರ ಚಿತ್ರಗಳ ಪ್ರಮುಖ ಕಥಾಹಂದರ ನಾಡಿಗೆ ಬೆಳಕನ್ನು ನೀಡಲು ಪ್ರಾರಂಭಿಸಿದ ವಿದ್ಯುಚ್ಛಕ್ತಿ ಯೋಜನೆಯ ಅಡಿಯಲ್ಲಿ ಬಹಳಷ್ಟು ಜನರ ಬದುಕುಗಳು ಕತ್ತಲೆಯಲ್ಲಿ ಕರಗಿ ಹೋಗುವ ವಸ್ತುವನ್ನಾಗಿ ಉಳ್ಳ 'ಮುಳುಗಡೆ' ಕಾದಂಬರಿಯು ಸುಧಾ ಯುಗಾದಿ ಕಾದಂಬರಿ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿದೆ, ಸುರೇಶ್ ಹೆಬ್ಳೀಕರ್‌ರವರ ನಿರ್ದೇಶನದಲ್ಲಿ 'ಕಾಡಿನ ಬೆಂಕಿ', ಗಿರೀಶ್ ಕಾಸರವಳ್ಳಿಯವರ ನಿರ್ದೇಶನದಲ್ಲಿ 'ದ್ವೀಪ (ಚಲನಚಿತ್ರ)', ಸಿರಿಗಂಧ ಶ್ರೀನಿವಾಸಮೂರ್ತಿಯವರ ನಿರ್ದೇಶನದಲ್ಲಿ 'ಬಳುವಳಿ', ಕೋಡ್ಲು ರಾಮಕೃಷ್ಣರವರ ನಿರ್ದೇಶನದಲ್ಲಿ 'ಬೆಟ್ಟದಪುರದ ದಿಟ್ಟ ಮಕ್ಕಳು' ಮತ್ತು ಮನುರವರ ನಿರ್ದೇಶನದಲ್ಲಿ 'ಅಂತರ್ಯ' ಕಾದಂಬರಿಗಳು ಚಲನಚಿತ್ರಗಳಾಗಿಯೂ ಜನಪ್ರಿಯತೆಯನ್ನು ಪಡೆದಿವೆ. ಇವುಗಳಲ್ಲಿ 'ಕಾಡಿನ ಬೆಂಕಿ' ಚಿತ್ರ ರಜತ ಕಮಲ ಪ್ರಶಸ್ತಿಯನ್ನೂ, 'ದ್ವೀಪ' ಚಿತ್ರ 'ಸ್ವರ್ಣ ಕಮಲ' ಪ್ರಶಸ್ತಿಯನ್ನೂ ಗಳಿಸಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಹಿರಿಮೆ ಗಳಿಸಿವೆ.ದೂರದರ್ಶನ ಮಾಧ್ಯಮದಲ್ಲಿ ಸಹ ಮಕ್ಕಳ ಧಾರಾವಾಹಿ, ಕಥೆಗಳು, ಹಲವಾರು ಕಾದಂಬರಿಗಳು ನಾಟಕಕ್ಕೆ ರೂಪಾಂತರವಾಗಿ ಪ್ರದರ್ಶಿತವಾಗಿವೆ. ನಾ ಡಿಸೋಜ ಕನ್ನಡ ಸಾಹಿತ್ಯ ಲೋಕದ ಸದಾ ಮಿನುಗುವ ನಕ್ಷತ್ರವಾಗಿದ್ದು, ಅವರ ನಿಧನ ಕನ್ನಡ ಸಾರಸ್ವತ ಲೋಕಕ್ಕೆ ತುಂಬಲಾರದ ನಷ್ಟವಾಗಿದ್ದು, ಈ ಅಂಕಣವನ್ನು ಅವರಿಗೆ ಅರ್ಪಿಸುತ್ತಾ ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಆಶಿಸೋಣ.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.

■ ಮಾಂಟೆಸ್ಸರಿಯಂತೆ ಅಂಗನವಾಡಿಗಳಾಗಲಿ

ಮಾನ್ಯರೆ,

ಇತ್ತೀಚೆಗೆ ನನಗೆ ಪರಿಚಯದವರೊಬ್ಬರ ಮಗುವಿಗೆ ಬೆಂಗಳೂರಿನಲ್ಲಿ ಮಾಂಟೆಸ್ಸರಿಗೆ ಸೇರಿಸಲು ಹೋದಾಗ ಅಲ್ಲಿನ ಫೀಸು ಕೇಳಿ ದಂಗು ಬಡಿದು ಹೋಗಿದ್ದೆ. ವರ್ಷಕ್ಕೆ ಒಂದು ಲಕ್ಷದ ಹತ್ತು ಸಾವಿರ ಎಂದಿದ್ದರು. ಅದೂ ಕೇವಲ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1 ವರೆಗೆ ಮಾತ್ರ, ಇನ್ನು ಮಕ್ಕಳೋ ಐದು ವರುಷದ ಒಳಗೆ. ಅವರಿಗೆ ಮಕ್ಕಳ ಪೋಷಕರೇ ದಿಂಬು, ಬ್ಯಾಗು ಕೊಟ್ಟು ಬಿಡಬೇಕು. ಅಲ್ಲಿ ಮಕ್ಕಳಿಗೆ ದಿನವೂ ಉಷ್ಣತೆ ಚೆಕ್ ಮಾಡುತ್ತಾರೆ, ಹಾಗೆ ಹೀಗೆ.. ಬಿಡಿ ಅವೆಲ್ಲ.

ಗಡಿ ಜಿಲ್ಲೆಯ ಚಾಮರಾಜನಗರದಿಂದ ಸ್ವಲ್ಪ ಮುಂದೆ ಒಂದು ಅಂಗನವಾಡಿ ಕೇಂದ್ರವಿದೆ. ಯಾವುದೋ ಕಾರ್ಯನಿಮಿತ್ತ ಅಲ್ಲಿಗೆ ಹೋಗಬೇಕಾಗಿ ಬಂದಿತ್ತು. ಸುಮಾರು ಐವತ್ತೈದು ವಯಸ್ಸಿನ ಅಂಗನವಾಡಿ ಶಿಕ್ಷಕಿ ಅಲ್ಲಿದ್ದರು. ಒಂದು ಪುಟ್ಟ ಕಟ್ಟಡ. ಅದೂ ಶಿಥಿಲವಾಗಿ ಹೋಗಿತ್ತು. ಒಳಗಡೆ ಸುಮಾರು ಇಪ್ಪತ್ತರಿಂದ ಇಪ್ಪತ್ತೈದು ಪುಟ್ಟ ಮಕ್ಕಳಿದ್ದರು. ಅಲ್ಲಿ ಫ್ಯಾನ್ ಇರಲಿಲ್ಲ. ನೆಲವೋ ಕಡಪ ಕಲ್ಲಿನದು. ಹೊರಗಡೆಯೇ ರಾಷ್ಟ್ರೀಯ ಹೆದ್ದಾರಿ. ಆದರೆ ಅಲ್ಲಿನ ಶಿಕ್ಷಕಿ ಹೇಳಿಕೊಡುತ್ತಿದ್ದ ಪಾಠ ಮಾತ್ರ ಉತ್ತಮ ಗುಣಮಟ್ಟದ್ದಾಗಿತ್ತು. ಇನ್ನು ಅಲ್ಲಿಗೆ ಮಕ್ಕಳ ಪೌಷ್ಟಿಕತೆಗೆಂದು ಸರ್ಕಾರ ನೀಡುವ ಕೆಲವು ರಾಗಿ ಹಿಟ್ಟು, ಇತರೆ ಪದಾರ್ಥಗಳು ಅಲ್ಲಿಯೇ ಇದ್ದವು. ಕೆಲವೊಂದನ್ನು ತೆಗೆದು ಮೂಸಿದೆ. ಕೆಲವುದರ ಎಕ್ಸ್‌ಪೈರಿ ದಿನಾಂಕ ಮುಗಿದು ಹೋಗಿತ್ತು. ಮತ್ತೆ ಕೆಲವು ಪ್ಯಾಕೆಟ್ಟುಗಳು ಡಿಡಿಟಿ ದುರ್ನಾತ ಸೂಸುತ್ತಿತ್ತು.

ಮಹಾನಗರಗಳಲ್ಲಿರುವ ಮಾಂಟೆಸ್ಸರಿಗಿಂತ ನಮ್ಮ ಅಂಗನವಾಡಿ ಶಿಕ್ಷಣದ ಗುಣಮಟ್ಟವೇನೂ ಕಡಿಮೆ ಇಲ್ಲ. ಮಕ್ಕಳ ಕಲಿಕೆಯಲ್ಲಿ ಶಿಕ್ಷಕಿಯರು ಅನುಸರಿಸುತ್ತಿರುವ ವಿಧಾನಗಳಂತೂ ಸೂಪರ್. ಸರ್ಕಾರದ ಬಳಿ ಮೂಲಸೌಕರ್ಯ ನೀಡಲು ಕೊರತೆಯೇನಿಲ್ಲ. ಶಾಸಕರ ಅನುದಾನ ಎಂಬ ದೊಡ್ಡ ಫಲಕದಲ್ಲಿ ಪುಟ್ಟ ಕೊಠಡಿಯಲ್ಲಿರುವ ಕೂಡಿಡುವ ಮಕ್ಕಳ ಪಾಡು ಬದಲಾಗಲೇ ಬೇಕು. ಅವರಿಗೆ ನೀಡುವ ಪೌಷ್ಟಿಕಾಂಶದ ಆಹಾರಗಳು ನಿಗದಿತ ಸಮಯಕ್ಕೆ ತಲುಪಬೇಕು. ಅದೂ ಕೂಡ ಮಕ್ಕಳು ಬಳಸುವಂತಿರಬೇಕು. ಕೆಲವು ಕಾರ್ಯಕರ್ತೆಯರು ಅದನ್ನೇ ಕಾಳಸಂತೆಯಲ್ಲಿ ಮಾರಿರುವ ಬಗ್ಗೆ ದೂರುಗಳು ಕೇಳಿ ಬರುತ್ತಿವೆಯಷ್ಟೆ ಒಂದಂತೂ ನಿಜ. ಸರ್ಕಾರದ ನಿರ್ಲಕ್ಷ್ಯದಿಂದ ಪುಟಾಣಿ ಮಕ್ಕಳಿಗೆ ಅಕ್ಷರ ನೀಡುವ ಅಂಗನವಾಡಿಗಳು ಮೂಲಸೌಕರ್ಯ ಕೊರತೆಯಿಂದ ಅಧೋಗತಿಗೆ ತಲುಪಿವೆ. ಹಲವೆಡೆ ಸ್ವಂತ ಕಟ್ಟಡವಿಲ್ಲ. ಇನ್ನು ಮಕ್ಕಳಿಗೆ ಆಟಿಕೆಗಳೇ ಇಲ್ಲ, ಆಟದ ಮೈದಾನವಂತೂ ಇಲ್ಲವೇ ಇಲ್ಲ. ಬಾಡಿಗೆ ಕಟ್ಟಡಕ್ಕೆ ನೀಡುವುದಕ್ಕೆ ಹಣಕ್ಕಾಗಿ ಅಂಗಲಾಚಬೇಕಾದ ಸ್ಥಿತಿ ಇದೆ. ಏಕೆ ಸರ್ಕಾರ ಈ ನಿಟ್ಟಿನಲ್ಲಿ ಗಮನ ಹರಿಸುತ್ತಿಲ್ಲ?

–ವಿಜಯ್ ಹೆಮ್ಮಿಗೆ, ಮೈಸೂರು

● ಪ್ರೊ. ಅಸ್ಸಾದಿ ಅವರಿಗೆ ನುಡಿ ನಮನ



ಮಾನ್ಯರೇ

ಮೈಸೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ವಿಭಾಗದ ವಿಶ್ರಾಂತ ಮುಖ್ಯಸ್ಥರಾದ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ವೈಚಾರಿಕ ಚಿಂತನೆಯ ಉಪನ್ಯಾಸವನ್ನು ನೀಡುವುದರ ಮೂಲಕ ಖ್ಯಾತಿ ಪಡೆದಿದ್ದ ಪ್ರೊ ಮುಜಾಫರ್ ಅಸ್ಸಾದಿ ಅವರು ಬಾರದ ಲೋಕಕ್ಕೆ ಪಯಣ ಬೆಳೆಸಿದ್ದಾರೆ. ಆದಿವಾಸಿ ಮತ್ತು ಬುಡಕಟ್ಟು ಸಮುದಾಯಗಳ ಕುರಿತು ವಿಶೇಷ ಅಧ್ಯಯನ ಮಾಡುವುದರ ಮುಖಾಂತರ ರಾಜ್ಯಕ್ಕೆ ಅವರ ಜೀವನದ ಸುಸ್ಥಿರ ಮಟ್ಟವನ್ನು ಬೆಳಕಿಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅಸ್ಸಾದಿಯವರು ಸಾಕಷ್ಟು ಪುಸ್ತಕಗಳನ್ನು ಬರೆಯುವುದರ ಮೂಲಕ ಹೆಸರುಗಳಿಸಿ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಜೊತೆಗೆ ಸಾಕಷ್ಟು ವಿದ್ಯಾರ್ಥಿಗಳಿಗೆ ಪಿಎಚ್.ಡಿ ಮಾರ್ಗದರ್ಶಕರಾಗಿ ಸಲಹೆಗಳನ್ನು ನೀಡಿ ಉತ್ತಮ ಹೆಸರು ಪಡೆದು, ತಮ್ಮ ವೃತ್ತಿ ಬದುಕಿನ ಜೀವನದಲ್ಲಿ ಉತ್ತಮ ವ್ಯಕ್ತಿಯಾಗಿ ಬದುಕಿದ್ದರು.

–ಪವನ್ ಜಯರಾಂ, ಸಿದ್ದಯ್ಯನಪುರ, ಚಾ.ನಗರ.



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ಮಂಥನ

ಸಮಾಜಕ್ಕೆ ಕಣ್ಣಾಗಬಹುದು ನಾವು

ನಾವು ಜೀವಿಸುವ ಪ್ರಪಂಚದಲ್ಲಿ ಯಾವಾಗಲೂ ನಾವು ಭೇದವನ್ನು ನೋಡುತ್ತಲೇ ಇರುತ್ತೇವೆ.

ಇಲ್ಲಿ ಯಾರೂ ಮುಖ್ಯರಲ್ಲ
ಇಲ್ಲಿ ಯಾರೂ ಅಮುಖ್ಯರಲ್ಲ

ಎಂದು ಕುವೆಂಪು ಅವರು ಹೇಳಿದ ಮಾತನ್ನು ನಂಬಲು, ಅನುಸರಿಸಲು ಮನಸು ಬಯಸುತ್ತದಾದರೂ ಅದು ದುಃಸಾಧ್ಯ ಎಂಬುದು ನಮಗೂ ತಿಳಿದಿದೆ. ಎಲ್ಲ ಜೀವಿಗಳಿಗಾಗಿ ಈ ಪ್ರಪಂಚ ವನ್ನು ದೇವರು ಸೃಷ್ಟಿ ಮಾಡಿದ್ದಾನಾದರೂ, ನಾವು ಮಾನವರು ಸ್ವಲ್ಪ ಹೆಚ್ಚೇ ಈ ಭೂಮಿಯ ಸಂಪತ್ತನ್ನು ಅನುಭವಿಸುತ್ತಿದ್ದೇವೆ ಮತ್ತು ಹಕ್ಕನ್ನು ಪ್ರತಿಪಾದಿಸುತ್ತಿದ್ದೇವೆ. ಇಂಗ್ಲಿಷ್ ಕಾದಂಬರಿಕಾರ ಜಾರ್ಜ್ ಆರ್ವೆಲ್ Some are more Equal ಎನ್ನುತ್ತಾನೆ. ನಾವು ಆ More Equal ಗುಂಪಿಗೆ ಸೇರಿದವರು.

ಮಾನವ ಕೇವಲ ಪ್ರಾಣಿ ಪಕ್ಷಿಗಳನ್ನು ಪಳಗಿಸಲಿಲ್ಲ, ಇಡೀ ಭೂಮಿಯನ್ನೇ ತನ್ನಿಚ್ಛೆಗೆ ತಕ್ಕಂತೆ ಪಳಗಿಸಿಕೊಂಡು ಬಿಟ್ಟಿದ್ದಾನೆ. ಬುಗುರಿಯನ್ನಾಗಿಸಿ ಆಡಿಸುತ್ತಿದ್ದಾನೆ. ಎಂತಹ ವಿಷಮ ಪರಿಸ್ಥಿತಿಯನ್ನೂ ತನಗೆ ತಕ್ಕಂತೆ ಬದಲಾಯಿಸಿಕೊಳ್ಳಬಲ್ಲ ಚಾಕಚಕ್ಯತೆಯನ್ನು ಮನುಷ್ಯ ರೂಢಿಸಿಕೊಂಡು ಬಿಟ್ಟಿದ್ದಾನೆ. ಹಾಗಾಗಿಯೇ ಎಂತಹ ಸಮಯದಲ್ಲೂ ಎಂತಹಾ ಪರಿಸ್ಥಿತಿಯಲ್ಲೂ ತನ್ನನ್ನು ತಾನು ಅದಕ್ಕೆ ತಕ್ಕಂತೆ ಬದಲಾಯಿಸಿಕೊಂಡು ಸುಖವಾಗಿ ಜೀವಿಸಬಲ್ಲ.

ಜನವರಿ 5ರ 'ಮೈಸೂರು ಮಿತ್ರ' ದಿನಪತ್ರಿಕೆಯಲ್ಲಿ, ದೃಷ್ಟಿ ವಿಕಲಚೇತನರು ಲಿಂಗಾಂಬುಧಿ ಸಸ್ಯೋದ್ಯಾನಕ್ಕೆ ಭೇಟಿ ನೀಡಿದ ಬಗ್ಗೆ ವರದಿ ಪ್ರಕಟವಾಗಿತ್ತು. ನಮ್ಮಂತೆಯೇ ಅವರುಗಳೂ ಹೌದಾದರೂ ಕೊಂಚ ಭಿನ್ನ. ದೃಷ್ಟಿ ಇಲ್ಲದಿದ್ದರೂ ಆ ಮಕ್ಕಳು ಅಲ್ಲಿನ ಸಸ್ಯ ವೈವಿಧ್ಯತೆಯನ್ನು ಆಸ್ವಾದಿಸಿ ಸ್ಪರ್ಶಿಸಿ, ತಾವೂ ಒಂದು ತೆಂಗಿನ ಸಸಿ ನೆಟ್ಟು ನೀರುಣಿಸಿ ಸಂತಸ ಪಟ್ಟಿದ್ದರ ಬಗ್ಗೆ ಓದಿ ನನಗೆ ಈ ಎಲ್ಲ ಯೋಚನೆಗಳು ಮುತ್ತಿಕೊಂಡವು.

ದೇವರು ನಮ್ಮನ್ನು ಹೇಗಾದರೂ ಸೃಷ್ಟಿಸಿರಲಿ, ನಾವು ನಂಬಿರುವ ನಮ್ಮ ಪಾಪ ಪುಣ್ಯ ನಮ್ಮನ್ನು ಹೇಗಾದರೂ ನಡೆಸುತ್ತಿರಲಿ, ಅವೆಲ್ಲವನ್ನೂ ಎದುರಿಸಿ ಮನುಷ್ಯ ಬದುಕು ರೂಪಿಸಿಕೊಳ್ಳುವ ಪರಿ ಅನನ್ಯ..

ಜನವರಿ 4ಕ್ಕೆ ವಿಶ್ವ ಬ್ರೈಲ್ ದಿನಾಚರಣೆಯ ಅಂಗವಾಗಿ ಆ ಮಕ್ಕಳು ಸಸ್ಯೋದ್ಯಾನಕ್ಕೆ ಭೇಟಿ ನೀಡಿದ್ದರು. ಕಣ್ಣುಗಳು ಮನುಷ್ಯನ ಅತಿಮುಖ್ಯ ಅವಯವಗಳು. ಅವುಗಳು ಇಲ್ಲವಾದರೆ ಬದುಕು ಸುಲಭವಲ್ಲ. ಆದರೆ ಅಂತಹವರ ಬಾಳಲ್ಲೂ ತನ್ನ ಕೊಡುಗೆಯ ಮೂಲಕ ಜ್ಞಾನದ ಬೆಳಕನ್ನು ತುಂಬಿ ಹೊಸ ಅರ್ಥ ನೀಡಿದ ಮಹಾತ್ಮ ಲೂಯಿ ಬ್ರೈಲ್‌ನ ಜನ್ಮದಿನವನ್ನು ಬ್ರೈಲ್ ದಿನ ಎಂದು ಆಚರಿಸುತ್ತೇವೆ.

ಹುಟ್ಟಿನಿಂದ ಕುರುಡನಲ್ಲದಿದ್ದರೂ ತನ್ನ ತಂದೆಯ ಕುದುರೆ ಜೀನು ತಯಾರಿಸುವ ಘಟಕದಲ್ಲಿ ಆದ ಅಪಘಾತದಿಂದ ಒಂದು ಕಣ್ಣನ್ನು ಲೂಯಿ ಬ್ರೈಲ್ ತನ್ನ ಮೂರನೆಯ ವಯಸ್ಸಿನಲ್ಲಿ ಕಳೆದುಕೊಳ್ಳುತ್ತಾನೆ. ಎರಡನೆಯ ಕಣ್ಣಿಗೂ ಸೋಂಕು ತಗುಲಿ ತನ್ನ 5ನೇ ವಯಸ್ಸಿನಲ್ಲಿ ಪೂರ್ಣ ಪ್ರಮಾಣದಲ್ಲಿ ದೃಷ್ಟಿ ಕಳೆದುಕೊಂಡ ಬ್ರೈಲ್ ಸುಮ್ಮನೆ ಕೂರಲಿಲ್ಲ. ಓದಿನಲ್ಲಿ ಜಾಣನಿದ್ದ ಅವನು ಶಾಲೆಗೆ ಹೋಗುತ್ತಾನೆ. ಪ್ಯಾರಿಸ್‌ನಲ್ಲಿ ಅಂಧರಿಗಾಗಿಯೇ ಮೊದಲಬಾರಿಗೆ ಸ್ಥಾಪಿಸಲಾಗಿದ್ದ Royal Institute for Blind Youthನಲ್ಲಿ ಶಿಕ್ಷಣ ಮುಂದುವರೆಸುತ್ತಾನೆ. ಅಲ್ಲಿ ವಾಲೆಂಟಿನ್ ಹೌಯ್ ಮತ್ತು ಚಾರ್ಲ್ಸ್ ಬಾರ್ಬಿಯರ್ ಅವರು ದೃಷ್ಟಿಹೀನರಿಗಾಗಿಯೇ ರೂಪಿಸಿದ್ದ ವ್ಯವಸ್ಥೆಯಲ್ಲಿ ಕಲಿಯುತ್ತಾನೆ. ಆದರೆ ಅವರಿಬ್ಬರೂ ದೃಷ್ಟಿಯುಳ್ಳವರಾದ್ದರಿಂದ ಆ ವ್ಯವಸ್ಥೆ ಪರಿಪೂರ್ಣವಾಗಿರಲಿಲ್ಲ. ಸ್ವತಃ ದೃಷ್ಟಿಹೀನನಾಗಿದ್ದ ಬ್ರೈಲ್ ತನ್ನಂತವರಿಗಾಗಿ ಒಂದು ಹೊಸ ಲಿಪಿಯನ್ನು ಕಂಡು ಹಿಡಿಯಲೇಬೇಕೆಂದು ಶ್ರಮಿಸಿ ಒಂದು ಲಿಪಿಯನ್ನು ರೂಪಿಸುತ್ತಾನೆ. ಅದೇ ಬ್ರೈಲ್ ಲಿಪಿ. ಚುಕ್ಕಿಗಳನ್ನು ಅಡ್ಡ ಮತ್ತು ಉದ್ದವಾಗಿ ಮೂಡಿಸಿ ಬರೆಯುವ ಈ ವ್ಯವಸ್ಥೆ ಎಷ್ಟು ಪ್ರಯೋಜನಕಾರಿಯಾಯಿತೆಂದರೆ, ಇಂದಿಗೂ ಅದೇ ಜಾರಿಯಲ್ಲಿದೆ.


ಕ್ಷಯರೋಗಿಯಾಗಿದ್ದ ಬ್ರೈಲ್ ಅದಕ್ಕೆ ಹೆದರದೆ ತನ್ನ ಜೀವನವನ್ನು ಅಂಧರ ಜೀವನಮಟ್ಟದ ಸುಧಾರಣೆಗಾಗಿ ಬ್ರೈಲ್ ಲಿಪಿಯನ್ನು ಇನ್ನಷ್ಟು ಉತ್ತಮಗೊಳಿಸುವುದರಲ್ಲಿ ತೊಡಗಿಕೊಂಡ. ಹಲವಾರು ಪುಸ್ತಕಗಳನ್ನು ಬರೆದ. ಸ್ವತಃ ಸಂಗೀತಗಾರನಾಗಿದ್ದ ಅವನು, ಬ್ರೈಲ್ ಲಿಪಿಯನ್ನು ಸಂಗೀತದ ನೋಟ್‌ಗಳಿಗೂ ಹೊಂದಿಕೆಯಾಗುವಂತೆ ರೂಪಿಸಿದ. ಕೇವಲ ತನ್ನ ನಲವತ್ತ ಮೂರನೆಯ ವಯಸ್ಸಿಗೆ ತೀರಿಕೊಂಡ ಲೂಯಿ ಬ್ರೈಲ್ ಇಡೀ ಮನುಕುಲಕ್ಕೆ ನೀಡಿದ ಕೊಡುಗೆಯ ಗೌರವಾರ್ಥ ಅವನ ಜನ್ಮದಿನವನ್ನು ಬ್ರೈಲ್ ದಿನ ಎಂದೇ ಆಚರಿಸಲಾಗುತ್ತದೆ.

ಇಂದು 133 ಭಾಷೆಗಳಲ್ಲಿ ಬ್ರೈಲ್ ಲಿಪಿ ಬಳಸಬಹುದು. ಕನ್ನಡ ಭಾಷೆಯನ್ನೂ ಬ್ರೈಲ್ ಲಿಪಿಯಲ್ಲಿ ಬರೆಯಬಹುದು. 1829ರಲ್ಲಿ ಬ್ರೈಲ್ ಲಿಪಿ ಬಳಸಿ ಮೊದಲ ಪುಸ್ತಕವನ್ನು ರಚಿಸಲಾಯಿತು. ನಂತರದ ವರ್ಷಗಳಲ್ಲಿ ಸಾವಿರಾರು ಪುಸ್ತಕಗಳು ಬ್ರೈಲ್ ಲಿಪಿಯಲ್ಲಿ ರೂಪುಗೊಂಡು ದೃಷ್ಟಿ ವಿಕಲಚೇತನರ ಜ್ಞಾನಚಕ್ಷುಗಳಾಗಿವೆ. ಹಲವಾರು ಕಾರಣಗಳಿಂದ ಇದ್ದ ದೃಷ್ಟಿಯನ್ನು ಕಳೆದುಕೊಳ್ಳುವವರು ಇದ್ದರೆ, ಹುಟ್ಟಿನಿಂದಲೇ ದೃಷ್ಟಿ ವಂಚಿತರಾದವರೂ ಇದ್ದಾರೆ. ಒಂದು ಅಂದಾಜಿನ ಪ್ರಕಾರ, 15 ಲಕ್ಷಕ್ಕೂ ಹೆಚ್ಚು ದೃಷ್ಟಿವಿಕಲಚೇತನರು ಭಾರತದಲ್ಲಿಯೇ ಇದ್ದಾರೆ.

ನಾನು ಆಗಲೇ ಹೇಳಿದ ಹಾಗೆ ಮನುಷ್ಯ ಅತಿಬುದ್ಧಿಶಾಲಿ. ಹೇಗಿದ್ದರೂ ನಿಭಾಯಿಸಬಲ್ಲ. ಹಾಗಾಗಿಯೇ ಇಂದು ದೃಷ್ಟಿವಿಕಲಚೇತನರು ಬಹುತೇಕ ಎಲ್ಲ ಕ್ಷೇತ್ರಗಳಲ್ಲೂ ಮುನ್ನಡೆ ಸಾಧಿಸಿದ್ದಾರೆ. ದೃಷ್ಟಿ ಹೀನತೆಯನ್ನು ಸವಾಲಾಗಿ ಸ್ವೀಕರಿಸಿ ಸಾಧಿಸಿದವರು ನಮ್ಮ ನಿಮ್ಮ ನಡುವೆಯೇ ಇದ್ದಾರೆ. ದೃಷ್ಟಿ ವಿಕಲಚೇತನರಾಗಿದ್ದೂ ಓದು, ಬರಹ, ಕ್ರೀಡೆ, ಸಂಗೀತ ಇತ್ಯಾದಿಗಳಲ್ಲಿ ಹಲವು ಸಾಧನೆಗಳನ್ನು ಮಾಡಿದ ಮಹಿಳೆಯರು ಪುರುಷರು ನಮಗೆ ಉದಾಹರಣೆಯಾಗಿ ಸಿಗುತ್ತಾರೆ.



ಲೂಯಿ ಬ್ರೈಲ್



ಲೂಯಿ ಬ್ರೈಲ್ ಲಿಪಿ



ವೈ.ಜಿ.ಪರಮೇಶ್ವರ



ಹೆಲೆನ್ ಕೆಲರ್



ಪಂಚಾಕ್ಷರಿ ಗವಾಯಿ

> "ತಂತ್ರಜ್ಞಾನ ಇಂದು ದಾಪುಗಾಲಿಟ್ಟಿದ್ದು, ದೃಷ್ಟಿವಿಕಲಚೇತನರೂ ಎಲ್ಲ ಹೊಸ ಹೊಸ ಗ್ಯಾಡ್ಜೆಟ್‌ಗಳನ್ನು ಸುಲಭವಾಗಿ ಉಪಯೋಗಿಸುವಂತೆ ವಿಜ್ಞಾನಿಗಳು ರೂಪಿಸುತ್ತಿದ್ದಾರೆ. ಇದು ಇವ ರನ್ನು ಇನ್ನಷ್ಟು ಅಪ್ಡೇಟ್ ಮಾಡಿ ಸಮಾಜದ ಮುಖ್ಯ ವಾಹಿನಿಯಲ್ಲಿ ಬೆರೆಯುವಂತೆ ಮಾಡಿದೆ. ಮುಖ್ಯ ವಾಗಿ ಈಗ ಮೂಲಸೌಕರ್ಯದಲ್ಲಿ ಒಂದಾಗಿ ರುವ ಮೊಬೈಲ್‌ಗಳು ದೃಷ್ಟಿವಿಕಲಚೇತನರು ಬಳಸಲು ಅನುಕೂಲಕರವಾಗಿ ರೂಪಿಸಲ್ಪಡುತ್ತಿದೆ.

ದೃಷ್ಟಿವಿಕಲಚೇತನರೆಂದರೆ ಅನುಕಂಪದಿಂದ ನೋಡುವ ಕಾಲ ಇತ್ತು. ಆದರೆ ಒಂದಷ್ಟು ಸಾಹಸಿಗಳು ಜನರ ದೃಷ್ಟಿಯನ್ನೇ ಬದಲಾಯಿಸಿ ಲೋಕವು ಎಲ್ಲರಿಗೂ ಸಮನಾದ ಅವಕಾಶ ಕೊಡುತ್ತದೆ ಎಂದು ತೋರಿಸಿಕೊಟ್ಟು ದೃಷ್ಟಿವಿಕಲಚೇತನರ ಜೀವನವೂ ಸಹ್ಯ ಎಂದು ತೋರಿಸಿಕೊಟ್ಟರು.ನಮ್ಮ ಸುತ್ತಮುತ್ತ ಕಣ್ಣಾಡಿಸಿದರೆ ಮೂಗಿನ ಮೇಲೆ ಬೆರಳಿಡುವಂತಹ ಸಾಧನೆಗಳನ್ನು ದೃಷ್ಟಿವಿಕಲ ಚೇತನರು ಮಾಡಿದ್ದಾರೆ.

ಭಾರತದಲ್ಲಿಯೇ ಮೊದಲ ಪಿಹೆಚ್.ಡಿ ಮಾಡಿದ ಸೌರಭ್ ರಾಯ್, ಮೊದಲ ವೈದ್ಯ ನಮ್ಮ ಕರ್ನಾಟಕದ ವೈ.ಜಿ.ಪರಮೇಶ್ವರ, ಮೊದಲ ವಕೀಲ ಸಾಧನ್ ಗುಪ್ತ, ಮೊದಲ ಐಎಎಸ್ ಪ್ರಾಂಜಲ್ ಪಾಟೀಲ್, ಮೊದಲ ಕ್ರಿಕೆಟ್ ಆಟಗಾರ ಶೇಖರ್ ನಾಯಕ್, ಎವರೆಸ್ಟ್ ಏರಿದ ನ್ಯೂಜೆರ್ಸಿಯ ಎರಿಕ್ ವೆಹೆನ್ಮೇಯರ್ ಇವರೆಲ್ಲ ದೃಷ್ಟಿ ಹೀನರಿಗೆ ಭರವಸೆ ನೀಡಿದ ಮಹನೀಯರು. ಮನಸ್ಸು ಮಾಡಿದರೆ ಯಾವುದೂ ಕಷ್ಟವಲ್ಲ ಎಂದು ಸ್ವತಃ ತೋರಿಸಿಕೊಟ್ಟು ಮಾದರಿಯಾದವರು.

ಹಾಗಾಗಿಯೇ ದೃಷ್ಟಿ ವಿಕಲಚೇತನರು ಇಂದು ಧೈರ್ಯವಾಗಿ ಮುನ್ನುಗ್ಗುತ್ತಿದ್ದಾರೆ. ಒಡಿಸ್ಸಾ ಸರ್ಕಾರ ದೃಷ್ಟಿ ವಿಕಲಚೇತನರಿಗಾಗಿಯೇ ಒಂದು ಪ್ರತ್ಯೇಕ ವಿಶ್ವವಿದ್ಯಾನಿಲಯ ಕಟ್ಟಬೇಕೆಂದು ಯೋಜನೆ ಸಿದ್ಧಪಡಿಸುತ್ತಿದೆ.

ದೃಷ್ಟಿ ಹೀನತೆಯನ್ನು ಇಟ್ಟುಕೊಂಡೇ ರಾಜ್ಯವಾಳಿದ ಧೃತರಾಷ್ಟ್ರ, , ಹಿಂದಿಯ ಸಂತಕವಿ ಸೂರದಾಸರು, ಭವಿಷ್ಯ ನುಡಿಯುತ್ತಿದ್ದ ಗ್ರೀಸಿನ ಟೈರೀಷಿಯಸ್, ಇತ್ತೀಚೆಗಿನ ಬಾಬಾ ವಂಗಾ, ಮಹೋನ್ನತ ಸಂಗೀತ ವಿದ್ವಾಂಸರಾದ ಪಂಚಾಕ್ಷರಿ ಗವಾಯಿಗಳು, ಹಿಂದಿ ಚಲನಚಿತ್ರ ಸಂಗೀತ ನಿರ್ದೇಶಕ ರವೀಂದ್ರ ಜೈನ್ ಇವರೆಲ್ಲರ ಹಾದಿ ಅತ್ಯಂತ ಕಠಿಣವಾಗಿದ್ದರೂ ಗುರಿ ಸಾಧಿಸಿ ಮಾದರಿಯಾಗಿದ್ದಾರೆ. ಚಲನಚಿತ್ರಗಳಲ್ಲಿಯೂ ದೃಷ್ಟಿವಿಕಲಚೇತನರ ಅಸಾಧಾರಣ ಬುದ್ಧಿಮತ್ತೆ ಮತ್ತು ಧೈರ್ಯವನ್ನು ತೋರಿಸುವ ಕೆಲಸಳಾಗಿವೆ. ದೃಷ್ಟಿ ವಿಕಲಚೇತನ ಪಾತ್ರಗಳನ್ನು ಹಾಸ್ಯಕ್ಕಾಗಿ ಬಳಸಿಕೊಂಡಿರುವ ಉದಾಹರಣೆಗಳೇ ಹೆಚ್ಚಿವೆ ಯಾದರೂ ಸಾಮಾಜಿಕ ಜವಾಬ್ದಾರಿಯನ್ನು ಅರಿತು, ಪಾತ್ರಗಳನ್ನು ಸೂಕ್ಷ್ಮವಾಗಿ ರೂಪಿಸಿರುವ ಚಿತ್ರಗಳು ಸಾಕಷ್ಟಿವೆ.

ನೀವೆಲ್ಲರೂ ರಾಣಿ ಮುಖರ್ಜಿ ಮತ್ತು ಅಮಿತಾಭ್ ಬಚ್ಚನ್ ನಟಿಸಿದ 'ಬ್ಲ್ಯಾಕ್' ಚಿತ್ರವನ್ನು ನೋಡಿಯೇ ಇರುತ್ತೀರಿ. ಪ್ರಪಂಚದಲ್ಲಿಯೇ, ದೃಷ್ಟಿವಿಕಲಚೇತನರೂ ಸಹ ಪದವಿ ಪಡೆದುಕೊಳ್ಳಬಹುದು ಎಂದು ತೋರಿಸಿಕೊಟ್ಟ ಹೆಲೆನ್ ಕೆಲರ್ ಜೀವನಾಧರಿತ ಚಿತ್ರವದು. ದೃಷ್ಟಿಹೀನತೆ ಮಾತ್ರವಲ್ಲ, ಕಿವುಡಿಯೂ ಆಗಿದ್ದ ಹೆಲೆನ್‌ಳ ಜೀವನ? ಬದಲಾದ ಪರಿಯನ್ನು ಚಿತ್ರ ಕಟ್ಟಿಕೊಡುತ್ತದೆ.

'ಬ್ಲ್ಯಾಕ್' ನಿಜ ಜೀವನಾಧಾರಿತ ಚಿತ್ರವಾದರೆ, ನಮ್ಮ ಟೈಗರ್ ಪ್ರಭಾಕರ್ ಅವರ 'ಕರುಣೆಯಿಲ್ಲದ ಕಾನೂನು' ಕಾಲ್ಪನಿಕ. ಆದರೆ ಅಲ್ಲಿ ಯುದ್ಧದಲ್ಲಿ ದೃಷ್ಟಿ ಕಳೆದುಕೊಂಡ, ಸೇನೆಯಲ್ಲಿದ್ದ ವ್ಯಕ್ತಿಯೊಬ್ಬನು ಎಷ್ಟು ಅಚ್ಚುಕಟ್ಟಾಗಿ, ತನ್ನ ಶಿಸ್ತಿನ ಜೀವನಕ್ಕೆ ಚ್ಯುತಿ ಬಾರದಂತೆ ಬದುಕುತ್ತಾನೆ ಎಂಬುದನ್ನು ಸಹಜವಾಗಿ ತೋರಿಸಿದ್ದಾರೆ. 'ನಂಬರ್ 27 ಮಾವಳ್ಳಿ ಸರ್ಕಲ್' ಚಿತ್ರದಲ್ಲಿ ದೃಷ್ಟಿಹೀನ ನಾಯಕಿ ತೋರಿಸುವ ಧೈರ್ಯ ಸಾಹಸ ಅನುಕರಣೀಯ. ಶಿವರಾಜ್‌ಕುಮಾರ್ ನಟನೆಯ 'ಕವಚ' ಚಿತ್ರ, 'ಅನುರಾಗ ಸಂಗಮ', 'ನಮ್ಮ ಪ್ರೀತಿಯ ರಾಮು', 'ಒಂದೇ ರೂಪ ಎರಡು ಗುಣ', 'ಧರಣಿ ಮಂಡಲ ಮಧ್ಯದೊಳಗೆ', 'ಕಣ್ತೆರೆದು ನೋಡು' ಇತ್ಯಾದಿ ಚಿತ್ರಗಳಲ್ಲಿ ದೃಷ್ಟಿ ವಿಕಲಚೇತನರು ಅನುಭವಿಸುವ ಕಷ್ಟಗಳನ್ನು ಸೂಚ್ಯವಾಗಿ ತೋರಿಸಿದ್ದಾರಾದರೂ, ಜೀವನದಲ್ಲಿ ಅವರು ಅಳವಡಿಸಿಕೊಂಡಿರುವ ಧೈರ್ಯ, ಅಸಾಧಾರಣ ಬುದ್ಧಿಮತ್ತೆಯನ್ನೂ ತೋರಿಸಿ ಅವರು ಎಲ್ಲರ ಹಾಗೆಯೇ ಎಂದು ಪ್ರತಿಪಾದಿಸಲು ಯತ್ನಿಸಿರುವುದು ಶ್ಲಾಘನೀಯ.

ಇದೇ ವರ್ಷ ಬಿಡುಗಡೆಯಾದ, ರಾಜಕುಮಾರ್ ರಾವ್ ನಟಿಸಿರುವ ಶ್ರೀಕಾಂತ್ ಚಿತ್ರ ದೃಷ್ಟಿವಿಕಲಚೇತನನೊಬ್ಬ ಸವಾಲನ್ನು ಸ್ವೀಕರಿಸಿ ಗೆದ್ದ ಜೀವನದ ಕಥೆ ಹೇಳುತ್ತದೆ. ಇಂದು ಸರ್ಕಾರ ದೃಷ್ಟಿವಿಕಲರಿಗೆ ಹಲವಾರು ಸೌಲಭ್ಯಗಳನ್ನು ಒದಗಿಸಿದೆ. ಅಲ್ಲದೆ ಸಾಕಷ್ಟು ಸಂಘ–ಸಂಸ್ಥೆಗಳೂ ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿವೆ. ದೃಷ್ಟಿವಿಕಲರೂ ಸ್ವಾವಲಂಬಿಗಳಾಗಿ ಬದುಕಬೇಕು ಎಂದು ಆ ನಿಟ್ಟಿನಲ್ಲಿ ಹಲವಾರು ಯೋಜನೆಗಳನ್ನು ಸರ್ಕಾರ, ಸಂಘ–ಸಂಸ್ಥೆಗಳ ಸಹಕಾರದೊಂದಿಗೆ ಜಾರಿಗೆ ತರಲು ಯತ್ನಿಸುತ್ತಿದೆ.

ದೃಷ್ಟಿವಿಕಲಚೇತನರಿಗಾಗಿಯೇ ಹಲವಾರು ವಿಶೇಷ ಶಾಲಾ ಕಾಲೇಜುಗಳು ಇದ್ದರೂ ಸಾಮಾನ್ಯ ಶಾಲಾ–ಕಾಲೇಜುಗಳಿಗೂ ಅವರು ಸೇರಲು ಮುಕ್ತ ಅವಕಾಶವಿರುವುದು ಅವರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತಿದೆ. ಬ್ರೈಲ್ ಲಿಪಿಯಲ್ಲಿ ಪರೀಕ್ಷೆ ಬರೆಯುವ ಅವಕಾಶ ಇನ್ನೂ ಇಲ್ಲವಾದ್ದರಿಂದ, ಪರೀಕ್ಷೆ ಬರೆಯಲು ಸಹೃದಯಿಗಳು ಲಿಪಿಕಾರರಾಗಿ ಬರುವ ವ್ಯವಸ್ಥೆ ಇದೆ. ಇಂದು ದೃಷ್ಟಿವಿಕಲಚೇತನರಿಗಾಗಿಯೇ ಕ್ರಿಕೆಟ್, ಚೆಸ್, ಅಥ್ಲೆಟಿಕ್ಸ್, ಈಜು, ಜೂಡೋ, ಯೋಗ ಸೇರಿದಂತೆ ಇನ್ನೂ ಹಲವು ಕ್ರೀಡೆಗಳಿಗೆ ತರಬೇತಿ ಕೊಡುವ ಸಂಸ್ಥೆಗಳಿವೆ. ಅಲ್ಲಿಯೂ ಇವರು ವಿಜಯ ಪತಾಕೆ ಹಾರಿಸುತ್ತಿದ್ದಾರೆ ಎನ್ನುವುದಕ್ಕೆ ಪ್ಯಾರಲಿಂಪಿಕ್ಸ್‌ನಲ್ಲಿ ಭಾರತ ಗೆದ್ದ ಮೆಡಲುಗಳೇ ಸಾಕ್ಷಿ.

ದೃಷ್ಟಿ ವಿಕಲಚೇತನರು ಹಾಡುವುದರಲ್ಲಿ ಸಾಮಾನ್ಯವಾಗಿ ನಿಷ್ಣಾತರು ಎಂಬುದು ನಮಗೆಲ್ಲಾ ತಿಳಿದಿದೆ. ಆದರೆ ಇಂದು ನೃತ್ಯ ಮತ್ತು ನಾಟಕಗಳನ್ನೂ ಮಾಡುತ್ತಾರೆ. ಇಂದು ಹಲವಾರು ಶಾಲೆಗಳಲ್ಲಿ ಇವರಿಗಾಗಿಯೇ ನೃತ್ಯ ಶಿಕ್ಷಕರಿರುತ್ತಾರೆ. ನೋಡಿ ಕಲಿಯುವುದು ಅಸಾಧ್ಯವಾದ ಕಾರಣ, ಗುರು ನೃತ್ಯ ಮಾಡುತ್ತಿರುವಾಗ ಅವರ ಕೈ ಮತ್ತು ಕಾಲುಗಳ ಚಲನೆಯನ್ನು ಮುಟ್ಟಿನೋಡಿ ಕಲಿಯುಲು ಪ್ರಾರಂಭಿಸಿದರು. ಇಂದು ಹಲವು ಶಿಕ್ಷಕರು ವೈಯಕ್ತಿಕ ಆಸಕ್ತಿಯಿಂದ ಹೊಸ ಹೊಸ ವಿಧಾನಗಳನ್ನು ಕಂಡುಹಿಡಿದು ನೃತ್ಯ ತರಬೇತಿ ನೀಡುತ್ತಿದ್ದಾರೆ. 1990ರ ದಶಕದಲ್ಲಿ ಶಿವಮೊಗ್ಗದ ಶ್ರೀ ಶಾರದಾದೇವಿ ಅಂಧರ ವಿಕಾಸ ಕೇಂದ್ರ ಅಂಧ ವಿದ್ಯಾರ್ಥಿಗಳಿಂದ ಭರತನಾಟ್ಯ ಹಾಗೂ ಯಕ್ಷಗಾನ ಮಾಡಿಸಿ ರಾಜ್ಯದ ಹಲವೆಡೆ ಪ್ರದರ್ಶಿಸಿದ ಕೀರ್ತಿ ಅದರ ಸಂಸ್ಥಾಪಕ ಪದ್ಮನಾಭನ್ ಹಾಗೂ ಯಕ್ಷಗುರು ಕಡತೋಕ ಮಂಜುನಾಥ ಭಾಗವತರಿಗೆ ಸಲ್ಲಬೇಕು.

ತಂತ್ರಜ್ಞಾನ ಇಂದು ಅತ್ಯಾಧುನಿಕವಾಗಿದ್ದು, ದೃಷ್ಟಿ ವಿಕಲಚೇತನರೂ ಎಲ್ಲ ಹೊಸ ಹೊಸ ಗ್ಯಾಡ್ಜೆಟ್‌ಗಳನ್ನು ಸುಲಭವಾಗಿ ಉಪಯೋಗಿಸುವಂತೆ ವಿಜ್ಞಾನಿಗಳು ರೂಪಿಸುತ್ತಿದ್ದಾರೆ. ಇದು ಇವರನ್ನು ಇನ್ನಷ್ಟು ಅಪ್ಡೇಟ್ ಮಾಡಿ ಸಮಾಜದ ಮುಖ್ಯವಾಹಿನಿಯಲ್ಲಿ ಬೆರೆಯುವಂತೆ ಮಾಡಿದೆ. ಮುಖ್ಯವಾಗಿ ಈಗ ಮೂಲಸೌಕರ್ಯದಲ್ಲಿ ಒಂದಾಗಿರುವ ಮೊಬೈಲ್‌ಗಳು ದೃಷ್ಟಿವಿಕಲಚೇತನರು ಬಳಸಲು ಅನುಕೂಲಕರವಾಗಿ ರೂಪಿಸಲ್ಪಡುತ್ತಿದೆ. ಗೂಗಲ್ ತಯಾರಿಸಿರುವ Envision Glasses Device, ಬಹುತೇಕ ಕಣ್ಣಿನ ಕೆಲಸವನ್ನು ಮಾಡುತ್ತಿದೆ. ಜೊತೆಗೆ ಗೂಗಲ್ ಹೆಲ್ಪ್ ಅಂಧರಿಗೆ ಸಾಕಷ್ಟು ಸಹಾಯ ಮಾಡುತ್ತಿದೆ. ಇತ್ತೀಚೆಗೆ ದೆಹಲಿಯ ಯುವ ವಿಜ್ಞಾನಿ ಅಂಧರಿಗೆ ಅನುಕೂಲವಾಗುವಂತಹ ವಾಕಿಂಗ್ ಸ್ಟಿಕ್ ಅನ್ನು ತಯಾರಿಸಿದ್ದು ಸುದ್ದಿಯಾಗಿತ್ತು.

ಈ ಕೆಲಸಗಳೆಲ್ಲ ಸಂಘ–ಸಂಸ್ಥೆಗಳ, ಸರ್ಕಾರದ ಜವಾಬ್ದಾರಿ ಎಂದು ನಾವುಗಳು ಕೈಕಟ್ಟಿ ಕುಳಿತರೆ ಅದು ಸ್ವಸ್ಥ ಸಮಾಜದ ಲಕ್ಷಣವಾಗುವುದಿಲ್ಲ. ಸಹಾನುಭೂತಿ ಎಂಬುದು ಎಲ್ಲರಲ್ಲೂ ಮನೆಮಾಡಬೇಕು. ಒಂದು ಸರ್ವೆಯ ಪ್ರಕಾರ, 12 ಲಕ್ಷಕ್ಕೂ ಅಧಿಕ ಮಂದಿ ನೇತ್ರದಾನಿಗಳಿಗಾಗಿ ಕಾಯುತ್ತಿದ್ದಾರೆ. ಮೂಢನಂಬಿಕೆಗಳನ್ನೆಲ್ಲಾ ಬಿಟ್ಟು ಪ್ರತಿಯೊಬ್ಬರೂ ಮರಣಾನಂತರ ನೇತ್ರದಾನ ಮಾಡುವ ಸಂಕಲ್ಪ ಮಾಡಿದರೆ, ದೃಷ್ಟಿವಿಕಲಚೇತನರೇ ಭವಿಷ್ಯದಲ್ಲಿ ಇಲ್ಲವಾಗಬಹುದು. ಇದು ರಮ್ಯ ಕಲ್ಪನೆಯಲ್ಲ, ವಾಸ್ತವ. ವರನಟ ಡಾ.ರಾಜ್‌ಕುಮಾರ್ ಅವರು ಇದಕ್ಕೆ ಮೇಲ್ಪಂಕ್ತಿ ಹಾಕಿಕೊಟ್ಟರು. ನಾವೂ ನೇತ್ರದಾನ ಮಾಡುವ ಬಗ್ಗೆ ನಿರ್ಧಾರ ಕೈಗೊಂಡರೆ ಒಂದು ಸ್ವಸ್ಥ ಸಹೃದಯೀ ಆರೋಗ್ಯಕರ ಸಮಾಜಕ್ಕೆ ಮುನ್ನುಡಿ ಬರೆದಂತೆ. ಜೊತೆಗೆ ಸಾರ್ಥಕ ಭಾವವೊಂದು ನಮ್ಮ ಭಾಗಕ್ಕೆ ಲಭ್ಯವಾಗುತ್ತದೆ.

ನಾಳೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಸ್ಥಳಾಂತರ ಬಗ್ಗೆ ವ್ಯಾಪಾರಗಳ ಸಭೆ

ಮೈಸೂರು, ಜ.8(ಎಸ್‌ಪಿಎನ್)– ಕೆಎಸ್‌ಆರ್‌ಟಿಸಿ ಮೈಸೂರು ಸಬರ್ಬನ್ ಬಸ್ ನಿಲ್ದಾಣ ಸ್ಥಳಾಂತರ ಬಗ್ಗೆ ರಾಜ್ಯ ಸರ್ಕಾರ ತೀರ್ಮಾನಿಸಿದ ಬೆನ್ನಲ್ಲೇ ಸುತ್ತಮುತ್ತಲಿನ ಹೋಟೆಲ್ ಮಾಲೀಕರು ತಮ್ಮ ಆರ್ಥಿಕ ವಹಿವಾಟು ಕುಸಿಯುವ ಆತಂಕವ್ಯಕ್ತ ಪಡಿಸುತ್ತಿದ್ದಾರೆ.

ಮೈಸೂರು ಸಬರ್ಬನ್ ಬಸ್ ನಿಲ್ದಾಣ ಅವಲಂಭಿಸಿ ವ್ಯಾಪಾರ ವಹಿವಾಟು ನಡೆಸುತ್ತಿರುವ ವ್ಯಾಪಾರಿಗಳ ಸಭೆಯನ್ನು ಜ.10ರಂದು ಬೆಳಗ್ಗೆ 11ಗಂಟೆಗೆ ಹೋಟೆಲ್ ಪೈ ವಿಸ್ತಾ ಸಭಾಂಗಣದಲ್ಲಿ ಕರೆಯಲಾಗಿದ್ದು, ಭಾಗವಹಿಸುವ ವ್ಯಾಪಾರಿಗಳು, ಸಾರ್ವಜನಿಕರು ಸಲಹೆಗಳನ್ನು ನೀಡುಹುದು ಎಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗಾಗಿ ರಾಜ್ಯ ಹೋಟೆಲ್ ಮಾಲೀಕರ ಸಂಘದ ರವಿಶಾಸ್ತ್ರಿ(ಮೊ:99452–30501

ಸಾರಿಗೆ ಬಸ್ ದರ ಹೆಚ್ಚಳ ಖಂಡಿಸಿ ಸಿಪಿಐಎಂ ಮೈಸೂರಲ್ಲಿ ಪ್ರತಿಭಟನೆ

ಮೈಸೂರು, ಜ.8(ಎಂಟಿವೈ)– ಡೀಸೆಲ್ ದರ, ಸಿಬ್ಬಂದಿ ವೇತನ ಹೆಚ್ಚಳದ ನೆಪದಲ್ಲಿ ಸಾರಿಗೆ ಬಸ್ ಪ್ರಯಾಣ ದರ ಶೇ.15 ಹೆಚ್ಚಿಸಿರುವುದನ್ನು ಖಂಡಿಸಿ ಸಿಪಿಐ(ಎಂ) ಮುಖಂಡರು ಪ್ರತಿಭಟನೆ ನಡೆಸಿದರು.

ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಬುಧವಾರ ಬೆಳಗ್ಗೆ ಪ್ರತಿಭಟನೆ ನಡೆಸಿ, ಬಸ್ ಪ್ರಯಾಣ ದರ ಕಡಿಮೆ ಮಾಡುವಂತೆ ಆಗ್ರಹಿಸಿದರಲ್ಲದೆ, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಈ ವೇಳೆ ಸಿಪಿಐ(ಎಂ) ಕಾರ್ಯದರ್ಶಿ ಎನ್.ಸುಬ್ರಮಣ್ಯ ಮಾತನಾಡಿ, ಡೀಸೆಲ್ ಹೆಚ್ಚಳವಾಗಿದೆ ಎನ್ನುವ ಸರ್ಕಾರ, ದರ ಕಡಿಮೆಯಾದಾಗ ಪ್ರಯಾಣ ದರ ಕಡಿಮೆ ಮಾಡುವುದಿಲ್ಲ. ಸಾರಿಗೆ ನಿಗಮಗಳಿಗೆ ಸಬ್ಸಿಡಿ ದರದಲ್ಲಿ ಡೀಸೆಲ್ ಪೂರೈಸಿದರೆ, ಪ್ರಯಾಣ ದರ ನಿಯಂತ್ರಿಸಬಹುದು. 1950ರ ಆರ್‌ಟಿಸಿ ಕಾಯ್ದೆ ಪ್ರಕಾರ ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಸರ್ಕಾರ ಬಜೆಟ್ ಬೆಂಬಲ ನೀಡುವುದು ಅಗತ್ಯ. ಸಾರ್ವಜನಿಕರ ಹಿತ ದೃಷ್ಟಿಯಿಂದ ಒದಗಿಸುವ ಸಾರಿಗೆ ಸೇವೆಯನ್ನು ಲಾಭ–ನಷ್ಟದ ಲೆಕ್ಕದಲ್ಲಿ ನೋಡಬಾರದು. ನಷ್ಟ ಉಂಟಾದಲ್ಲಿ ಸರ್ಕಾರವೇ ಭರಿಸಬೇಕು. ಸಾರ್ವಜನಿಕ ಸಾರಿಗೆಗಳು ಎಲ್ಲಾ ಸಂದರ್ಭಗಳಲ್ಲೂ ಲಾಭ ತರಲು ಆಗುವುದಿಲ್ಲ. ಸಾರಿಗೆ ನಿಗಮಗಳ ಅರ್ಧದಷ್ಟು ಮಾರ್ಗ ಕಾರ್ಯಾಚರಣೆಗಳು ಗ್ರಾಮಾಂತರದಲ್ಲಿ ಇರುವುದರಿಂದ ನಷ್ಟವಾಗುತ್ತದೆ. ಆದರೆ, ಪ್ರಯಾಣ ದರ ಹೆಚ್ಚಳ ಮಾಡುವುದು ಜನವಿರೋಧಿ ಕ್ರಮ ಎಂದು ಕಿಡಿಕಾರಿದರು.



ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಸಿಪಿಐ(ಎಂ) ಮುಖಂಡರು ಸಾರಿಗೆ ಬಸ್ ಪ್ರಯಾಣ ದರ ಹೆಚ್ಚಳ ಖಂಡಿಸಿ ಪ್ರತಿಭಟನೆ ನಡೆಸಿದರು.

ಸಾರಿಗೆ ನಿಗಮಗಳ ನಷ್ಟ ಕಡಿಮೆ ಮಾಡಲು ಸಾರ್ವಜನಿಕರು, ರಾಜಕೀಯ ಪಕ್ಷಗಳ ಸಲಹೆ ಪಡೆಯಲು ಸಂಸ್ಥೆಯ ಆಡಳಿತ ವರ್ಗ ಮುಂದಾಗಬೇಕು. ಎಲೆಕ್ಟ್ರಿಕ್ ಬಸ್ಸುಗಳನ್ನು ನಿಗಮಗಳೇ ಕಾರ್ಯಾಚರಣೆ ಮಾಡಿದರೆ ಹೆಚ್ಚಿನ ಆದಾಯ ಸಂಗ್ರಹವಾಗುತ್ತದೆ. ನಿಗಮಗಳ ಬಸ್ಸುಗಳ ಮೇಲಿನ ತೆರಿಗೆ ಕಡಿಮೆ ಮಾಡುವ ಮೂಲಕ ನಷ್ಟ ಕಡಿಮೆ ಮಾಡಬೇಕು. ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಹೆಚ್ಚಳದಿಂದ ನರಳುತ್ತಿರುವ ಜನಸಾಮಾನ್ಯರ ಜೇಬಿಗೆ ಕತ್ತರಿ ಹಾಕದೆ ದರ ಹೆಚ್ಚಳದ ತೀರ್ಮಾನವನ್ನು ವಾಪಸ್ ಪಡೆಯಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಮುಖಂಡರಾದ ರಾಜೇಂದ್ರ, ವಿಜಯಕುಮಾರ್, ಬಾಲಾಜಿರಾವ್, ಜಯರಾಂ, ಕೆಬಸಮಾಜ್, ನಾಗರಾಜ್ ಪಾಲ್ಗೊಂಡಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

'ಕ್ರೀಡಾ ಮಿತ್ರ'

ನಾಗಮಾರ್ಷಲ್ ಆರ್ಟ್ಸ್‌ಗೆ ಕರಾಟೆಯಲ್ಲಿ ಬಹುಮಾನ



ನಾಗಮಾರ್ಷಲ್ ಆರ್ಟ್ಸ್‌ನ ಕರಾಟೆ ಪಟುಗಳು ಪಂದ್ಯಾವಳಿಯಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಮೈಸೂರು: ಮೈಸೂರಿನ ಚಾಮುಂಡಿ ವಿಹಾರ ಸ್ಟೇಡಿಯಂನಲ್ಲಿ ನಡೆದ 19ನೇ ರಾಷ್ಟ್ರಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ ನಾಗಮಾರ್ಷಲ್ ಆರ್ಟ್ಸ್ ಎಸ್.ಡಿ.ಎನ್. ಬ್ರಾಂಚ್‌ನ ಕರಾಟೆ ಪಟುಗಳು ಭಾಗವಹಿಸಿ ಪ್ರಥಮ ಹಾಗೂ ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ.

ಕತಾ ವಿಭಾಗದಲ್ಲಿ ಧನ್ವಿ, ನಮ್ರತಾ, ಧನುಷ್, ಹರ್ಷಿತ, ಚಂದು, ಕೃಷಿಖ್, ದನ್ವಿತ್, ಗೌತಮಿ, ವಿನ್ಯಾಸ್, ಧ್ಯಾನ್, ವಿಕಾಸ್, ಪ್ರಥಮ ಸ್ಥಾನ ಪಡೆದಿದ್ದು, ಪೃಥ್ವಿ, ಸಮರ್ಥ್, ತೇಜಸ್, ಮೌಲ್ಯ ಸಿದ್ಧಾರ್ಥ್, ವಿನಯ್, ಗೋಕುಲ್, ಯಶ್, ಮತ್ತು ಹೇಮಂತ್ ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ. ಕುಮಿತೆ ವಿಭಾಗದಲ್ಲಿ ಹರ್ಷಿತಾ, ಧನ್ವಿ, ಕೃಷಿಖ್ ಲಿಖಿತ್, ಮನೋಜ್, ಪ್ರಥಮ ಸ್ಥಾನವನ್ನು ಪಡೆದಿದ್ದು, ಧ್ಯಾನ್ ಮತ್ತು ವಿಕಾಸ್ ದ್ವಿತೀಯ ಸ್ಥಾನ ಪಡೆದಿದ್ದಾರೆ. ಚಿತ್ರದಲ್ಲಿ ಕರಾಟೆ ಕೋಚ್‌ಗಳಾದ ರವೀಶ್ ಮತ್ತು ಲೋಕೇಶ್ ಅವರನ್ನು ಕಾಣಬಹುದು.

ಖೋ ಖೋ ಪಂದ್ಯಾವಳಿಗೆ ಆಯ್ಕೆ



ಕರ್ನಾಟಕ ಸರ್ಕಾರದ ವತಿಯಿಂದ ನಡೆಸುತ್ತಿರುವ ರಾಜ್ಯ ಮಟ್ಟದ ಸೀನಿಯರ್ ಒಲಿಂಪಿಕ್ಸ್ ಕ್ರೀಡಾಕೂಟವು ಜ.17ರಿಂದ 23ರವರೆಗೆ ಮಂಗಳೂರು, ಉಡುಪಿಯಲ್ಲಿ ನಡೆಯುತ್ತಿದ್ದು, ಮೈಸೂರು ಜಿಲ್ಲಾ ಅಮೆಚೂರ್ ಖೋ ಖೋ ಸಂಸ್ಥೆಯ ಪುರುಷರು, ಮಹಿಳೆಯರ ತಂಡಗಳು ಆಯ್ಕೆಯಾಗಿವೆ. ತಂಡಗಳಿಗೆ ಸಂಸ್ಥೆಯ ಪದಾಧಿಕಾರಿಗಳು, ಸದಸ್ಯರು ಶುಭ ಹಾರೈಸಿದ್ದಾರೆ.

ಗ್ರಾಮೀಣ ವಿದ್ಯಾರ್ಥಿಗಳಿಗೂ ವಿವಿ ಜ್ಞಾನ ತಲುಪಬೇಕೆಂಬುದೇ ಪ್ರಸಾರಾಂಗದ ಉದ್ದೇಶ

ರಾಷ್ಟ್ರಕವಿ ಕುವೆಂಪು ಜನ್ಮದಿನೋತ್ಸವದಲ್ಲಿ ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದಗೌಡ ಅಭಿಮತ

ಮೈಸೂರು,ಜ.8(ಆರ್‌ಕೆ)– ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೂ ವಿಶ್ವವಿದ್ಯಾನಿಲಯದ ಜ್ಞಾನ ತಲುಪಬೇಕೆಂಬುದೇ ಪ್ರಸಾರಾಂಗದ ಉದ್ದೇಶವಾಗಿದೆ ಎಂದು ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಕೆ.ಚಿದಾನಂದಗೌಡ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಸಾರಾಂಗದಲ್ಲಿ ಇಂದು ಆಯೋಜಿಸಿದ್ದ ರಾಷ್ಟ್ರಕವಿ ಕುವೆಂಪು ಜನ್ಮದಿನೋತ್ಸವ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಗ್ರಾಮೀಣ ಯುವಕರಿಗೂ ವಿಶ್ವವಿದ್ಯಾನಿಲಯದ ಜ್ಞಾನ ಲಭ್ಯವಾಗಬೇಕೆಂಬ ಉದ್ದೇಶದಿಂದ ಕುವೆಂಪು ಅವರು ಪ್ರಸಾರಾಂಗವನ್ನು ಆರಂಭಿಸಿದ್ದರು ಎಂದರು.

ಕೇವಲ ನಗರ ಪ್ರದೇಶ, ವಿಶ್ವವಿದ್ಯಾನಿಲಯದ ಪ್ರಾಂಗಣಕ್ಕಷ್ಟೇ ಜ್ಞಾನ ಸೀಮಿತವಾಗಬಾರದು, ಅದು ವ್ಯಾಪಕವಾಗಿ ಹರಡಬೇಕು. ಆಡಳಿತ ಅಂಗ, ಬೋಧನಾಂಗ, ಸಂಶೋಧನಾಂಗದಂತೆ ವಿಶ್ವವಿದ್ಯಾನಿಲಯಕ್ಕೆ ಪ್ರಸಾರಾಂಗವೂ ಪ್ರಮುಖವಾದುದು ಎಂಬುದು ಕುವೆಂಪು ಅವರ ಆಶಯವಾಗಿತ್ತು ಎಂದು ನುಡಿದರು.

ಈ ಹಿಂದೆ ಪ್ರಸಾರಾಂಗ ವಿಶ್ವವಿದ್ಯಾನಿಲಯದ ಭಾಗವಾಗಿರಲಿಲ್ಲ. ಭಾರತೀಯ ಕುಲಪತಿಗಳ ಸಮ್ಮೇಳನ ನಡೆದಾಗ ಕುವೆಂಪು ಅವರೇ ಈ ವಿಷಯ ಪ್ರಸ್ತಾಪಿಸಿದ್ದರಿಂದ ಪ್ರಸಾರಾಂಗ ಅಸ್ತಿತ್ವಕ್ಕೆ ಬಂದಿತು ಎಂದ ಪ್ರೊ. ಚಿದಾನಂದಗೌಡರು, ವಿವಿ ಜ್ಞಾನ ಎಲ್ಲರಿಗೂ, ಎಲ್ಲಾ ಕಾಲದಲ್ಲೂ ಸಿಗುವಂತಾದರೆ ಮಾತ್ರ ಕುವೆಂಪು ಅವರ ಕಲ್ಪನೆ ಸಾಕಾರಗೊಳ್ಳುತ್ತದೆ ಎಂದರು.

ಹಿರಿಯ ಸಾಹಿತಿ ಪ್ರೊ.ಸಿ.ಪಿ.ಕೃಷ್ಣಕುಮಾರ್ ಮಾತನಾಡಿ, ಕುವೆಂಪು ಅವರು ವಿಶ್ವಕವಿ. ಕನ್ನಡವನ್ನು ವಿಶ್ವ ಸಾಹಿತ್ಯದ ವೇದಿಕೆಯವರೆಗೂ ಕೊಂಡು ಹೋದವರು. ಕುವೆಂಪು ಅವರ ಪತ್ನಿ ಹೇಮಾವತಿ ನಿಧನರಾದಾಗ ಕುವೆಂಪು ಅವರು ಹೇಮಾವತಿ ಎಲ್ಲೂ ಹೋಗಿಲ್ಲ ಅವರು ಇಲ್ಲೇ ಇದ್ದಾರೆ ಎಂದು ಒಮ್ಮೆ ನನಗೆ ಹೇಳಿದ್ದರು. ಹಾಗೆಯೇ ಕುವೆಂಪು ಅವರು ಸಹ ಎಲ್ಲೂ ಹೋಗಿಲ್ಲ ಇಲ್ಲೇ ಇದ್ದಾರೆ. ವಿಶೇಷವಾಗಿ ಈ ಕುವೆಂಪು ಸಭಾಂಗಣದಲ್ಲಿ ಇರುತ್ತಾರೆ ಎಂದು ಭಾವಪೂರ್ಣವಾಗಿ ನುಡಿದರು.

ಪ್ರಸಾರಾಂಗದ ನಿರ್ದೇಶಕ ಪ್ರೊ. ನಂಜಯ್ಯ ಹೊಂಗನೂರು ಮಾತನಾಡಿ, ಈ ಶತಮಾನದ ಶ್ರೇಷ್ಠಕವಿ ಕುವೆಂಪು. ಅವರಿಗೆ ಆಧುನಿಕ ಸಾಹಿತ್ಯ ಚರಿತ್ರೆಯಲ್ಲಿ ಅದ್ವಿತೀಯವಾದ ಸ್ಥಾನವಿದೆ. ಕರ್ನಾಟಕದಲ್ಲಿ ಮಹಾಕವಿಯೊಬ್ಬರು ಪ್ರಪ್ರಥಮ ಬಾರಿಗೆ ಕುಲಪತಿಯಾದಂತಹ ಹೆಗ್ಗಳಿಕೆ ಕುವೆಂಪು ಅವರಿಗೆ ಸಲ್ಲುತ್ತದೆ. ಒಂದು ಶತಮಾನದವರೆಗೆ ಕನ್ನಡ ಸಾಹಿತ್ಯ ಪರಂಪರೆಯನ್ನು ಅನನ್ಯವಾಗಿ ಕಟ್ಟಿ ಬೆಳೆಸಿದವರು ಕುವೆಂಪು ಎಂದು ನುಡಿದರು.

ಕುವೆಂಪು ಅವರು ಪ್ರಕೃತಿ, ಸಂಸ್ಕೃತಿ, ಸೃಜನಶೀಲತೆಗಳ ಅನುಸಂಧಾನಗಳೊಂದಿಗೆ ಸಾಹಿತ್ಯದ ಬಹುತ್ವವನ್ನು ಸಾಧಿಸಿದ್ದಾರೆ. ಪ್ರಸಾರಾಂಗವನ್ನು ಬಹಳ ವಿಶೇಷವಾಗಿ ಕಟ್ಟಿ ಬೆಳೆಸಿದ್ದಾರೆ. ಪ್ರಸಾರಾಂಗದ ಪ್ರಕಟಣಾ ಸಮಿತಿಯ ಅಧ್ಯಕ್ಷರಾಗಿ ನೂರಾರು ಮೌಲ್ಯಯುತ ಗ್ರಂಥಗಳನ್ನು ರಚಿಸಿದ್ದಾರೆ. ಕುವೆಂಪು ಅವರು ಕುಲಪತಿಯಾಗಿದ್ದಾಗ ಪ್ರಸಾರಾಂಗಕ್ಕೆ ಹೆಚ್ಚಿನ ಆದ್ಯತೆ ನೀಡಿ ಸಮೃದ್ಧವಾಗಿ ಬೆಳೆಸಿದರು. ಅವರು ಕಟ್ಟಿದ ಪ್ರಸಾರಾಂಗವು ವಿದ್ವಾಂಸರ, ಸಂಶೋಧಕರ ಹಾಗೂ ಓದುಗರ ಪರಂಪರೆಯನ್ನು ಬಹಳ ಸಂಪದ್ಭರಿತಗೊಳಿಸಿದೆ ಎಂದು ತಿಳಿಸಿದರು.


ಕುವೆಂಪು ಅವರ ಪುತ್ರಿ ತಾರಿಣಿ ಚಿದಾನಂದಗೌಡ, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಪ್ರೊ.ಸಿ.ಪಿ. ಕೃಷ್ಣಕುಮಾರ್ ಅವರ ಪಂಪ ಪರೀಕ್ಷಣ ಹಾಗೂ ಗುರುಪಾದ ಹೆಗ್ಗಡೆ ಅವರ ಸಂಸ್ಕೃತ ವ್ಯಾಕರಣ ದೀಪಿಕ ಪುಸ್ತಕಗಳನ್ನು ಬಿಡುಗಡೆ ಮಾಡಿದರು. ವಿದ್ವಾಂಸ ಡಾ. ಗುರುಪಾದ ಕೆ.ಹೆಗಡೆ, ಪ್ರಸಾರಾಂಗದ ಅಧೀಕ್ಷಕ ಎಂ.ಡಿ. ಚೆನ್ನಬಸಪ್ಪ, ಕನ್ನಡ ಶಾಸ್ತ್ರೀಯ ಅತ್ಯುನ್ನತ ಅಧ್ಯಯನ ಕೇಂದ್ರದ ಸಂಶೋಧನಾ ಸಹಾಯಕಿ ಅನ್ನಪೂರ್ಣ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಸಾರಾಂಗದಲ್ಲಿ ಆಯೋಜಿಸಿದ್ದ ರಾಷ್ಟ್ರಕವಿ ಕುವೆಂಪು ಜನ್ಮದಿನೋತ್ಸವವನ್ನು ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದಗೌಡ ಉದ್ಘಾಟಿಸಿದರು. ಚಿತ್ರದಲ್ಲಿ ಹಿರಿಯ ಸಾಹಿತಿ ಡಾ.ಸಿಪಿಕೆ, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ತಾರಿಣಿ ಚಿದಾನಂದಗೌಡ ಇನ್ನಿತರರಿದ್ದಾರೆ.

ಇಂದು ಮಾನಸಗಂಗೋತ್ರಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ವಿಶ್ವ ಮಾನವ ದಿನಾಚರಣೆ

ಕುವೆಂಪು ಚಿತ್ರಕೂಟ ಉದ್ಘಾಟನೆ



ಮೈಸೂರು, ಜ.8 (ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ನಾಳೆ(ಜ.9) ಬೆಳಗ್ಗೆ 11.30ಕ್ಕೆ ಕುವೆಂಪು ಅವರ ಜನ್ಮದಿನೋತ್ಸವ ಪ್ರಯುಕ್ತ ವಿಶ್ವ ಮಾನವ ದಿನಾಚರಣೆ, ಕುವೆಂಪು ಚಿತ್ರಕೂಟ ಉದ್ಘಾಟನೆ ಸೇರಿದಂತೆ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ವಿಶ್ವವಿದ್ಯಾನಿಲಯದ ವಿಶ್ವಕೋಶ ವಿಭಾಗದ ಸಹ ಸಂಪಾದಕ ಡಾ. ಮುಳ್ಳೂರು ನಂಜುಂಡಸ್ವಾಮಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರಕವಿ ಕುವೆಂಪು ಜನ್ಮ ಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮತ್ತೆ ಮತ್ತೆ ಕುವೆಂಪು ಪುಸ್ತಕ ಬಿಡುಗಡೆ, ನಾಡಗೀತೆ ಶತಮಾನೋತ್ಸವ ಸಂಭ್ರಮದ ರೂಪಕ ಪ್ರದರ್ಶನ ಆಯೋಜಿಸಲಾಗಿದೆ. ಇದೇ ವೇಳೆ ಕುವೆಂಪು ಸಾಹಿತ್ಯ: ಸಾಂಸ್ಕೃತಿಕ ಬಹುತ್ವ ವಿಷಯ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಲಿದೆ. ಕಾರ್ಯಕ್ರಮವನ್ನು ನಾಡೋಜ ಡಾ.ಬರಗೂರು ರಾಮಚಂದ್ರಪ್ಪ ಉದ್ಘಾಟಿಸಲಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಕುವೆಂಪು ಅವರ ಮಗಳು ಕೆ.ತಾರಿಣಿ ಚಿದಾನಂದಗೌಡ ಪ್ರೊ.ಕೆ. ಚಿದಾನಂದಗೌಡ, ಎಂ.ಸಿ.ನರೇಂದ್ರ, ಪ್ರೊ.ಕೆ.ಸಿ.ಶಿವಾರೆಡ್ಡಿ, ಕುಲಸಚಿವೆ ವಿ.ಆರ್.ಶೈಲಜಾ, ಪ್ರೊ.ಎನ್.ಕೆ.ಲೋಲಾಕ್ಷಿ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು.

ಮಧ್ಯಾಹ್ನ 2.30ಕ್ಕೆ ಕುವೆಂಪು ಕಥೆಗಳಲ್ಲಿ ಬಹುಮುಖಿ ಚಿಂತನೆ ಕುರಿತು ಪ್ರೊ. ದುರ್ಗಾ ಪ್ರವೀಣ್, ಕುವೆಂಪು ಕವಿತೆಗಳಲ್ಲಿ ದಾಂಪತ್ಯದ ಸ್ವರೂಪ ಕುರಿತು ಪ್ರೊ.ಎಸ್.ಡಿ.ಶಶಿಕಲಾ, ಕುವೆಂಪು ವೈಚಾರಿಕತೆ ಕುರಿತು ಪ್ರೊ.ರತ್ನಾಕರ ಮಲ್ಲಮೂಲೆ, ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಜಾನಪದ ಪ್ರಜ್ಞೆ ಕುರಿತು ಪ್ರೊ. ನಂಜಯ್ಯ ಹೊಂಗನೂರು ಮಾತನಾಡಲಿದ್ದಾರೆ.

ಸಂಜೆ 4ಕ್ಕೆ ಸಮಾರಂಭದ ಸಮಾರೋಪ ನಡೆಯಲಿದ್ದು, ಪ್ರೊ.ಡಿ.ಕೆ. ರಾಜೇಂದ್ರ ಸಮಾರೋಪ ನುಡಿ ಆಡುವರು, ಪ್ರೊ.ಎನ್.ನಾಗರಾಜು ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಡಾ.ಪಿ.ಎಂ. ಕುಮಾರ್, ಡಾ.ಬಿ.ಮೂರ್ತಿ, ಡಾ.ಡಿ. ಶಿವಾನಂದ, ಡಾ.ಕುಮಾರ ಬಂಡಳ್ಳಿ ಇದ್ದರು.

ಅರ್ಜಿ ಆಹ್ವಾನ

ಮೈಸೂರು,ಜ.8– ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿರುವ "Legal Aid Defense Counsel System" (LADCS) ಕಚೇರಿಯಲ್ಲಿ ಖಾಲಿ ಇರುವ ಮುಖ್ಯ ಕಾನೂನು ಸಹಾಯ ರಕ್ಷಣಾ ಸಲಹೆಗಾರ (01) ಉಪ ಕಾನೂನು ನೆರವು ರಕ್ಷಣಾ ಸಲಹೆಗಾರ (02) ಮತ್ತು ಸಹಾಯಕ ಕಾನೂನು ನೆರವು ರಕ್ಷಣಾ ಸಲಹೆಗಾರರ (02) ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದೆ. 2 ವರ್ಷದ ಅವಧಿಗೆ ಮಾಸಿಕ ವೇತನವನ್ನು ನೀಡಿ, ಗುತ್ತಿಗೆ ಆಧಾರದ ಮೇಲೆ ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಆಸಕ್ತರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಅರ್ಜಿ ಪಡೆದು, ತಮ್ಮ ವೈಯಕ್ತಿಕ ವಿವರಗಳನ್ನು ಭರ್ತಿ ಮಾಡಿ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಜ.10ರೊಳಗೆ ಜಯನಗರ, 5ನೇ ಕ್ರಾಸ್‌ನಲ್ಲಿರುವ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗೆ ಸಲ್ಲಿಸಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ತಿಳಿಸಿದ್ದಾರೆ.

ರಾಜ್ಯದಲ್ಲಿ 2.76 ಲಕ್ಷ ಹುದ್ದೆ ಖಾಲಿ; ಭರ್ತಿ ಮಾಡದೇ ಇದ್ದಲ್ಲಿ ಹೋರಾಟ

ಎಸ್‌ಡಿಪಿಐ ಜಿಲ್ಲಾಧ್ಯಕ್ಷ ರಫತ್‌ಖಾನ್ ಎಚ್ಚರಿಕೆ

ಮೈಸೂರು, ಜ.8(ಎಂಟಿವೈ)– ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 2.76 ಲಕ್ಷ ಹುದ್ದೆಗಳ ಭರ್ತಿಗೆ ರಾಜ್ಯ ಸರ್ಕಾರ ಕೂಡಲೇ ಕ್ರಮ ಕೈಗೊಂಡು, ನಿರುದ್ಯೋಗಿ ಯುವಜನರಿಗೆ ನೆರವಾಗದಿದ್ದರೆ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಸ್‌ಡಿಪಿಐ ಜಿಲ್ಲಾಧ್ಯಕ್ಷ ರಫತ್‌ಖಾನ್ ಎಚ್ಚರಿಸಿದ್ದಾರೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ವಿವಿಧ ಇಲಾಖೆಗಳಲ್ಲಿ ಹಲವು ವರ್ಷಗಳಿಂದ ಸಾವಿರಾರು ಹುದ್ದೆಗಳು ಖಾಲಿ ಇವೆ. ಭರ್ತಿಗೆ ಇದುವರೆಗೂ ಯಾವುದೇ ಸರ್ಕಾರ ಕ್ರಮ ಕೈಗೊಂಡಿಲ್ಲ. ಲಕ್ಷಾಂತರ ನಿರುದ್ಯೋಗಿಗಳು ಕಾಯುತ್ತಿದ್ದಾರೆ. ನಿರುದ್ಯೋಗ ಸಮಸ್ಯೆಯಿಂದ ಯುವ ಜನತೆ ಹತಾಶೆಯಿಂದ ಅಪರಾಧ ಕೃತ್ಯಗಳಲ್ಲಿ ತೊಡಗಿಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಿರುದ್ಯೋಗ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ವೇಳೆ ಒಂದು ವರ್ಷದೊಳಗೆ ಎಲ್ಲ ಸರ್ಕಾರಿ ಇಲಾಖೆಗಳಲ್ಲಿ ಇರುವ ಖಾಲಿ ಹುದ್ದೆ ಭರ್ತಿ ಮಾಡುವುದಾಗಿ ಭರವಸೆ ನೀಡಿತ್ತು. ಆದರೆ ಇದುವರೆಗೂ ಕಾರ್ಯಗತವಾಗಿಲ್ಲ. ಇದೇ ವೇಳೆ ಖಾಲಿ ಹುದ್ದೆಗಳೆಲ್ಲವನ್ನೂ ಹೊರ ಗುತ್ತಿಗೆ ನೀಡಲಾಗುತ್ತಿದೆ.

ರಾಜ್ಯದಲ್ಲಿ ಪದವೀಧರರ ಸಂಖ್ಯೆಯೂ ಗಣನೀಯವಾಗಿ ಏರಿಕೆ ಆಗುತ್ತಿದೆ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಸುಮಾರು 4159 ಹುದ್ದೆಗಳು ಖಾಲಿ ಇದ್ದು, ಹೆಸರಿಗೆ ಮಾತ್ರ ನಾವು ಬಡವರು, ದಲಿತರು, ಅಲ್ಪಸಂಖ್ಯಾತರ ಪರ ಎಂದು ಸರ್ಕಾರ ಬಿಂಬಿಸಿಕೊಳ್ಳುತ್ತಿದೆ. ಆದರೆ ಯಾವುದೇ ಪ್ರಯೋಜನವಾಗಿಲ್ಲ. ಹೀಗಾಗಿ ಸರ್ಕಾರ ಕೂಡಲೇ ಎಲ್ಲ ಖಾಲಿ ಹುದ್ದೆ ಭರ್ತಿ ಮಾಡಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಎಸ್‌ಡಿಪಿಐ ರಾಜ್ಯ ಉಪಾಧ್ಯಕ್ಷ ದೇವನೂರು ಪುಟ್ಟನಂಜಯ್ಯ, ಮುಖಂಡರಾದ ಎಸ್.ಸ್ವಾಮಿ, ಮೊಹಮ್ಮದ್ ಜಹೀರ್ ಮತ್ತಿತರರು ಇದ್ದರು.

ಕುವೆಂಪುನಗರದಲ್ಲಿ ಎರಡು ಗುಂಪುಗಳ ನಡುವೆ ಮಾರಾಮಾರಿ



ಸಹೋದರರಿಗೆ ತೀವ್ರ ಗಾಯ, ಐವರ ವಿರುದ್ಧ ಪ್ರಕರಣ ದಾಖಲು

ಮೈಸೂರು, ಜ. 8(ಆರ್‌ಕೆ)– ಕ್ಷುಲ್ಲಕ ಕಾರಣಕ್ಕೆ ಎರಡು ಗುಂಪುಗಳ ನಡುವೆ ಮಾರಾಮಾರಿ ನಡೆದು, ಸಹೋದರರು ತೀವ್ರವಾಗಿ ಗಾಯಗೊಂಡಿರುವ ಘಟನೆ ಮೈಸೂರಿನ ಕುವೆಂಪುನಗರದಲ್ಲಿ ಸೋಮವಾರ ಸಂಭವಿಸಿದೆ.

ಮೈಸೂರಿನ ಕೆ.ಜಿ.ಕೊಪ್ಪಲು 5ನೇ ಕ್ರಾಸ್ ನಿವಾಸಿಗಳಾದ ರವಿಕುಮಾರ್(26), ಶಿವಕುಮಾರ್(24) ಹಲ್ಲೆಗೊಳಗಾಗಿ ತೀವ್ರವಾಗಿ ಗಾಯಗೊಂಡವರಾಗಿದ್ದು, ಅವರನ್ನು ಬಿಜಿಎಸ್ ಅಪೊಲೋ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಾಳುಗಳ ತಾಯಿ ವಸಂತ ಅವರು ನೀಡಿದ ದೂರಿನನ್ವಯ ಹಲ್ಲೆ ಆರೋಪಿಗಳಾದ ರೇಣುಕಾಪ್ರಸಾದ್, ಗುರು, ಮಣಿ, ಪವನ್ ಹಾಗೂ ಕುಮಾರಸ್ವಾಮಿ ಎಂಬುವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ 2023ರ ಸೆಕ್ಷನ್ 109, 115 (2), 3 (5) ರೀತ್ಯಾ ಪ್ರಕರಣ ದಾಖಲಿಸಿಕೊಂಡಿರುವ ಸರಸ್ವತಿಪುರಂ ಠಾಣೆ ಸಬ್‌ಇನ್‌ಸ್ಪೆಕ್ಟರ್ ಟಿ.ಎಸ್. ಮಹೇಂದ್ರ ತನಿಖೆ ಕೈಗೊಂಡಿದ್ದಾರೆ.

ಜನವರಿ 6ರಂದು ಸಂಜೆ 7.30 ಗಂಟೆಯಲ್ಲಿ ಕುವೆಂಪುನಗರ ಜ್ಯೋತಿ ಶಾಲೆ ಬಳಿ ನಿತಿನ್ ಮತ್ತು ಸೂರ್ಯ ಎಂಬುವರೊಂದಿಗೆ ಮಾತನಾಡುತ್ತಾ ಕುಳಿತಿರುವಾಗ ಅದೇ ಮಾರ್ಗವಾಗಿ ಹೋಗುತ್ತಿದ್ದ ರೇಣುಕಾಪ್ರಸಾದ್ ಬಂದು ರವಿಕುಮಾರ್ ಮತ್ತು ಶಿವಕುಮಾರ್ ಮೇಲೆ ಏಕಾಏಕಿ ಹಲ್ಲೆ ಮಾಡಿ ಬಟ್ಟೆ ಹರಿದು ಹಾಕಿ ಹೋಗಿದ್ದನು ಎಂದು ವಸಂತ ದೂರಿನಲ್ಲಿ ತಿಳಿಸಿದ್ದಾರೆ.

ಆ ವಿಚಾರ ಸಂಬಂಧ ಮಾತನಾಡುವ ಸಲುವಾಗಿ ರವಿಕುಮಾರ್ ಮತ್ತು ಶಿವಕುಮಾರ್ ರಾತ್ರಿ 8 ಗಂಟೆಗೆ ತಿಬ್ಬಾದೇವಿ ಸರ್ಕಲ್ ಬಳಿಯ ಟೀ ಸ್ಟಾಲ್ ಬಳಿ ಹೋದಾಗ ಅಲ್ಲೇ ಇದ್ದ ರೇಣುಕಾ ಪ್ರಸಾದ್, ಗುರು, ಮಣಿ, ಪವನ್, ಕುಮಾರಸ್ವಾಮಿ ಏಕಾಏಕಿ ಹಲ್ಲೆ ನಡೆಸಿ ಪ್ಲಾಸ್ಟಿಕ್ ಚೇರ್ ಎಸೆದು ಗಾಯಗೊಳಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದು, ಘಟನೆಯಲ್ಲಿ ಶಿವಕುಮಾರ್ ಕುತ್ತಿಗೆಯಲ್ಲಿದ್ದ ಚಿನ್ನದ ಸರ ಕಳವಾಗಿದೆ ಎಂದು ಆರೋಪಿಸಿದ್ದಾರೆ.

ಜ.11ರಂದು ತಿಂಗಳ ಮಾಸಿಕ ಸಭೆ

ಮೈಸೂರು,ಜ.8–ರೈಲ್ವೆ ಪೆನ್ಷನರ್ಸ್ ಅಸೋಸಿಯೇಷನ್‌ನ ತಿಂಗಳ ಮಾಸಿಕ ಸಭೆಯು ಜ.11ರಂದು ಬೆಳಗ್ಗೆ 11.30 ಗಂಟೆಗೆ ಸಂಘದ ಕಾರ್ಯಾಲಯದಲ್ಲಿ ನಡೆಯಲಿದೆ. ಜಿ.ಎಸ್.ಸ್ವಾಮಿನಾಥನ್ ಸಂಘದ ಚಟುವಟಿಕೆಗಳ ಬಗ್ಗೆ ತಿಳಿಸಿಕೊಡುವರು ಹಾಗೂ ನೋಷನ್ ಇಂಕ್ರಿಮೆಂಟ್ ಬಗ್ಗೆ ಮಾಹಿತಿ ನೀಡುವರು. ರೈಲ್ವೆ ಆಸ್ಪತ್ರೆ ಚೀಫ್ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ. ಅಶೋಕ್ ಕುಮಾರ್ ಸಭೆಯನ್ನು ಉದ್ದೇಶಿಸಿ ಮಾತನಾಡುವರು. ಸಂಘದ ಅಧ್ಯಕ್ಷ ಪಾರ್ಥಸಾರಥಿ ಅಧ್ಯಕ್ಷತೆ ವಹಿಸಲಿದ್ದಾರೆ.

ಪಿಂಚಣಿದಾರರ ಸಭೆ: ಮೈಸೂರು ನಗರದ ಕೇಂದ್ರ ಸರ್ಕಾರಿ ಪಿಂಚಣಿದಾರರ ಅಸೋಸಿಯೇಷನ್ ವತಿಯಿಂದ ಜ.12ರಂದು ಬೆಳಗ್ಗೆ 10 ಗಂಟೆಗೆ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸದ್ವಿದ್ಯಾ ಪಾಠಶಾಲಾ ಆವರಣದಲ್ಲಿ ಪಿಂಚಣಿದಾರರ ದಿನಾಚರಣೆ ಆಚರಿಸಲಾಗುವುದು ಎಂದು ಸಂಸ್ಥೆ ಅಧ್ಯಕ್ಷ ಪಿ.ಎಂ.ಪರಮೇಶ್ವರಯ್ಯ ತಿಳಿಸಿದ್ದಾರೆ.

ಸಿದ್ದರಾಮಯ್ಯ ಅಧಿಕಾರದಲ್ಲಿದ್ದರೆ ಉಗ್ರರಿಗೆ ಸುಗ್ಗಿ; ನಕ್ಸಲ್ ಶರಣಾಗತಿ ಪ್ಯಾಕೇಜ್‌ಗೆ ಸುನೀಲ್‌ಕುಮಾರ್ ವಿರೋಧ

ಬೆಂಗಳೂರು,ಜ.8–ಸಶಸ್ತ್ರ ಹೋರಾಟ ತೊರೆದು ಪ್ರಜಾಸತ್ತಾತ್ಮಕ ಹೋರಾಟ ನಡೆಸುವ ನಿಟ್ಟಿನಲ್ಲಿ ಶರಣಾಗತರಾಗುತ್ತಿರುವ 6 ಮಂದಿ ನಕ್ಸಲರಿಗೆ ಶರಣಾಗತಿ ಪ್ಯಾಕೇಜ್ ನೀಡುವ ವಿಚಾರವಾಗಿ ಮಾಜಿ ಸಚಿವ ಹಾಗೂ ಬಿಜೆಪಿ ಶಾಸಕ ಸುನೀಲ್ ಕುಮಾರ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಚಿಕ್ಕಮಗಳೂರಿನಲ್ಲಿ ಮುಂಡಗಾರು ಲತಾ ನೇತೃತ್ವದಲ್ಲಿ ನಕ್ಸಲರು ಶರಣಾಗತರಾಗುತ್ತಿರುವ ಸಂದರ್ಭದಲ್ಲೇ, ಸುನೀಲ್ ಕುಮಾರ್ ಈ ವಿಚಾರವಾಗಿ ಆಕ್ಷೇಪ ಎತ್ತಿರುವುದಲ್ಲದೇ ಸರ್ಕಾರದ ನಡೆಯನ್ನು ತೀವ್ರವಾಗಿ ವಿರೋಧಿಸಿದ್ದಾರೆ.

ಈ ಕುರಿತು ತಮ್ಮ ಅಧಿಕೃತ 'ಎಕ್ಸ್' ಅಕೌಂಟ್‌ನಲ್ಲಿ ಟ್ವೀಟ್ ಮಾಡಿರುವ ಸುನೀಲ್‌ಕುಮಾರ್, ಆರು ಮಂದಿ ನಕ್ಸಲರಿಗೆ ರಾಜ್ಯ ಸರ್ಕಾರ ಶರಣಾಗತಿ ಪ್ಯಾಕೇಜ್ ನೀಡುತ್ತಿರುವುದು ನಾಗರಿಕ ಸಮಾಜವನ್ನು ಬೆಚ್ಚಿಬೀಳಿಸಿದೆ. ಯಾವ ಮಾನದಂಡದ ಮೇಲೆ ಸರ್ಕಾರ ಈ ಕ್ರಮಕ್ಕೆ ಮುಂದಾಗಿದೆ ಎಂದು ಪ್ರಶ್ನಿಸಿದ್ದಾರೆ.



ಸಿದ್ದರಾಮಯ್ಯ ಅಧಿಕಾರಕ್ಕೆ ಬಂದಾಗಲೆಲ್ಲ ನಕ್ಸಲರಿಗೆ ಹಾಗೂ ಉಗ್ರರಿಗೆ ಸುಗ್ಗಿ. ಅವರಿಗೆ ಕ್ಷಮೆ, ಪ್ರಕರಣ ರದ್ದು, ಸುಖ–ಸೌಕರ್ಯ ಎಲ್ಲವೂ ಸಿಗುತ್ತದೆ ಎಂದು ಸುನೀಲ್‌ಕುಮಾರ್ ಇದೇ ವೇಳೆ ಆರೋಪ ಮಾಡಿದ್ದಾರೆ. ರಾಷ್ಟ್ರಕವಿ ಕುವೆಂಪು ಅವರ ಕರ್ಮಭೂಮಿಯೂ ಆಗಿದ್ದ ತಣ್ಣಗಿನ ಮಲೆನಾಡು ಭಾಗದಲ್ಲಿ, ಬಂದೂಕಿನ ಮೊರೆತ ಕೇಳಿಸಿದ ನಕ್ಸಲರಿಗೆ ಕ್ಷಮೆ ಕೊಟ್ಟು ಅವರನ್ನು ನಗರ ನಕ್ಸಲರಾಗಿಸಿ ಬುಡಮೇಲು ಕೃತ್ಯಕ್ಕೆ ಲೈಸೆನ್ಸ್ ಕೊಡುತ್ತೀರಾ ಎಂದು ಬಿಜೆಪಿ ಶಾಸಕ ರಾಜ್ಯ ಸರ್ಕಾರವನ್ನು ಪ್ರಶ್ನಿಸಿದ್ದಾರೆ. ಸಿದ್ದರಾಮಯ್ಯನವರೇ ಇದರಿಂದ ಪೊಲೀಸರ ಆತ್ಮಸ್ಥೈರ್ಯ ಏನಾಗಬೇಡ. ಈ ಶರಣಾಗತಿ ಪ್ರಹಸನವೇ ಅನುಮಾನಾಸ್ಪದವಾಗಿದೆ ಎಂದು ಸುನೀಲ್‌ಕುಮಾರ್ ಟ್ವೀಟ್ ಮೂಲಕ ತೀವ್ರ ಆಕ್ರೋಶ ಹೊರ ಹಾಕಿದ್ದಾರೆ.

ದಸರಾ ವಸ್ತುಪ್ರದರ್ಶನದ ಫ್ಯಾಶನ್ ಶೋನಲ್ಲಿ 160ಕ್ಕೂ ಅಧಿಕ ಮಾಡೆಲ್‌ಗಳು ಭಾಗಿ

ಮೈಸೂರು, ಜ.8(ಎಂಟಿವೈ)– ದಸರಾ ವಸ್ತುಪ್ರದರ್ಶನ ಆವರಣದ ಪಿ.ಕಾಳಿಂಗ ರಾವ್ ಗಾನಮಂಟಪದಲ್ಲಿ ಇತ್ತೀಚೆಗೆ ತಿಬ್ಬಾಸ್ ಗ್ರೂಪ್ ಮಾಡೆಲಿಂಗ್ ಅಕಾಡೆಮಿ ಆಯೋಜಿಸಿದ್ದ ಫ್ಯಾಶನ್ ಶೋ ಸ್ಪರ್ಧೆಯಲ್ಲಿ 160ಕ್ಕೂ ಹೆಚ್ಚು ಮಾಡೆಲ್‌ಗಳು ಪಾಲ್ಗೊಂಡು ಗಮನ ಸೆಳೆದರು ಎಂದು ಅಕಾಡೆಮಿ ಸ್ಥಾಪಕ ಡಿ.ಸಿ.ನಾಗೇಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫ್ಯೂಚರ್ ಮಾಡೆಲ್ ಆಫ್ ಇಂಡಿಯಾ ಎಡಿಷನ್ 4, ನ್ಯಾಷನಲ್ ಲೆವೆಲ್ ಬ್ಯೂಟಿ ಪೇಜೆಂಟ್ ಕಾಂಪಿಟೇಶನ್ ಹೆಸರಿನಲ್ಲಿ ಸ್ಪರ್ಧೆ ನಡೆದಿತ್ತು. ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಸಿಇಓ ರುದ್ರೇಶ್, ಸಾಂಸ್ಕೃತಿಕ ಕಾರ್ಯಕ್ರಮ ಸಮಿತಿ ಅಧ್ಯಕ್ಷ ರಘುರಾಜೆ ಅರಸ್ ಪಾಲ್ಗೊಂಡಿದ್ದರು. ಲಿಟಲ್ ಪ್ರಿನ್ಸ್ ವಿಭಾಗದಲ್ಲಿ ಲಿಯಾನ್ ನವೀನ್, ಪ್ರಿನ್ಸಸ್ ವಿಭಾಗದಲ್ಲಿ ಮಿಸ್ಬಾ, ಮಿಸ್ ಟೀನ್ ಆಗಿ ತನಿಷಾ, ಮಿಸ್ಟರ್ ಟೀನ್ ಆಗಿ ಹರ್ಷಿತ್, ಮಿಸ್ ವಿಭಾಗದಲ್ಲಿ ನಿಹಾರಿಕಾ, ಮಿಸ್ಟರ್ ಸ್ಪರ್ಧೆಯಲ್ಲಿ ಶಂಕರ್ ಹಾಗೂ ಮ್ಯಾರೀಡ್ ವುಮೆನ್ ವಿಭಾಗದಲ್ಲಿ ಆಶಾ ವಿಜೇತರಾದರು. ತೀರ್ಪುಗಾರರಾಗಿ ಸುಧಾರಾಣಿ, ಸ್ವಾತಿ ಪ್ರಕಾಶ್ ಶೆಟ್ಟಿ ಭಾಗವಹಿಸಿದ್ದರು ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಶೋ ನಿರ್ವಾಹಕಿ ಶಿವಾನಿ ಉಪಸ್ಥಿತರಿದ್ದರು.

ರಾಜ್ಯದಲ್ಲಿ ಬಾಣಂತಿಯರ ಸರಣಿ ಸಾವು; ಸರ್ಕಾರದ ವಿರುದ್ಧ ಬಿಜೆಪಿ ಮಹಿಳಾ ಮೋರ್ಚಾ ಪ್ರತಿಭಟನೆ

ಮೈಸೂರು, ಜ.8(ಎಂಟಿವೈ)– ರಾಜ್ಯದ ವಿವಿಧೆಡೆ ಸಂಭವಿಸಿದ ಬಾಣಂತಿಯರ ಸರಣಿ ಸಾವು ಪ್ರಕರಣ ಹಾಗೂ ಅವುಗಳ ತಡೆಗೆ ಆಗ್ರಹಿಸಿ ಬಿಜೆಪಿ ಮಹಿಳಾ ಮೋರ್ಚಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಜಿ.ಪಂ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ಬಿಜೆಪಿ ಮಹಿಳಾ ಮೋರ್ಚಾ ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಕಳಪೆ ಮಟ್ಟದ ಔಷಧಿ ಸರಬರಾಜಿನಿಂದಾಗಿ ಬಾಣಂತಿಯರ ಸಾವು ಸಂಭವಿಸುತ್ತಿದೆ. ಇದಕ್ಕೆ ರಾಜ್ಯ ಸರ್ಕಾರವೇ ನೇರ ಹೊಣೆ ಎಂದು ಆರೋಪಿಸಿದರು.

ಈ ವೇಳೆ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ಆರೋಗ್ಯ ಇಲಾಖೆ ನೀಡಿರುವ ಕಳಪೆ ಗುಣಮಟ್ಟದ ಔಷಧಿಯಿಂದ ರಾಜ್ಯದಲ್ಲಿ ಬಾಣಂತಿಯರ ಸರಣಿ ಸಾವು ಉಂಟಾಗಿದೆ. ಈ ಘಟನೆಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ನೇರ ಕಾರಣ. ಪ್ರಕರಣದ ನೈತಿಕ ಹೊಣೆಹೊತ್ತು ಅವರು ರಾಜೀನಾಮೆ ನೀಡಬೇಕು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಬಾಣಂತಿಯರ ಸಾವಿಗೂ ನಮಗೂ ಯಾವುದೇ ರೀತಿಯ ಸಂಬಂಧವಿಲ್ಲ ಎಂಬಂತೆ ವರ್ತಿಸುತ್ತಿದ್ದಾರೆ. ಮೃತರ ಕುಟುಂಬಕ್ಕೆ ಪರಿಹಾರವನ್ನು ನೀಡುತ್ತಿಲ್ಲ ಎಂದು ನಾಗೇಂದ್ರ ಆರೋಪಿಸಿದರು.

ಕೂಡಲೇ ಈ ಪ್ರಕರಣವನ್ನು ರಾಜ್ಯ ಸರ್ಕಾರ ಸಿಬಿಐಗೆ ವಹಿಸಬೇಕು. ಬಾಣಂತಿಯರ ಸರಣಿ ಸಾವಿಗೆ ನ್ಯಾಯ ಕೊಡಿಸಬೇಕು. ಇದಕ್ಕೆ ಕಾರಣರಾದವರಿಗೆ ಶಿಕ್ಷೆ ಆಗಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾ ರಾಜು, ಮಾಜಿ ಮೇಯರ್ ಶಿವಕುಮಾರ್, ಮುಖಂಡ ಹೆಚ್.ಜಿ.ಗಿರಿಧರ್, ಎ.ವಿ.ವಿದ್ಯಾಅರಸ್, ಬಿಜೆಪಿ ಮಹಿಳಾ ಮೋರ್ಚಾ ಗ್ರಾಮಾಂತರ ಅಧ್ಯಕ್ಷೆ ನಳಿನಿ, ಮಹಿಳಾ ಮೋರ್ಚಾ ನಗರ ಕಾರ್ಯದರ್ಶಿ ರಶ್ಮಿ, ಹೇಮಲತಾ, ವೇದಾವತಿ, ರೂಪ ಕುಮಾರ್, ಸರ್ವಮಂಗಳ, ಭಾಗ್ಯ, ಜ್ಯೋತಿ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.



ರಾಜ್ಯದಲ್ಲಿ ನಡೆದ ಬಾಣಂತಿಯರ ಸರಣಿ ಸಾವು ಖಂಡಿಸಿ ಬಿಜೆಪಿ ಮಹಿಳಾ ಮೋರ್ಚಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಶೀಘ್ರದಲ್ಲೇ ಸ್ಟಾರ್ ಚಂದ್ರುಗೆ ಎಂಎಲ್‌ಸಿ ಸ್ಥಾನ?

ಎರಡು ದಶಕದ ಬಳಿಕ ಮಂಡ್ಯ ಜಿಲ್ಲೆಗೆ ನಾಮನಿರ್ದೇಶನ ಪರಿಷತ್ ಸ್ಥಾನ ಸಿಗುವ ನಿರೀಕ್ಷೆ

ಎಂ.ಕೆ.ಮೋಹನ್‌ರಾಜ್

ಮಂಡ್ಯ,ಜ.8– ಸದ್ಯದಲ್ಲೇ ರಾಜ್ಯಪಾಲರಿಂದ ನೇಮಕವಾಗಲಿರುವ ನಾಲ್ಕು ವಿಧಾನಪರಿಷತ್ ನಾಮನಿರ್ದೇಶಿತ ಸ್ಥಾನಗಳ ಪೈಕಿ ಒಂದು ಸ್ಥಾನ ಮಂಡ್ಯ ಜಿಲ್ಲೆಗೆ ಸಿಗುವ ಸಾಧ್ಯತೆ ಇದ್ದು, ಕಳೆದ ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ಸ್ಪರ್ಧಿಸಿ 5,67 ಲಕ್ಷ ಮತ ಗಳಿಸಿ ಗಮನಸೆಳೆದಿದ್ದ ವೆಂಕಟರಮಣೇಗೌಡ (ಸ್ಟಾರ್‌ಚಂದ್ರು)ರಿಗೆ ದಕ್ಕುವ ಸಾಧ್ಯತೆ ಇದೆ.

ಕಾಂಗ್ರೆಸ್‌ನ ಯು.ಬಿ.ವೆಂಕಟೇಶ್, ಪ್ರಕಾಶ್ ರಾಥೋಡ್ ಅವರ ಪರಿಷತ್ ಸದಸ್ಯತ್ವ ಅವಧಿ ಮುಕ್ತಾಯವಾಗಿದೆ. ಬಿಜೆಪಿ ವಿಧಾನಪರಿಷತ್ ಸದಸ್ಯರಾಗಿದ್ದ ಸಿ.ಪಿ.ಯೋಗೇಶ್ವರ್ ಕಾಂಗ್ರೆಸ್ ಸೇರ್ಪಡೆಯಾಗಿ ಚನ್ನಪಟ್ಟಣ ಉಪಚುನಾವಣೆಯಲ್ಲಿ ವಿಧಾನಸಭೆ ಸೇರಿರುವ ಹಿನ್ನೆಲೆಯಲ್ಲಿ ಈ ಹಿಂದೆಯೇ ಎಂಎಲ್‌ಸಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಇನ್ನು ಜೆಡಿಎಸ್ ಪರಿಷತ್ ಸದಸ್ಯ ತಿಪ್ಪೇಸ್ವಾಮಿ ಅಧಿಕಾರಾವಧಿ ಜ.27ಕ್ಕೆ ಮುಕ್ತಾಯವಾಗಲಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ವಿಧಾನ ಪರಿಷತ್‌ನ ನಾಲ್ಕು ಸ್ಥಾನಕ್ಕೆ ಆಯ್ಕೆ ಮಾಡಿಕೊಳ್ಳುವ ಅವಕಾಶವಿದ್ದು, ಈ ಹಿನ್ನೆಲೆಯಲ್ಲಿ ಸ್ಟಾರ್ ಚಂದ್ರು ಪ್ರಬಲ ಆಕಾಂಕ್ಷಿಯಾಗಿದ್ದಾರೆ.


ಸ್ಟಾರ್ ಚಂದ್ರು ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಅಚ್ಚರಿಯ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು. ಮೂಲತಃ ನಾಗಮಂಗಲ ತಾಲೂಕು ಕನ್ನಾಘಟ್ಟ ಗ್ರಾಮದ ಇವರು, ಬೆಂಗಳೂರಿನಲ್ಲಿ ಉದ್ಯಮ ನಡೆಸುತ್ತಿದ್ದಾರೆ. ರಾಜಕೀಯವಾಗಿ ಯಾವೊಂದು ಚುನಾವಣೆಗೆ ಸ್ಪರ್ಧೆ ಮಾಡಿರಲಿಲ್ಲ. ಆದರೆ ಏಕಾಏಕಿ ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಿಂದ ಅಭ್ಯರ್ಥಿಯಾದರು. ಎರಡು ಬಾರಿ ಸಿಎಂ ಆಗಿದ್ದ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಎದುರು ಸಮರ್ಥವಾಗಿ ಚುನಾವಣೆ ಎದುರಿಸಿದ್ದರು. ಈ ಚುನಾವಣೆಯಲ್ಲಿ ಸೋಲು ಕಂಡರೂ ಗಳಿಸಿದ ಮತಗಳು ಕಡಿಮೆ ಏನಲ್ಲ. 5,67,261 ಮತ ಗಳಿಕೆ ಕಂಡಿದ್ದರು. ಹೆಚ್‌ಡಿಕೆ ಹೊರತುಪಡಿಸಿ ಇನ್ಯಾವುದೇ ಎದುರಾಳಿ ಅಭ್ಯರ್ಥಿಯಾಗಿದ್ದರೂ ಫಲಿತಾಂಶ ಜೆಡಿಎಸ್‌ಗೆ ಸುಲಭವಾಗಿರಲಿಲ್ಲ ಎನ್ನುವುದು ರಾಜಕೀಯ ಪಂಡಿತರ ಲೆಕ್ಕಾಚಾರವಾಗಿತ್ತು.

ಲೋಕಸಭಾ ಚುನಾವಣೆ ಸೋಲಿನ ಬಳಿಕವೂ ಜಿಲ್ಲಾ ರಾಜಕಾರಣದಲ್ಲಿ ಸ್ಟಾರ್ ಚಂದ್ರು ಸಕ್ರಿಯವಾಗಿದ್ದಾರೆ. ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಉಪಾಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾರೆ. ಮಾತ್ರವಲ್ಲದೆ ಮಂಡ್ಯ ಲೋಕಸಭೆಯ ಎಂಟು ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷದ ಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಪಕ್ಷಕ್ಕೆ ಸಂಘಟನೆ ಜತೆಗೆ ಆರ್ಥಿಕವಾಗಿಯೂ ಬಲ ತುಂಬುತ್ತಿದ್ದಾರೆ. ಮುಖ್ಯವಾಗಿ ಕಾಂಗ್ರೆಸ್‌ನ ಶಾಸಕರು, ಮಾಜಿ ಶಾಸಕರು ಸೇರಿದಂತೆ ಮುಖಂಡರೊಂದಿಗೆ ಉತ್ತಮ ಒಡನಾಟ ಹೊಂದಿದ್ದಾರೆ.

ಎರಡು ದಶಕದಿಂದ ಅವಕಾಶ ಸಿಕ್ಕಿಲ್ಲ: ಹಾಗೆ ನೋಡಿದರೆ ಕಾಂಗ್ರೆಸ್‌ನಿಂದ ವಿಧಾನ ಪರಿಷತ್ ನಾಮನಿರ್ದೇಶನ ಜಿಲ್ಲೆಗೆ ಸಿಕ್ಕಿ ಬರೋಬ್ಬರಿ 24 ವರ್ಷವಾಗಿದೆ. ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಮಾಜಿ ಶಾಸಕ ಜೆ.ದೇವಯ್ಯ ಅವರ ಪುತ್ರ ಎಂ.ಡಿ.ರಮೇಶ್‌ರಾಜು ಅವರನ್ನು ವಿಧಾನ ಪರಿಷತ್‌ಗೆ ನಾಮನಿರ್ದೇಶನ ಮಾಡಿದ್ದರು. ಇದಾದ ಬಳಿಕ ಈವರೆಗೆ ಕಾಂಗ್ರೆಸ್‌ನಿಂದ ಜಿಲ್ಲೆಗೆ ಎಂಎಲ್‌ಸಿ ನಾಮನಿರ್ದೇಶನದ ಅವಕಾಶ ಒದಗಿ ಬಂದಿಲ್ಲ.

2013ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿದ್ದರು. ಆ ವೇಳೆಯೂ ಜಿಲ್ಲೆಗೆ ಎಂಎಲ್‌ಸಿ ನಾಮನಿರ್ದೇಶನ ಸ್ಥಾನ ಕಲ್ಪಿಸಿರಲಿಲ್ಲ. ಈಗ ಮತ್ತೊಮ್ಮೆ ಸಿಎಂ ಆಗಿದ್ದು, ಜಿಲ್ಲೆಯಲ್ಲಿ ಬೆಂಬಲಿತ ಸೇರಿದಂತೆ ಆರು ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕರಿದ್ದಾರೆ. ಆದ್ದರಿಂದ ನಾಮನಿರ್ದೇಶನದ ಅವಕಾಶವನ್ನು ಜಿಲ್ಲೆಗೆ ಕೊಡಬೇಕೆನ್ನುವ ಒತ್ತಾಯವಿದೆ.

ಮಂಡ್ಯ ಜಿಲ್ಲೆಯ ಅಭಿವೃದ್ಧಿಗೆ ಹಾಗೂ ಕಾಂಗ್ರೆಸ್ ಪಕ್ಷದ ಬಲವರ್ಧನೆಗೆ ನೆರವಾಗುವುದಾದರೆ ಪಕ್ಷದ ವರಿಷ್ಠರು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಮೇಲೆ ಒತ್ತಡ ತಂದು ಸ್ಟಾರ್ ಚಂದ್ರು ಅವರಿಗೆ ವಿಧಾನಪರಿಷತ್ ಸದಸ್ಯ ಸ್ಥಾನವನ್ನು ದೊರಕಿಸಿ ಕೊಡಲು ಪ್ರಯತ್ನಿಸಲಾಗುವುದು. –
ಸಿ.ಡಿ.ಗಂಗಾಧರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ, ಮಂಡ್ಯ.


ವೆಂಕಟರಮಣೇಗೌಡ(ಸ್ಟಾರ್‌ಚಂದ್ರು)

ಸ್ಟಾರ್ ಚಂದ್ರು ಬೆನ್ನಿಗಿದ್ದಾರೆ ಪ್ರಬಲರು!

ಸ್ಟಾರ್ ಚಂದ್ರು ರಾಜಕೀಯವಾಗಿ ಇತ್ತೀಚಿನ ವರ್ಷದಲ್ಲಿ ಗುರುತಿಸಿಕೊಂಡಿದ್ದಾರೆ. ಆದರೆ ಮೂಲತಃ ರಾಜಕೀಯ ಕುಟುಂಬಕ್ಕೆ ಸೇರಿದವರು. ಇವರ ಸಹೋದರ ಕೆ.ಎಚ್.ಪುಟ್ಟಸ್ವಾಮಿ ಗೌಡ ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಪ್ರಸ್ತುತ ಇವರ ಬೆಂಬಲವೂ ರಾಜ್ಯ ಸರ್ಕಾರಕ್ಕಿದೆ. ಸದ್ಯ ರಾಜ್ಯ ಸರ್ಕಾರಕ್ಕೆ ನಾಲ್ಕು ಸ್ಥಾನಕ್ಕೆ ನಾಮನಿರ್ದೇಶನ ಮಾಡುವ ಅವಕಾಶವಿದೆಯಾದರೂ, ಇದಕ್ಕೆ ಪೈಪೋಟಿ ಹೆಚ್ಚಾಗಿಯೇ ಇದೆ. 40ಕ್ಕೂ ಹೆಚ್ಚು ಆಕಾಂಕ್ಷಿಗಳು ನಾಯಕರಿಗೆ ದುಂಬಾಲು ಬಿದ್ದಿದ್ದಾರೆ. ಆದರೆ ಸ್ಟಾರ್ ಚಂದ್ರು ಸಿಎಂ, ಡಿಸಿಎಂ ಎರಡು ಪಾಳಯದಲ್ಲಿ ಸಕ್ರಿಯವಾಗಿದ್ದಾರೆ. ಇನ್ನು ಒಕ್ಕಲಿಗ ಕೋಟಾದಲ್ಲಿ ಚಂದ್ರು ಅವರಿಗೆ ಚನ್ನಪಟ್ಟಣ ಕ್ಷೇತ್ರದ ರಘುನಂದನ್ ರಾಮಣ್ಣ ಅವರು ಪೈಪೋಟಿ ಎನಿಸಬಹುದಾದರೂ ಡಿಸಿಎಂ ಡಿಕೆಶಿ ತವರು ಜಿಲ್ಲೆಯಾಗಿರುವುದರಿಂದ ಹಾಗೂ ರಘುನಂದನ್ ಅವರಿಗೆ ಮುಂದಿನ ದಿನದಲ್ಲಿ ಅವಕಾಶ ಸಿಗುವ ಸಾಧ್ಯತೆ ಇದೆ ಎನ್ನುವ ಮಾತಿದೆ. ಆದ್ದರಿಂದ ಸ್ಟಾರ್‌ಚಂದ್ರು ಅವರ ಪರವಾಗಿ ಬೆಂಬಲ ಹೆಚ್ಚಿದೆ.

ಮರ ಕತ್ತರಿಸುವ ಯಂತ್ರದಿಂದ ವ್ಯಕ್ತಿಯ ಹತ್ಯೆ ಪ್ರಕರಣ

ಮೃತನ ನಿವಾಸಕ್ಕೆ ಉಸ್ತುವಾರಿ ಸಚಿವರ ಭೇಟಿ, ಸಾಂತ್ವನ


ಮೃತ ರಮೇಶ್ ಅವರ ಮನೆಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕ ದರ್ಶನ್‌ಪುಟ್ಟಣ್ಣಯ್ಯ ಅವರು ಭೇಟಿ ನೀಡಿದ್ದರು.

ಪಾಂಡವಪುರ, ಜ.8– ತಾಲೂಕಿನ ಕ್ಯಾತನಹಳ್ಳಿ ಗ್ರಾಮದ ಹೊರವಲಯದ ಒಂಟಿ ಮನೆಗೆ ದರೋಡೆಕೋರ ನುಗ್ಗಿ ಮರ ಕತ್ತರಿಸುವ ಯಂತ್ರದಿಂದ ಹತ್ಯೆಗೊಳಗಾಗಿದ್ದ ಮೃತ ರಮೇಶ್ ಮನೆಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವಾನ ಹೇಳಿ ವೈಯುಕ್ತಿಕವಾಗಿ 50 ಸಾವಿರ ರೂ. ಪರಿಹಾರ ನೀಡಿದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಜತೆಗೂಡಿ ಮನೆಗೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಮೃತ ರಮೇಶ್ ಅವರ ಪತ್ನಿ ಯಶೋಧಮ್ಮ ಹಾಗೂ ಕುಟುಂಬಸ್ಥರೊಂದಿಗೆ ಚರ್ಚಿಸಿ ಘಟನೆಯ ವಿವರ ಪಡೆದರು. ಬಳಿಕ ಕುಟುಂಬಸ್ಥರಿಗೆ ಸಾಂತ್ವಾನ ಹೇಳಿ ವೈಯುಕ್ತಿಕವಾಗಿ ಪರಿಹಾರ ನೀಡಿದರು. ಅಲ್ಲದೆ ಸರಕಾರದಿಂದಲು ಸಾಧ್ಯವಾದರೆ ನೆರವು ಕೊಡಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಚ್.ತ್ಯಾಗರಾಜು, ಮನ್‌ಮುಲ್ ಅಧ್ಯಕ್ಷ ಬೋರೇಗೌಡ, ನಿರ್ದೇಶಕ ಕಾಡೇನಹಳ್ಳಿ ರಾಮಚಂದ್ರು, ಬಿ.ಜೆ.ಸ್ವಾಮಿ ಸೇರಿದಂತೆ ಮುಖಂಡರು ಹಾಜರಿದ್ದರು.

ಏಪ್ರಿಲ್‌ನಲ್ಲಿ ಅದ್ಧೂರಿ ವೈರಮುಡಿ ಜಾತ್ರಾ ಮಹೋತ್ಸವ

ಶೀಘ್ರ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಚರ್ಚೆ

ಮೇಲುಕೋಟೆ: ಮುಂಬರುವ ಏಪ್ರಿಲ್ ತಿಂಗಳಿನಲ್ಲಿ ನಡೆಯುವ ವಿಶ್ವವಿಖ್ಯಾತ ವೈರಮುಡಿ ಜಾತ್ರಾ ಮಹೋತ್ಸವವನ್ನು ಕಳೆದ ವರ್ಷಕ್ಕಿಂತ ವಿಜೃಂಭಣೆಯಿಂದ ಆಚರಿಸಲು ಸಿದ್ಧತೆ ಮಾಡಲಾಗುತ್ತಿದೆ ಎಂದು ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ತಿಳಿಸಿದರು.

ಕನ್ನಡ ಸಂಸ್ಕೃತಿ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖಾ ಸಚಿವರೊಂದಿಗೆ ಸಭೆ ನಡೆಸಿ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಇದೇ ವೇಳೆ ಮೇಲುಕೋಟೆ ಅಭಿವೃದ್ಧಿಯ ಯೋಜನೆಗಳನ್ನು ಸರ್ಕಾರದಿಂದ ಅನುಷ್ಠಾನ ಮಾಡಲಾಗುತ್ತದೆ. ಭಕ್ತರಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಮತ್ತು ಜಿಲ್ಲಾಡಳಿತ ಬದ್ಧವಿದ್ದು, ಶೀಘ್ರವಾಗಿ ಜಿಲ್ಲಾಮಟ್ಟದ ಅಧಿಕಾರಿಗಳ ಸಭೆ ನಡೆಸುವ ಮೂಲಕ ಚೆಲುವನಾರಾಯಣಸ್ವಾಮಿಯ ವೈರಮುಡಿ ಜಾತ್ರಾ ಮಹೋತ್ಸವವನ್ನು ವಿಜೃಂಭಣೆಯಿಂದ ನಡೆಸಲಾಗುತ್ತದೆ. ವೈರಮುಡಿ ಬ್ರಹ್ಮೋತ್ಸವ ಹಾಗೂ ಅಭಿವೃದ್ಧಿ ಕುರಿತಂತೆ ವಿವಿದ ಇಲಾಖೆ ಸಚಿವರು ಹಾಗೂ ಶಾಸಕರೊಂದಿಗೆ 15 ದಿನಗಳ ಒಳಗೆ ಉನ್ನತ ಮಟ್ಟದ ಸಭೆ ನಡೆಸಲಾಗುತ್ತದೆ ಎಂದು ಸುದ್ದಿಗಾರರೊಂದಿಗೆ ಮಾತನಾಡುತ್ತ ತಿಳಿಸಿದರು.

ಅನ್ನದಾನ ಸಮಿತಿ ರಚಿಸಲು ಸೂಚನೆ: ಮೇಲುಕೋಟೆಯಲ್ಲಿ ಅನ್ನದಾನವನ್ನು ನಿರಂತರವಾಗಿ ಮುಂದುವರೆಸಲು ಸಮಿತಿ ರಚನೆ ಮಾಡಲು ಪಾಂಡವಪುರ ಉಪವಿಭಾಗಾಧಿಕಾರಿಗಳಿಗೆ ಸೂಚಿಸಿದ್ದೇನೆ. ಸರ್ಕಾರದ ನಿರ್ದೇಶನ ಹಾಗೂ ನಿಯಮದಂತೆ ಅನ್ನದಾನ ನಿರ್ವಹಣೆಗಾಗಿಯೇ ಪ್ರತ್ಯೇಕ ಖಾತೆ ತೆರೆದು ದಾನಿಗಳಿಂದ ಬರುವ ಕಾಣಿಕೆಯನ್ನು ಸಮರ್ಪಕವಾಗಿ ಬಳಕೆ ಮಾಡಲು ದೇವಾಲಯದ ಆಡಳಿತಾಧಿಕಾರಿಗಳಿಗೆ ಸೂಚಿಸಿದ್ದೇನೆ. ಇಂದು ಆರಂಭವಾದ ಅನ್ನದಾನ ಯಾವುದೇ ಕಾರಣಕ್ಕೂ ನಿಲ್ಲದಂತೆ ನೋಡಿಕೊಳ್ಳಲೂ ತಿಳಿಸಿದ್ದೇನೆ ಎಂದರು. ಶಾಸಕ ದರ್ಶನ್ ಪುಟ್ಟಣ್ಣಯ್ಯ ಸಚಿವರ ಶ್ರೀಮತಿ ಧನಲಕ್ಷ್ಮಿ, ಪಾಂಡವಪುರ ಎಸಿ ಶ್ರೀನಿವಾಸ್, ಕಾರ್ಯನಿರ್ವಾಹಕ ಅಧಿಕಾರಿ ಶೀಲಾ ಇದ್ದರು.


ಮೇಲುಕೋಟೆಯಲ್ಲಿ ವೈರಮುಡಿ ಉತ್ಸವದ ಬಗ್ಗೆ ಮಾಹಿತಿ ನೀಡುತ್ತಿರುವ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ.

ಮಂಡ್ಯದಲ್ಲಿ ಭತ್ತ ಸುರಿದು ರೈತರ ಪ್ರತಿಭಟನೆ



ಮಂಡ್ಯ,ಜ.8– ಭತ್ತ ಖರೀದಿ ಕೇಂದ್ರ ತೆರೆಯಲು ವಿಳಂಬ ಮಾಡಲಾಗುತ್ತಿದೆ ಎಂದು ಆರೋಪಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು ಮಂಡ್ಯದಲ್ಲಿ ಕೃಷಿ ಸಚಿವರ ಕಚೇರಿ ಎದುರು ಭತ್ತ ಸುರಿದು ಪ್ರತಿಭಟನೆ ನಡೆಸಿದರು.

ನಗರದ ಸರ್ ಎಂವಿ ಪ್ರತಿಮೆ ಎದುರಿನಿಂದ ಮೆರವಣಿಗೆ ಹೊರಟ ಸಂಘದ ಕಾರ್ಯಕರ್ತರು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಕೃಷಿ ಸಚಿವರ ಕಚೇರಿಗೆ ಪ್ರತಿಭಟನಾಕಾರರು ಹೋಗಲು ಮುಂದಾದಾಗ ಗೇಟ್ ಮುಚ್ಚಿ ತಡೆದ ಪೊಲೀಸರನ್ನು ಬೇಧಿಸಿ ಒಳ ನುಗ್ಗಿ ಭತ್ತ ಬಡಿದು ಆಕ್ರೋಶಿಸಿದಾಗ ಗದ್ದಲದ ಪರಿಸ್ಥಿತಿ ಉಂಟಾಯಿತು, ಪೊಲೀಸರು ಪ್ರತಿಭಟನಾಕಾರರನ್ನು ಸಮಾಧಾನಿಸಿ ಹೊರಭಾಗಕ್ಕೆ ಕಳುಹಿಸಿದರು. ಆದರೆ ಬ್ಯಾನರ್ ಅಡ್ಡಲಾಗಿ ಹಿಡಿದ ಬಗ್ಗೆ ಸಬ್ ಇನ್‌ಸ್ಪೆಕ್ಟರ್ ಆಕ್ಷೇಪ ವ್ಯಕ್ತಪಡಿಸಿದಾಗ ಪ್ರತಿಭಟನಾಕಾರರು ಅವರ ವಿರುದ್ಧ ತಿರುಗಿ ಬಿದ್ದು ಪೊಲೀಸ್ ದೌರ್ಜನ್ಯದ ವಿರುದ್ಧ ದಿಕ್ಕಾರದ ಘೋಷಣೆ ಕೂಗಿದರು.

ಅನಂತರ ಭತ್ತವನ್ನು ಸುರಿದು ಮುಖ್ಯಮಂತ್ರಿ, ಕೃಷಿ ಸಚಿವರು ಹಾಗೂ ಜಿಲ್ಲಾಡಳಿತದ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಅತಿ ತುರ್ತಾಗಿ ಭಕ್ತ ಖರೀದಿ ಕೇಂದ್ರ ತೆರೆಯುವಂತೆ ಒತ್ತಾಯಿಸಿದರು.

ರೈತರು ಜೂನ್ ಮತ್ತು ಜುಲೈನಲ್ಲಿ ನಾಟಿ ಮಾಡಿದ ಭತ್ತ ನವೆಂಬರ್‌ನಿಂದ ಕಟಾವು ಮಾಡುತ್ತಿದ್ದಾರೆ, ಈಗಾಗಲೇ ಭತ್ತದ ಕಟಾವು ಅಂತಿಮ ಹಂತಕ್ಕೆ ಬಂದಿದೆ ಆದೂ ಸಹ ಭತ್ತ ಖರೀದಿ ಕೇಂದ್ರವನ್ನು ತೆರೆದಿಲ್ಲ, ಇದರಿಂದ ಸಂಕಷ್ಟಕ್ಕೆ ಸಿಲುಕಿದ ರೈತರು ಭತ್ತವನ್ನು ಮಾರಾಟ ಮಾಡುತ್ತಿದ್ದಾರೆ. ಪರಿಸ್ಥಿತಿ ದುರ್ಬಳಕೆ ಮಾಡಿಕೊಂಡ ದಲ್ಲಾಳಿಗಳು ಪ್ರತಿ ಕ್ವಿಂಟಾಲ್ ಭತ್ತವನ್ನು ಕೇವಲ 1800 ರೂ. ಗೆ ಖರೀದಿ ಮಾಡುತ್ತಿದ್ದಾರೆ, ಕನಿಷ್ಠ ಬೆಂಬಲ ಬೆಲೆ 2300 ರೂ ಇದ್ದೂ ಸಹ ಕಡಿಮೆ ಬೆಲೆಗೆ ಖರೀದಿಸಿ ರೈತರನ್ನು ವಂಚಿಸಲಾಗುತ್ತಿದೆ ಎಂದರು.

ಮನವಿ ಸ್ವೀಕರಿಸಿದ ಡಿಸಿ ಡಾ.ಕುಮಾರ, ಭತ್ತ ಖರೀದಿಗೆ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ, ಈಗಾಗಲೇ ಭತ್ತ ಖರೀದಿ ಕೇಂದ್ರ ಗುರುತಿಸಲಾಗಿದೆ, ಶೀಘ್ರದಲ್ಲಿ ಕೇಂದ್ರ ತೆರೆದು ಭತ್ತ ಖರೀದಿ ಮಾಡಲಾಗುವುದು ಎಂದರು.

ಒಂದನೇ ಪುಟದಿಂದ

ಶರಣಾದ ಆರು ನಕ್ಸಲರು

ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಗೆ ಸಂಜೆ ಹೊತ್ತಿಗೆ ಕರೆತರಲಾಯಿತು. ಡಿಸಿಎಂ ಡಿ.ಕೆ.ಶಿವಕುಮಾರ್, ಗೃಹ ಸಚಿವ ಜಿ.ಪರಮೇಶ್ವರ್ ಮತ್ತು ಡಿಜಿಪಿ ಅಲೋಕ್ ಮೋಹನ್ ಸಮ್ಮುಖದಲ್ಲಿ ನಕ್ಸಲರ ಶರಣಾಗತಿ ಪ್ರಕ್ರಿಯೆ ನಡೆಯಿತು. 6 ಮಂದಿ ನಕ್ಸಲರು ಶಸ್ತ್ರ ತ್ಯಜಿಸಿ ಶರಣಾದರು. ಈ ವೇಳೆ ನಕ್ಸಲರ ಜೊತೆ ಅವರ ಕುಟುಂಬಸ್ಥರು ಸಹ ಹಾಜರಿದ್ದರು.

ಬೆಳಗ್ಗೆ 7 ಗಂಟೆಗೆ ಶೃಂಗೇರಿಯಿಂದ ಹೊರಟ ನಕ್ಸಲರ ತಂಡ ಚಿಕ್ಕಮಗಳೂರಿನಲ್ಲಿ ಮಾತುಕತೆ ಮುಗಿಸಿ ಬೆಂಗಳೂರಿನತ್ತ ಪ್ರಯಾಣ ಬೆಳೆಸಿತು. ಸಂಜೆ 6 ಗಂಟೆ ಹೊತ್ತಿಗೆ ಸಿಎಂ ಗೃಹ ಕಚೇರಿ ಕೃಷ್ಣ ತಲುಪಿತು. ಆ ತಂಡವನ್ನು ಚೆಕ್ ಇನ್ ಮಾಡಿ ಪೊಲೀಸರು ಒಳಗೆ ಬಿಟ್ಟರು. ಸಿಎಂ ಕಚೇರಿ ಮುಂದೆ ಪೊಲೀಸ್ ಬಿಗಿ ಭದ್ರತೆ ಕಲ್ಪಿಸಲಾಗಿತ್ತು. ಬಳಿಕ ಸಿಎಂ ಮುಂದೆಯೇ ನಕ್ಸಲರು ಶಸ್ತ್ರ ತ್ಯಾಗ ಮಾಡಿದರು. ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಸಮಿತಿ ಸದಸ್ಯರು ಈ ವೇಳೆ ಉಪಸ್ಥಿತರಿದ್ದರು.

ಹೋರಾಟ ತಪ್ಪಲ್ಲ; ಶಸ್ತ್ರಾಸ್ತ್ರ ಹೋರಾಟ ತಪ್ಪು; ಸಿಎಂ ಕಿವಿಮಾತು: ಅನ್ಯಾಯದ ವಿರುದ್ಧ, ಶೋಷಣೆ, ದೌರ್ಜನ್ಯದ ವಿರುದ್ಧ ನ್ಯಾಯಕ್ಕಾಗಿ ಹೋರಾಡುವುದು ತಪ್ಪಲ್ಲ. ವ್ಯವಸ್ಥೆ ಬದಲಾವಣೆಗೆ ಹೋರಾಟ ಮಾಡಲು ಸಂವಿಧಾನದಲ್ಲಿ ಅವಕಾಶವಿದೆ. ಆದರೆ ಹೋರಾಟ ಶಾಂತಿಯುತವಾಗಿ, ನ್ಯಾಯಯುತವಾಗಿ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶಸ್ತ್ರ ತ್ಯಾಗ ಮಾಡಿದ ನಕ್ಸಲರಿಗೆ ಕಿವಿಮಾತು ಹೇಳಿದರು. ನಕ್ಸಲಿಸಂ, ಶಸ್ತ್ರಾಸ್ತ್ರ ಹೋರಾಟಕ್ಕೆ ಸಂವಿಧಾನದಲ್ಲಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವಕಾಶವಿಲ್ಲ. ಈ ಹಿಂದೆಯೂ ಬಹಳ ನಕ್ಸಲೀಯರು ಶಸ್ತ್ರಾಸ್ತ್ರ ತ್ಯಜಿಸಿ ಮುಖ್ಯವಾಹಿನಿಗೆ ಬಂದಿದ್ದಾರೆ. ಅವರ ಪುನರ್ ವಸತಿಗೆ ಸರ್ಕಾರ ನೆರವು ಒದಗಿಸಿದೆ. ಶಾಂತಿಗಾಗಿ ನಾಗರಿಕ ವೇದಿಕೆಯವರು ನನ್ನನ್ನು ಭೇಟಿ ಮಾಡಿ ನಕ್ಸಲಿಯರ ಮನವೊಲಿಸುವ ಬಗ್ಗೆ ತಿಳಿಸಿದ್ದರು. ಆ ಸಂದರ್ಭದಲ್ಲಿ ನಕ್ಸಲಿಸಂ ತ್ಯಜಿಸಿ ಮುಖ್ಯವಾಹಿನಿಗೆ ಬರಲು ಸರಕಾರ ಎಲ್ಲಾ ನೆರವು ನೀಡಲಿದೆ ಎಂದು ಹೇಳಿದ್ದೆ.

ನಾವು ಕರ್ನಾಟಕದಲ್ಲಿ ನಕ್ಸಲಿಸಂ ಕೊನೆಗಾಣಿಸಲು, ಅವರ ಬೇಡಿಕೆಗೆ ಸ್ಪಂದಿಸಲು ಏನೆಲ್ಲಾ ಕಾರ್ಯಕ್ರಮ ಬೇಕೋ ಅದನ್ನು ಕಾನೂನು ಚೌಕಟ್ಟಿನಲ್ಲಿ ಮಾಡುತ್ತೇವೆ. ಶಸ್ತ್ರಾಸ್ತ್ರ ಮೂಲಕ ಹೋರಾಟ ಮಾಡಿ ನ್ಯಾಯ ಪಡೆಯಲು ಪ್ರಜಾಪ್ರಭುತ್ವದಲಿ, ಸಂವಿಧಾನದಲ್ಲಿ ಅವಕಾಶವಿಲ್ಲ. ಶಾಂತಿಯುತವಾಗಿ ಹೋರಾಟ ನಡೆಸಲು ಪ್ರಜಾಪ್ರಭುತ್ವದಲ್ಲಿ ಅವಕಾಶವಿದೆ. ಸರ್ಕಾರ ಇದನ್ನು ವಿರೋಧಿಸುವುದಿಲ್ಲ. ಆದರೆ ಕಾನೂನು ಕೈಗೆತ್ತಿಕೊಂಡರೆ ಸರ್ಕಾರ ಸುಮ್ಮನಿರಲ್ಲ. ಅನ್ಯಾಯ ಕಡಿಮೆ ಮಾಡಲು ನಮ್ಮ ಸರ್ಕಾರ ಬಹಳ ಪ್ರಯತ್ನ ಮಾಡುತ್ತಿದೆ. ಯಾರಿಗೂ ಅನ್ಯಾಯ ಆಗಬಾರದು ಎಂಬುವುದು ನಮ್ಮ ಧ್ಯೇಯ. ಬಡವರ ಹಕ್ಕುಗಳ ರಕ್ಷಣೆಗಾಗಿ ಅವರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಶಕ್ತಿ ಬರಲು ಅನೇಕ ಕಾರ್ಯಕ್ರಮ ಜಾರಿ ಮಾಡಿದೆ. ಗ್ಯಾರಂಟಿ ಯೋಜನೆಗಳಾದ ಶಕ್ತಿ, ಗೃಹಲಕ್ಷ್ಮಿ ಯೋಜನೆ ಉದ್ದೇಶ ಇದೇ ಆಗಿದೆ. ಗೌರವಯುತವಾಗಿ ಬಡವರು ಬದುಕಲು ಅವಕಾಶ ಇದರಿಂದ ಸಿಗಲಿದೆ. ಬಡವರಿಗೆ ಆರ್ಥಿಕ ಮತ್ತು ಸಾಮಾಜಿಕವಾಗಿ ಬದುಕಲು ಶಕ್ತಿ ಬಂದರೆ ಮಾತ್ರ ಸಮಾಜದಲ್ಲಿ ಬದಲಾವಣೆ ಸಾಧ್ಯ. ನಕ್ಸಲಿಸಂ ರಹಿತವಾದ ಮುಕ್ತವಾದ ಸಮಾಜ ನಮ್ಮ ಗುರಿ. ಈ ಹಿನ್ನೆಲೆಯಲ್ಲಿ ಮುಖ್ಯವಾಹಿನಿಗೆ ಬರುವ ನಕ್ಸಲಿಯರಿಗೆ ಎಲ್ಲಾ ರೀತಿಯ ನೆರವು ಬಹಿರಂಗವಾಗಿ ಹೇಳಿದ್ದೆ. ನಿಮ್ಮನ್ನು ಕ್ರಿಮಿನಲ್‌ಗಳ ರೀತಿ ನೋಡದೆ, ಮಾನವರಂತೆ ನೋಡುವ ಭರವಸೆ ನೀಡಿದ್ದೆ. ನಕ್ಸಲೀಯರ ಶರಣಾಗತಿಯಲ್ಲಿ ಸಮಿತಿಯ ಸದಸ್ಯರ ಪಾತ್ರ ಮುಖ್ಯವಾಗಿದ್ದು, ಅವರಿಗೆ ಹಾಗೂ ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿದ ಎಲ್ಲಾ ಅಧಿಕಾರಿಗಳಿಗೆ ಧನ್ಯವಾದ ಸಲ್ಲಿಸಬಯಸುತ್ತೇನೆ ಎಂದು ಹೇಳಿದರು.

ಶರಣಾದ ನಕ್ಸಲರ ವಿವರ

ಮಾವೋವಾದಿ ದಳದಲ್ಲಿದ್ದು, ಇತ್ತೀಚೆಗೆ ನಕ್ಸಲ್ ತಂಡದ ನಾಯಕಿಯಾಗಿ ಗುರುತಿಸಿಕೊಂಡಿದ್ದರು. ಪೊಲೀಸ್ ದಾಳಿ ಸಂದರ್ಭದಲ್ಲಿ ಹಲವು ಬಾರಿ ತಪ್ಪಿಸಿಕೊಂಡಿದ್ದ ಲತಾ ಈಗ ಮುಖ್ಯವಾಹಿನಿಗೆ ಬರಲು ನಿರ್ಧರಿಸಿ, ಶರಣಾಗಿದ್ದಾರೆ.

ಸುಂದರಿ ಕುತ್ಲೂರು: ಸುಂದರಿ ಕುತ್ಲೂರು ಮೂಲತಃ ಆದಿವಾಸಿ ಮಹಿಳೆ. ಬಡತನ ಹಾಗೂ ಶಾಲೆ ದೂರವಿದ್ದುದರಿಂದ 3ನೇ ತರಗತಿಯ ನಂತರ ಶಾಲೆ ತೊರೆದರು. ಕುದುರೆಮುಖ ರಾಷ್ಟ್ರೀಯ ಉದ್ಯಾನ ಯೋಜನೆಯಿಂದಾಗಿ ಇವರ ಕುಟುಂಬ ಇದ್ದ ನೆಲೆಯನ್ನೂ ಕಳೆದುಕೊಳ್ಳುವ ಅಪಾಯ ಎದುರಿಸುತ್ತಿತ್ತು. ಪ್ರಜಾಸತ್ತಾತ್ಮಕ ಚಳುವಳಿ ಫಲ ನೀಡದೆಂದು ಕಂಡಾಗ ಆಗಿನ ಹಲವು ಯುವಜನರಂತೆ ಸುಂದರಿಯೂ ಸಹ ಆಯುಧ ಕೈಗೆತ್ತಿಕೊಂಡರು. ತನ್ನ 19ನೇ ವಯಸ್ಸಿನಲ್ಲಿ 2004ರಲ್ಲಿ ಮಾವೋವಾದಿ ಪಕ್ಷದ ಸದಸ್ಯರಾಗಿದ್ದು ಅಂದಿನಿಂದ ಕೇರಳ ಹಾಗೂ ಕರ್ನಾಟಕದಲ್ಲಿ ಸಂಚರಿಸುತ್ತಿರುವ ದಳದ ಭಾಗವಾಗಿದ್ದರು. ತನ್ನ ಹಾಗೂ ನೆರೆಹೊರೆಯ ಕುಟುಂಬಗಳ ಮೇಲೆ ಪೊಲೀಸರು ನಡೆಸುತ್ತಿದ್ದ ದಾಳಿಗಳು ದೌರ್ಜನ್ಯಗಳನ್ನು ಇಂದಿಗೂ ನೋವಿನಿಂದ ನೆನಪಿಸಿಕೊಳ್ಳುವ ಸುಂದರಿ ತನ್ನ ಹೋರಾಟದ ಕೆಚ್ಚನ್ನು ಉಳಿಸಿಕೊಂಡಿದ್ದರು. ಇನ್ನು ಮುಂದೆ ಪ್ರಜಾತಾಂತ್ರಿಕ ಚಳುವಳಿಯ ಭಾಗವಾಗಲು ಮುಖ್ಯ ವಾಹಿನಿಯನ್ನು ಸೇರಬಯಸಿದ್ದಾರೆ.

ವನಜಾಕ್ಷಿ: ಎಸ್‌ಎಸ್‌ಎಲ್‌ಸಿ ವರೆಗೂ ಓದಿರುವ ವನಜಾಕ್ಷಿ ಈ ತಂಡದ ಅತಿ ಹಿರಿಯ ಸದಸ್ಯೆ 1985 ರಲ್ಲಿ ಓದು ನಿಲ್ಲಿಸಿದ ಈ ಆದಿವಾಸಿ ಮಹಿಳೆ, 1992 ಮತ್ತು 1997ರಲ್ಲಿ ಗ್ರಾಮ ಪಂಚಾಯಿತಿ ಸದಸ್ಯೆಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದರು. 8 ಜನ ಮಕ್ಕಳ ದೊಡ್ಡ ಕುಟುಂಬದ ಹೆಣ್ಣು ಮಗಳಾಗಿ ಜನಿಸಿದ್ದ ಈಕೆ, ಹೊಲಿಗೆಯನ್ನೇ ಜೀವನಾಧಾರವಾಗಿಸಿಕೊಂಡಿದ್ದರು. ರಾಜಕೀಯವಾಗಿ ಸಕ್ರಿಯವಾಗಿದ್ದರು ಸಹ ಇವರಿಗೆ ಮತ್ತು ಇವರ ಕುಟುಂಬಕ್ಕೆ ಬಲಾಢ್ಯರಿಂದ ತಮ್ಮ ತುಂಡುಭೂಮಿಯನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಪರಿಣಾಮವಾಗಿ ತಾಯಿ ಮಾನಸಿಕ ಅಸ್ವಸ್ಥತೆಗೆ ಗುರಿಯಾದರೆ, ಒಬ್ಬ ತಮ್ಮ ಆತ್ಮಹತ್ಯೆಗೆ ಶರಣಾದ. ಅಲ್ಲದೇ ಸುತ್ತಮುತ್ತ ಇದ್ದ ಹಲವು ಕುಟುಂಬಗಳು ಸಹ ತಮ್ಮಂತೆ ಬಡತನ ಶೋಷಣೆಗಳಿಗೆ ಬಲಿಯಾಗುತ್ತಿದ್ದುದ್ದನ್ನು ಕಂಡ ವನಜಾಕ್ಷಿ ವ್ಯವಸ್ಥೆಯಲ್ಲಿ ನಂಬಿಕೆ ಕಳೆದುಕೊಂಡರು. ಸಶಸ್ತ್ರ ಹೋರಾಟವೇ ದಾರಿ ಎಂಬ ನಿರ್ಧಾರಕ್ಕೂ ಬಂದ ಇವರು, ಆ ಕಾಲದಲ್ಲಿ ನಡೆಯುತ್ತಿದ್ದ ಸಶಸ್ತ್ರ ಚಳುವಳಿಗೆ ಧುಮುಕಿದರು. 2000ನೇ ಇಸವಿಯಿಂದ ಮಾವೋವಾದಿ ಪಕ್ಷದ ಭಾಗವಾಗಿ ಕರ್ನಾಟಕ ಹಾಗೂ ಕೇರಳದಲ್ಲಿ ಸಂಚರಿಸುವ ದಳದ ಸದಸ್ಯೆಯಾಗಿದ್ದರು. ತನ್ನ ಹೋರಾಟವನ್ನು ಪ್ರಜಾಸತ್ತಾತ್ಮಕ ರೀತಿಯಲ್ಲಿಯೂ ಮುಂದುವರಿಸಬಹುದಾದ ಅವಕಾಶಗಳನ್ನು ಅರ್ಥ ಮಾಡಿಕೊಂಡು ಈಗ ಮುಖ್ಯವಾಹಿನಿಯ ಭಾಗವಾಗಲು ಸಿದ್ಧರಾಗಿದ್ದಾರೆ.

ಜಯಣ್ಣ ಅರೋಲಿ: ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಅರೋಲಿ ಗ್ರಾಮದ ಜಯಣ್ಣ ದ್ವಿತೀಯ ಬಿ.ಎ ವರೆಗೆ ವ್ಯಾಸಂಗ ಮಾಡಿರುವ ದಲಿತ ಯುವಕ. ಕಾಲೇಜಿನಲ್ಲಿರುವಾಗಲೇ ಆ ಭಾಗದಲ್ಲಿ ನಡೆಯುತ್ತಿದ್ದ ಮಾವೋವಾದಿ ಚಳುವಳಿಯ ಕಡೆ ಆಕರ್ಷಿತರಾದರು. ಆಸಕ್ತಿಯಿಂದ ಚಳುವಳಿಯನ್ನು ಗಮನಿಸುತ್ತಿದ್ದ ಅವರಿಗೆ ಭಾಸ್ಕರ್ ಅವರ ಎನ್‌ಕೌಂಟರ್ ಆಘಾತ ಉಂಟುಮಾಡಿತು. ಬಳಿಕ 2000ನೇ ಇಸವಿಯಲ್ಲಿ ತನ್ನ 24ನೇ ವಯಸ್ಸಿನಲ್ಲಿ ದಳದ ಭಾಗವಾದರು. ಅಂದಿನಿಂದ ಕೇರಳ, ಕರ್ನಾಟಕಗಳಲ್ಲಿ ಇವರ ಹೋರಾಟದ ಚಟುವಟಿಕೆಗಳು ನಡೆದಿದೆ. ಇದೀಗ ಜನರ ಜೊತೆ ಸೇರಿ ಜನಪರ ಹೋರಾಟಗಳನ್ನು ನಡೆಸಲು ಬಯಸಿದ್ದಾರೆ. ಸರ್ಕಾರ ಪ್ರಕಟಿಸಿರುವ ಪ್ಯಾಕೇಜ್ ಭಾಗವಾಗಿ ತಮಗೆ ಸಂದಾಯವಾಗಬಹುದಾದ ಹಣದ ಅರ್ಧ ಭಾಗವನ್ನು ತನ್ನ ಹಳ್ಳಿಯ ಶಾಲೆಯ ಅಭಿವೃದ್ಧಿಗಾಗಿ ನೀಡಬೇಕೆಂದು ತೀರ್ಮಾನಿಸಿದ್ದಾರೆ.

ವಸಂತ್ ಆರ್ಕಾಟ್: ತಮಿಳುನಾಡಿನ ವೆಲ್ಲೂರು ಮೂಲದ ವಸಂತ್ ಬಿ–ಟೆಕ್ ಪದವೀಧರ. ವೆಲ್ಲೂರು ಜಿಲ್ಲೆಯ ಆರ್ಕಾಟ್ ಅವರ ಊರು. ಸಮಾಜಮುಖಿ ಚಿಂತನೆಗಳಿಂದ ಪ್ರಭಾವಿತರಾದ ಇವರು ಹೋರಾಟಗಳನ್ನು ಗಮನಿಸುತ್ತಾ, ಬೆಳೆದವರು. 2010ರಲ್ಲಿ ಪದವಿ ಮುಗಿಸಿದ ತಕ್ಷಣವೇ ಸಶಸ್ತ್ರ ಹೋರಾಟದ ಭಾಗವಾಗಿ ಚಳವಳಿಗೆ ಧುಮುಕಿದರು. ಅಂದಿನಿಂದಲೂ ಕೇರಳ, ಕರ್ನಾಟಕಗಳಲ್ಲಿರುವ ದಳದ ಸದಸ್ಯರಾಗಿದ್ದರು. ಮಿತ ಭಾಷೆಯಾಗಿರುವ ವಸಂತ್ ತನ್ನ ಆದರ್ಶಗಳನ್ನು ಬಿಟ್ಟುಕೊಡದೇ ಹೋರಾಟದ ಮಾರ್ಗವನ್ನು ಬದಲಿಸಿ ಮುಖ್ಯವಾಹಿನಿ ಸೇರಬಯಸಿದ್ದಾರೆ.

ಜಿಶ: ಜಿಶ ತಂಡದಲ್ಲಿನ ಎಲ್ಲರಿಗಿಂತಲೂ ತುಂಬಾ ಚಿಕ್ಕವರು. ಕೇರಳದ ಜಿಶ ವಯನಾಡ್ ಜಿಲ್ಲೆಯ ಮಕ್ಕಿಮಲದ ಆದಿವಾಸಿ ಮಹಿಳೆ. 8ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿದ್ದ ಈಕೆ 2018ರಲ್ಲಿ ಕೇರಳದಲ್ಲಿ ಸಶಸ್ತ್ರ ಹೋರಾಟದ ಭಾಗವಾಗಿದ್ದು, 2023ರಲ್ಲಿ ತಂಡದ ಇತರೆ ಸದಸ್ಯರೊಂದಿಗೆ ಕೇರಳದಿಂದ ಕರ್ನಾಟಕಕ್ಕೆ ಬಂದರು.

ಕರ್ನಾಟಕ ನಕ್ಸಲ್ ಮುಕ್ತ ರಾಜ್ಯ

ಮುಂದಿನ ದಿನಗಳಲ್ಲಿ ಇವರೆಲ್ಲರೂ ಜವಾಬ್ದಾರಿಯುತ ನಾಗರಿಕರಾಗಿ ತಮ್ಮ ಬದುಕನ್ನು ಕಳೆಯಲಿದ್ದಾರೆ ಎಂಬ ನಂಬಿಕೆ ನನಗಿದೆ. ಈ ಆರು ಮಂದಿ ನಕ್ಸಲೀಯರ ಶರಣಾಗತಿಯ ನಂತರ ಕರ್ನಾಟಕ ನಕ್ಸಲ್ ಮುಕ್ತ ರಾಜ್ಯವಾಗಿದೆ ಎಂಬ ವಿಶ್ವಾಸ ನನಗಿದೆ. ನಕ್ಸಲರನ್ನು ಮುಖ್ಯವಾಹಿನಿಗೆ ಕರೆತರಲು ಪ್ರಯತ್ನಿಸಿದ ಪುನರ್ವಸತಿ ಸಮಿತಿ ಸದಸ್ಯರು ಮತ್ತಿತರ ಸಾಮಾಜಿಕ ಕಾರ್ಯಕರ್ತರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಯಾಕೆ ಬೆಚ್ಚಿ ಬಿದ್ದಿಲ್ಲ?: ರಾಜ್ಯದಲ್ಲಿ ಆರು ಮಂದಿ ನಕ್ಸಲೀಯರು ಶರಣಾಗುತ್ತಿರುವಾಗ ಬೆಚ್ಚಿಬಿದ್ದಿರುವ ಬಿಜೆಪಿ ಶಾಸಕ ಸುನೀಲ್‌ಕುಮಾರ್ ಅವರನ್ನು, ಕಳೆದ ತಿಂಗಳು ಛತ್ತೀಸ್‌ಘಢದಲ್ಲಿ ಶರಣಾದ 30 ನಕ್ಸಲರನ್ನು ಕೇಂದ್ರ ಗೃಹಸಚಿವ ಅಮಿತ್ ಶಹಾ ಅವರೇ ಖುದ್ದಾಗಿ ಬರಮಾಡಿಕೊಂಡು ಆನಂದಬಾಷ್ಪ ಸುರಿಸಿದಾಗ ಯಾಕೆ ಬೆಚ್ಚಿ ಬಿದ್ದಿಲ್ಲ ಎಂದು ಕೇಳಬೇಕಾಗಿದೆ. ಶಾ ಅವರಿಗೆ ನಕ್ಸಲರ ಬಗ್ಗೆ ಯಾಕೆ ಇಷ್ಟೊಂದು ಪ್ರೀತಿ ಎಂದು ಕೇಳುವ ದಮ್ಮು ಸುನೀಲ್ ಕುಮಾರ್ ಅವರಿಗೆ ಇದೆಯೇ. ಕಳೆದ ವರ್ಷ ಮಹಾರಾಷ್ಟ್ರದಲ್ಲಿ ಶರಣಾದ ನಕ್ಸಲ್ ದಂಪತಿಗೆ ಅಲ್ಲಿನ ಬಿಜೆಪಿ ಸರ್ಕಾರದ ಉಪಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು 41 ಲಕ್ಷ ರೂ. ಗಳ ನೆರವು ನೀಡಿರುವುದು ಶಾಸಕ ಸುನೀಲ್‌ಕುಮಾರ್ ಗೊತ್ತಿರಲ್ಲಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ರಾಜ್ಯಪಾಲರೇ ಸುಪ್ರಿಂ

ಉಪಕುಲಪತಿಗಳ ನೇಮಕಾತಿಯ ಅರ್ಹತೆಗೆ ಸಂಬಂಧಿಸಿದಂತೆಯೂ ಕೆಲವು ಪ್ರಮುಖ ಬದಲಾವಣೆಗಳನ್ನು ಮಾಡಲಾಗಿದೆ. ಹೊಸ ನಿಯಮಗಳ ಪ್ರಕಾರ ಉಪಕುಲಪತಿಗಳನ್ನು ಕೇವಲ ಅಕಾಡೆಮಿಕ್ ವಲಯದಿಂದ ಮಾತ್ರ ನೇಮಿಸಿಕೊಳ್ಳದೆ, ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರದ ಉದ್ಯಮಿಗಳು, ಸಾರ್ವಜನಿಕ ಆಡಳಿತದ ನೀತಿ ನಿರೂಪಕರು ಸೇರಿದಂತೆ ಬೇರೆ ಕ್ಷೇತ್ರದಲ್ಲಿರುವ ತಜ್ಞರನ್ನು ನೇಮಕಮಾಡಿಕೊಳ್ಳಬಹುದಾಗಿದೆ. ಇದು ಕನ್ನಡಿಗರಿಗೆ ಬಗೆಯುವ ದ್ರೋಹವಾಗಿದೆ. ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ನಂತರ ರಾಜ್ಯದ ವಿಶ್ವವಿದ್ಯಾಲಯಗಳ ಉಪಕುಲಪತಿಗಳ ನೇಮಕಾತಿಯಲ್ಲಿ ರಾಜ್ಯಪಾಲರು ಅನಗತ್ಯವಾಗಿ ಮೂಗು ತೂರಿಸುತ್ತಾ ಬಂದಿದ್ದಾರೆ. ಎಷ್ಟೋ ಸಂದರ್ಭಗಳಲ್ಲಿ ರಾಜ್ಯ ಸರ್ಕಾರದ ಶಿಫಾರಸನ್ನು ನಿರ್ಲಕ್ಷಿಸಿ ತಮ್ಮ ಆಯ್ಕೆಯನ್ನು ನಮ್ಮ ಮೇಲೆ ಹೇರುತ್ತಿದ್ದಾರೆ. ಶಿಕ್ಷಣ ಕ್ಷೇತ್ರದ ನಿರ್ವಹಣೆ ರಾಜ್ಯ ಸರ್ಕಾರದ ಪರಮಾಧಿಕಾರವಾಗಿದ್ದು ಇದರಲ್ಲಿ ಅನಗತ್ಯವಾದ ಮಧ್ಯಪ್ರವೇಶದಿಂದಾಗಿ ಕೇಂದ್ರ ಮತ್ತು ರಾಜ್ಯಗಳ ನಡುವೆ ಘರ್ಷಣೆ ಏರ್ಪಡುವ ಸಾಧ್ಯತೆ ಇದೆ.

ಒಕ್ಕೂಟ ವ್ಯವಸ್ಥೆಯನ್ನೇ ಬುಡಮೇಲು ಮಾಡುವಂತಹ ಇಂತಹ ನಡವಳಿಕೆಗಳನ್ನು ರಾಜ್ಯ ಸರ್ಕಾರ ಸಹಿಸುವುದಿಲ್ಲ. ಬಿಜೆಪಿಯೇತರ ಸರ್ಕಾರವಿರುವ ರಾಜ್ಯಗಳ ಜೊತೆಯಲ್ಲಿ ಈ ಬಗ್ಗೆ ಚರ್ಚಿಸಿ ಮುಂದಿನ ಹೆಜ್ಜೆಯ ಬಗ್ಗೆ ತೀರ್ಮಾನ ಮಾಡಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ.

7 ಮಂದಿ ದುರ್ಮರಣ

ನೂಕುನುಗ್ಗಲು ಉಂಟಾಗಿದೆ. ಘಟನೆಯಲ್ಲಿ ಹಲವರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಚಿಕಿತ್ಸೆಗಾಗಿ ರುಯಾ ಆಸ್ಪತ್ರೆಗೆ ಕರೆದೊಯ್ಯಲಾಗಿದೆ.

ಜ.10 ರಂದು ವೈಕುಂಠ ಏಕಾದಶಿಯ ಹಿನ್ನಲೆಯಲ್ಲಿ ತಿರುಪತಿಯ ಕೌಂಟರ್‌ಗಳಲ್ಲಿ ಇಂದು ಟಿಕೆಟ್ ವಿತರಣೆ ಮಾಡಲಾಗುತ್ತಿತ್ತು. ಈ ವೇಳೆ ಸಾವಿರಾರು ಮಂದಿ ಏಕಕಾಲಕ್ಕೆ ಕೌಂಟರ್ ಬಳಿ ನುಗ್ಗಿದಾಗ ಕಾಲ್ತುಳಿತ ಸಂಭವಿಸಿದೆ. ಇದರ ವಿಡಿಯೋಗಳು ಕೂಡ ಭಯಾನಕವಾಗಿದ್ದು, ನೆಲದಲ್ಲಿ ಬಿದ್ದ ವ್ಯಕ್ತಿಗಳನ್ನು ಬದುಕಿಸಲು ಪೊಲೀಸರು ಹರಸಾಹಸ ಪಡುತ್ತಿರುವ ವಿಡಿಯೋಗಳು ಕೂಡ ದಾಖಲಾಗಿವೆ. ಸುಮಾರು 25 ಮಂದಿ ಗಾಯಗೊಂಡಿದ್ದಾರೆ ಎನ್ನಲಾಗಿದೆ. ಜನವರಿ 10, 11, 12ರ ವೈಕುಂಠ ದ್ವಾರ ದರ್ಶನದ ಟಿಕೆಟ್‌ಗಳನ್ನು ಮಾರಾಟ ಮಾಡಲಾಗುವುದು. ಅದಕ್ಕೆ ಗುರುವಾರ ಮುಂಜಾನೆ 5 ಗಂಟೆಯಿಂದ ಟೋಕನ್ ವಿತರಣೆ ಮಾಡಲಾಗುವುದು ಎಂದು ಟಿಟಿಡಿ ತಿಳಿಸಿತ್ತು. 1 ಲಕ್ಷ 20 ಸಾವಿರ ಸೇವಾ ದರ್ಶನ ಟಿಕೆಟ್‌ಗಳು ಇರುವುದಾಗಿ ಮಾಹಿತಿ ನೀಡಿತ್ತು. ಪ್ರತಿದಿನಕ್ಕೆ 40 ಸಾವಿರ ಟಿಕೆಟ್‌ನಂತೆ ನೀಡುವುದಾಗಿ ಟಿಟಿಡಿ ನಿರ್ಧಾರ ಮಾಡಿತ್ತು. ಆದರೆ ಗುರುವಾರ ಮುಂಜಾನೆಯ ಟೋಕನ್‌ಗಾಗಿ ಇಂದಿನಿಂದಲೇ (ಬುಧವಾರ) ಸಾವಿರಾರು ಭಕ್ತರು ಜಮಾಯಿಸಿದ್ದರು.

ರಾಜ್ಯ ಮಟ್ಟದ ಕವಿಗೋಷ್ಠಿ

ಮೈಸೂರು,ಜ.8–ಕರುನಾಡ ಸಿರಿ ಸಂಪದ ಸಾಹಿತ್ಯ ಸಾಂಸ್ಕೃತಿಕ ಟ್ರಸ್ಟ್ ರಾಜ್ಯ ಘಟಕ ಮಂಡ್ಯ ವತಿಯಿಂದ ವರ್ಷದ ಕವಿ ಕಾವ್ಯ ಸಂಭ್ರಮಾಚರಣೆ ಪ್ರಯುಕ್ತ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ 10 ಮಂದಿ ಸಾಧಕರಿಗೆ ಗೌರವ ಪುರಸ್ಕಾರ ಹಾಗೂ ರಾಜ್ಯ ಮಟ್ಟದ ಕವಿಗೋಷ್ಠಿಯನ್ನು ಜನವರಿ–2025 ಮಾಹೆಯಲ್ಲಿ ಏರ್ಪಡಿಸಲಾಗಿದೆ. ಮೊದಲು ಹೆಸರು ನೋಂದಾಯಿಸಿಕೊಂಡ 30 ಕವಿಗಳಿಗೆ ಕವನ ವಾಚನಕ್ಕೆ ವೇದಿಕೆ ಒದಗಿಸಿಕೊಡಲಾಗುವುದು. ಹೆಚ್ಚಿನ ಮಾಹಿತಿಗೆ 8073782564 ಸಂಪರ್ಕಿಸಬಹುದು.

ಕಾಂಗ್ರೆಸ್ ಮನೆಯಲ್ಲಿ ಕಲಹ

ಸಂದೇಶ ಹೋಗುತ್ತದೆ ಎಂಬ ಉದ್ದೇಶದಿಂದ ಮುಂದೂಡುವಂತೆ ಮಾಡಿದ ಮನವಿಗೆ ಗೃಹ ಸಚಿವರು ಸ್ಪಂದಿಸಿದ್ದಾರೆ ಎಂದರು.

ನಮ್ಮ ಸಭೆಗಳನ್ನು ಸಹಿಸುವುದಿಲ್ಲ ಎನ್ನುವವರಿಗೆ ತಕ್ಕ ಉತ್ತರ ಕೊಡುವ ಶಕ್ತಿ ನಮಗಿದೆ: ಎಸ್‌ಸಿ, ಎಸ್‌ಟಿ ಸಮಾವೇಶ ಕುರಿತು ಚರ್ಚೆ ಮಾಡುವ ಸಭೆಗಳನ್ನು ಸಹಿಸುವುದಿಲ್ಲ ಎನ್ನುವವರಿಗೆ ತಕ್ಕ ಉತ್ತರ ಕೊಡುವ ಶಕ್ತಿ ನಮಗಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದ್ದಾರೆ.

ವಿಧಾನಸಭೆ ಚುನಾವಣೆಗೂ ಮೊದಲು ಚಿತ್ರದುರ್ಗದಲ್ಲಿ ಎಸ್‌ಸಿ, ಎಸ್‌ಟಿ ಸಮಾವೇಶ ಮಾಡಲಾಗಿತ್ತು. ಸರ್ಕಾರ ಅಧಿಕಾರಕ್ಕೆ ಬಂದರೆ ಅನೇಕ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಹೇಳಿಕೊಂಡಿದ್ದೆವು. ಅದರಂತೆ ಕಾಂಗ್ರೆಸ್ ಅಧಿಕಾರಕ್ಕೆ ಬಂತು, ಅನೇಕ ಭರವಸೆಗಳನ್ನು ಸರ್ಕಾರ ಈಡೇರಿಸಿದೆ.

ಕೇಂದ್ರ ಸರ್ಕಾರದಿಂದ ಪೋಸ್ಟ್ ಮ್ಯಾಟ್ರಿಕ್ ಸ್ಕಾಲರ್‌ಶಿಪ್, ಎಸ್‌ಸಿಪಿ/ಟಿಎಸ್‌ಪಿ ಅನುದಾನದ ಪಾಲು ರಾಜ್ಯಕ್ಕೆ ಬರುತ್ತಿಲ್ಲ, ಎಲ್ಲವನ್ನು ಚರ್ಚೆ ಮಾಡಬೇಕಿದೆ, ಒಟ್ಟಾಗಿ ಸಮಸ್ಯೆಗಳ ಪರಿಹಾರಕ್ಕೆ ಸಭೆ ತೀರ್ಮಾನಿಸಿತ್ತು.

ಈ ವಿಚಾರವನ್ನು ದೆಹಲಿ ನಾಯಕರ ಗಮನಕ್ಕೆ ತಂದಿರಲಿಲ್ಲ, ನಮ್ಮದೇ ಆಂತರಿಕ ವಿಚಾರ ಆಗಿರುವುದರಿಂದ ಹೇಳುವ ಅವಶ್ಯಕತೆ ಇಲ್ಲ ಎಂಬ ಕಾರಣಕ್ಕೆ ತಿಳಿಸಿರಲಿಲ್ಲ. ಸುರ್ಜೆವಾಲಾ, ನನಗೆ ಕರೆ ಮಾಡಿ ಸಮಾವೇಶದಲ್ಲಿ ತಾವೂ ಭಾಗವಹಿಸಬೇಕು ಎಂದಿದ್ದರು. ಅದಕ್ಕೆ ರಾಜಕೀಯ ಪ್ರೇರಿತ ಅಥವಾ ರಾಜಕೀಯಕ್ಕಾಗಿ ಮಾಡುತ್ತಿರುವ ಸಭೆ ಅಲ್ಲ, ನೀವೂ ಭಾಗವಹಿಸಬಹುದು ಎಂದು ಆಹ್ವಾನಿಸಿದೆ. ಈಗ ಆಗುವುದಿಲ್ಲ, ಮುಂದೆ ಸಮಯ ನೀಡುತ್ತೇನೆ. ಆಗ ಸಭೆ ಮಾಡಿ ಭಾಗವಹಿಸುತ್ತೇನೆ ಎಂಬುದಾಗಿ ಸುರ್ಜೆವಾಲಾ ತಿಳಿಸಿದರು. ಪಕ್ಷದ ಪ್ರಧಾನ ಕಾರ್ಯದರ್ಶಿ ಹೇಳಿದ್ದರಿಂದ ಸಭೆ ಮುಂದೂಡಿದ್ದೇವೆಯೇ ಹೊರತು ರದ್ದು ಮಾಡಿಲ್ಲ. ಅವರ ಸಮಯ ತೆಗೆದುಕೊಂಡು ಚರ್ಚೆ ಮಾಡುತ್ತೇವೆ. ಡಿನ್ನರ್ ಬಗ್ಗೆ ಏನೇನೋ ವ್ಯಾಖ್ಯಾನ ಮಾಡಲಾಗುತ್ತಿದೆ, ಡಿನ್ನರ್ ಅಂದರೆ ಊಟ. 7 ಗಂಟೆಗೆ ಸಭೆ ಕರೆಯಲಾಗಿತ್ತು. ಚರ್ಚೆ ಎರಡು ಅಥವಾ ಮೂರು ತಾಸುಗಳವರೆಗೂ ನಡೆಯಬಹುದಾದ ಹಿನ್ನೆಲೆಯಲ್ಲಿ ಊಟದ ಸಮಯ ಆಗುವುದರಿಂದ, ಮನೆಗೆ ಹೋಗಿ ಊಟ ಮಾಡಿ ಎನ್ನುವ ಬದಲು, ಊಟಕ್ಕೆ ಏರ್ಪಾಟು ಮಾಡಲಾಗಿತ್ತು.

ಸಭೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಆಹ್ವಾನಿಸಬೇಕು ಎನ್ನುವುದರ ಬಗ್ಗೆಯೂ ಚರ್ಚಿಸಲಾಗಿತ್ತು, ಮುಚ್ಚಿಟ್ಟುಕೊಂಡು ರಾಜಕಾರಣ ಮಾಡುವಂತದ್ದು ಏನಿದೆ. ಯಾವ ವಿಷಯದ ಬಗ್ಗೆ ಚರ್ಚೆ ಮಾಡಬೇಕೋ ಬಹಿರಂಗ ಚರ್ಚೆ ಮಾಡುತ್ತೇವೆ. ಯಾರಿಗೂ ಗೊತ್ತಾಗದಂತೆ ನಾಲ್ಕು ಗೋಡೆ ಮಧ್ಯೆ ಚರ್ಚಿಸುವಂತಹ ಅನಿವಾರ್ಯತೆ ಇಲ್ಲ.

ಅನೇಕ ಜ್ವಲಂತ ಸಮಸ್ಯೆಗಳಿವೆ, ಅಟ್ರಾಸಿಟಿ ಕೇಸ್ ದಾಖಲಾಗುತ್ತಿವೆ, ದಲಿತ ಸಮುದಾಯದ ತೊಂದರೆಗಳ ಬಗ್ಗೆ ಚರ್ಚೆ ಮಾಡಬೇಕಲ್ಲವೇ. ಸಮಾವೇಶದಲ್ಲಿ ಹೈಕಮಾಂಡ್‌ನವರು ಭಾಗವಹಿಸುತ್ತೇವೆ ಎಂದಾಗ ಒಳ್ಳೆಯದಲ್ಲವೇ, ಅನೇಕ ತೀರ್ಮಾನಗಳು ಅಲ್ಲೇ ಆಗುತ್ತವೆ. ಸಮಾವೇಶ ನಡೆಸುವ ಕುರಿತು ಮುಂದಿನ ದಿನಗಳಲ್ಲಿ ನೋಡೋಣ, ಸ್ವಲ್ಪ ದಿನ ಮುಂದಕ್ಕೆ ಹಾಕುವುದಾಗಿ ತಿಳಿಸಿದ್ದೇವೆ, ಮತ್ತೆ ಏರ್ಪಡಿಸುತ್ತೇವೆ, ಆಗ ಗೊತ್ತಾಗುತ್ತದೆ ಎಂದರು.

ಕಾಲ ಸನ್ನಿಹಿತವಾಗಿದೆ!

ಈ ತಿಂಗಳಲ್ಲಿ ಸರಿ ಹೋಗಲಿದೆ, ಎಲ್ಲವೂ ಒಳ್ಳೆಯದಾಗಿ ಬಗೆಹರಿಯುವ ವಾತಾವರಣ ನಿರ್ಮಾಣವಾಗಲಿದೆ ಎಂದರು. ಕಾಂಗ್ರೆಸ್ ಸರ್ಕಾರ ಎಲ್ಲದರಲ್ಲೂ ಕಮಿಷನ್ ಭ್ರಷ್ಟಾಚಾರ ನಡೆಸುತ್ತಿದೆ. ಅಬಕಾರಿ, ಪಿಡಬ್ಲ್ಯುಡಿ, ನೀರಾವರಿ ಇಲಾಖೆ ಗುತ್ತಿಗೆದಾರರು ಸಂಕಷ್ಟ ಅನುಭವಿಸುತ್ತಿದ್ದಾರೆ, ರಾಜ್ಯದ ಜನತೆ ರೋಸಿ ಹೋಗಿದ್ದಾರೆ.

ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಒಂದು ನಿವೇಶನ ಖರೀದಿಸಲಾಗದ ವಾತಾವರಣ ನಿರ್ಮಾಣವಾಗಿದೆ.

ಪರಿಶಿಷ್ಟ ಜಾತಿ, ಪಂಗಡ ಸಮುದಾಯದವರ ಕೊಳವೆಬಾವಿಗಳಿಗೂ ಕಮಿಷನ್ ಕೇಳುತ್ತಿದ್ದಾರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಭ್ರಷ್ಟಾಚಾರ ನಿರಾಕರಿಸಬಹುದು, ಆಡಳಿತದ ಮೇಲೆ ಹಿಡಿತ ತಪ್ಪಿರಬಹುದು ಅಥವಾ ಅವರೇ ಭಾಗಿಯಾಗಿರಬಹುದು. ಆ ಬಗ್ಗೆ ಪ್ರತಿಕ್ರಿಯಿಸಿದರೆ ಅಧಿಕಾರಕ್ಕೆ ಧಕ್ಕೆ ಬರುತ್ತದೆ ಎನ್ನುವ ಭಾವನೆ ಮೂಡಿದೆ.

ಸರ್ಕಾರದ ಒಂದೊಂದು ಇಲಾಖೆಯಲ್ಲೂ ಒಂದೊಂದು ರೀತಿಯ ಪರ್ಸೆಂಟೇಜ್ ಕಮೀಷನ್ ಇದೆ. ಇಷ್ಟೇ ಇದೆ ಅಂತ ಹೇಳಲು ಆಗುವುದಿಲ್ಲ. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರೂ ರಾಜ್ಯದಲ್ಲಿ ಮಿತಿಮೀರಿದ ಭ್ರಷ್ಟಾಚಾರ ಕುರಿತು ಪ್ರತಿಕ್ರಿಯಿಸಿದ್ದಾರೆ ಎಂದರು.

ಮೈಸೂರು ಮಿತ್ರ

ನಾಳೆ ಕರ್ನಾಟಕ ಸಮತಾ ಸೈನಿಕ ದಳದ ಶತಮಾನೋತ್ಸವ


ಪುರುಷೋತ್ತಮ್

ಮೈಸೂರು,ಜ.8(ಎಂಟಿವೈ)– ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಜ.10ರಂದು ಬೆಳಗ್ಗೆ 10.30ಕ್ಕೆ ಕರ್ನಾಟಕ ಸಮತಾ ಸೈನಿಕ ದಳದ ಶತಮಾನೋತ್ಸವ ಸಮಾರಂಭ ಆಯೋಜಿಸಲಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ದಮನಿತರ ಸ್ವಾಭಿಮಾನ ಮತ್ತು ಆತ್ಮಸ್ಥೈರ್ಯ ರಕ್ಷಣೆಗಾಗಿ 1924ರಲ್ಲಿ ಸ್ಥಾಪಿಸಿದ ಸಮತಾ ಸೈನಿಕ ದಳಕ್ಕೆ ಕಳೆದ ವರ್ಷ ನೂರು ತುಂಬಿದೆ. ಶತಮಾನೋತ್ಸವ ಸಮಾರಂಭವನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದ್ದು, ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳಲಾಗಿದೆ. ಕಾರ್ಯಕ್ರಮದ ಅಂಗವಾಗಿ ಜ.10ರಂದು ಬೆಳಗ್ಗೆ 9ಕ್ಕೆ ಅರಮನೆ ಆವರಣದಿಂದ ಅಂಬೇಡ್ಕರ್ ಚಿತಾಭಸ್ಮದ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಇದೇ ಮೊದಲ ಬಾರಿ ಬಾಬಾ ಸಾಹೇಬರ ಚಿತಾಭಸ್ಮವು ಮೈಸೂರಿಗೆ ಆಗಮಿಸುತ್ತಿದ್ದು, ಮೆರವಣಿಗೆಯಲ್ಲಿ ಬುದ್ಧ, ಅಶೋಕ, ಫುಲೆ ದಂಪತಿಗಳು, ಸಾಹು ಮಹಾರಾಜ, ನಾಲ್ವಡಿ ಕೃಷ್ಣರಾಜ ಒಡೆಯರ್, ನಾರಾಯಣ ಗುರು, ಪೆರಿಯಾರ್, ರಮಾಬಾಯಿ ಅಂಬೇಡ್ಕರ್ ಹಾಗೂ ಕಾನ್ಶಿರಾಮ್ ಸೇರಿದಂತೆ ಇನ್ನಿತರ ಮಹಾನ್ ನಾಯಕರ ಸ್ತಬ್ಧಚಿತ್ರಗಳು ಸಾಗಲಿವೆ ಎಂದು ತಿಳಿಸಿದರು.

ಬಳಿಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಸಭಾ ಕಾರ್ಯಕ್ರಮ ನಡೆಯಲಿದ್ದು, ಬೌದ್ಧಧಮ್ಮ ಗುರುಗಳು, ವಿವಿಧ ಕ್ಷೇತ್ರದ ಸಂಪನ್ಮೂಲ ವ್ಯಕ್ತಿಗಳು, ಚಿಂತಕರು ವಿಚಾರವಾದಿಗಳು ಹಾಗೂ ಅಂಬೇಡ್ಕರ್ ಮೊಮ್ಮಗ ರಾಜರತ್ನ ಅಂಬೇಡ್ಕರ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೈನಿಕರ ದಳದ ಜಿಲ್ಲಾಧ್ಯಕ್ಷ ಗೋವಿಂದರಾಜು, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಸಾಲಿಗ್ರಾಮ ಎಸ್.ಆರ್.ಭಾಗ್ಯ, ಜಿಲ್ಲಾ ಕಾರ್ಯದರ್ಶಿ ಮಾರ್ಬಳ್ಳಿ ಸಿ.ಮರಿಸ್ವಾಮಿ, ಕಾರ್ಯಾಧ್ಯಕ್ಷ ಶಿವಪುರ ಆರ್.ಮಂಜುನಾಥ್, ಜಿಲ್ಲಾ ಸಹ ಕಾರ್ಯದರ್ಶಿ ಮುರುಡಗಳ್ಳಿ ಮಹೇಶ್, ಖಜಾಂಚಿ ಈ.ಈರಭದ್ರ ಇದ್ದರು.

ರಾಜ್ಯದ ಹೆದ್ದಾರಿ ಯೋಜನೆ ಅಭಿವೃದ್ಧಿ ಸಂಬಂಧ ಸಚಿವ ನಿತಿನ್ ಗಡ್ಕರಿಗೆ ಕುಮಾರಸ್ವಾಮಿ ಮನವಿ

ಮನವಿಗೆ ಸಕಾರಾತ್ಮಕ ಪ್ರತಿಕ್ರಿಯೆ


ಕೇಂದ್ರ ಹೆದ್ದಾರಿ ಮತ್ತು ಭೂ ಸಾರಿಗೆ ಖಾತೆ ಸಚಿವ ನಿತಿನ್ ಗಡ್ಕರಿ ಅವರನ್ನು ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಹೆಚ್.ಡಿ.ಕುಮಾರಸ್ವಾಮಿ ನವದೆಹಲಿಯಲ್ಲಿ ಬುಧವಾರ ಭೇಟಿಯಾಗಿ, ಅಭಿನಂದಿಸಿದರು.

ಬೆಂಗಳೂರು, ಜ. 8(ಕೆಎಂಶಿ)–ಕರ್ನಾಟಕದ ವಿವಿಧ ಹೆದ್ದಾರಿ ಯೋಜನೆಗಳ ಕುರಿತು ಕೇಂದ್ರ ಹೆದ್ದಾರಿ ಮತ್ತು ಭೂ ಸಾರಿಗೆ ಖಾತೆ ಸಚಿವ ನಿತಿನ್ ಗಡ್ಕರಿ ಅವರನ್ನು ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಹೆಚ್.ಡಿ.ಕುಮಾರಸ್ವಾಮಿ ಭೇಟಿಯಾಗಿ ಚರ್ಚೆ ನಡೆಸಿ, ಆದಷ್ಟು ಶೀಘ್ರ ಕ್ರಮ ಕೈಗೊಳ್ಳುವಂತೆ ಕೋರಿದರು.

ನವದೆಹಲಿಯಲ್ಲಿ ನಿತಿನ್ ಗಡ್ಕರಿ ಅವರ ನಿವಾಸದಲ್ಲಿ ಭೇಟಿಯಾಗಿ, ರಾಜ್ಯದ ಹಲವು ಹೆದ್ದಾರಿ ಯೋಜನೆಗಳ ಅಭಿವೃದ್ಧಿ ಆಗಬೇಕಿದೆ ಎಂಬ ಮನವಿಗೆ ಸ್ಪಂದಿಸಿದ ಗಡ್ಕರಿ ಅವರು, ಕೆಲವು ಯೋಜನೆಗಳ ಬಗ್ಗೆ ತಕ್ಷಣವೇ ಖುದ್ದಾಗಿ ಗಮನಹರಿಸುವ ಭರವಸೆ ನೀಡಿದ್ದಾರೆ.

ಮಂಡ್ಯ, ಕೋಲಾರ, ಚಿಕ್ಕಬಳ್ಳಾಪುರ, ಚಾಮರಾಜನಗರ, ಮೈಸೂರು ಮುಂತಾದ ಜಿಲ್ಲೆಗಳ ಹೆದ್ದಾರಿಗಳ ಅಭಿವೃದ್ಧಿ ಬಗ್ಗೆ ಸಮಾಲೋಚನೆ ನಡೆಸಿದರು.


ಮನವಿಗೆ ಅತ್ಯಂತ ಸಕಾರಾತ್ಮಕವಾಗಿ ಸ್ಪಂದಿಸಿದ ಕೇಂದ್ರ ಸಾರಿಗೆ ಸಚಿವರು, ಎಲ್ಲಾ ಯೋಜನೆಗಳ ಬಗ್ಗೆ ಖುದ್ದು ಗಮನಹರಿಸುವುದಾಗಿ ಭರವಸೆ ನೀಡಿದರು ಎಂದು ತಿಳಿಸಿದರು.

ಮಂಡ್ಯ ಹೆದ್ದಾರಿಯ ಬೈಪಾಸ್ ರಸ್ತೆ ಅಗಲೀಕರಣ, ವೈಟ್ ಟ್ಯಾಪಿಂಗ್ ಹಾಗೂ ರಾಷ್ಟ್ರೀಯ ಹೆದ್ದಾರಿ 275ರಲ್ಲಿರುವ ಮಂಡ್ಯ ನಗರದ ಎಲ್ಲಾ ಜಂಕ್ಷನ್, ಪಾದಚಾರಿ ಮಾರ್ಗಗಳನ್ನೂ ಅಭಿವೃದ್ಧಿ ಮಾಡಬೇಕು ಎಂದು ಕೋರಿದರು. ಮಂಡ್ಯ ಹೆದ್ದಾರಿ ಬೈಪಾಸ್ ರಸ್ತೆ ಸಂಪೂರ್ಣ ಹಾಳಾಗಿದ್ದು, ಹಳ್ಳದಿಣ್ಣೆ ಬಿದ್ದು ವಾಹನ ಸವಾರರಿಗೆ ಬಹಳಷ್ಟು ತೊಂದರೆ ಆಗಿದೆ, ರಾತ್ರಿ ಸಮಯದಲ್ಲಿ ರಸ್ತೆಯಲ್ಲಿ ಸಂಚಾರ ಅಪಾಯಕಾರಿಯಾಗಿದೆ ಎಂದು ಗಡ್ಕರಿ ಅವರಿಗೆ ಮನವರಿಕೆ ಮಾಡಿಕೊಟ್ಟರು.

ಜೇವರ್ಗಿ–ಚಾಮರಾಜನಗರ ರಾಷ್ಟ್ರೀಯ ಹೆದ್ದಾರಿಯಲ್ಲಿನ ಪಾಂಡವಪುರ ಪಟ್ಟಣ, ಕಿರಂಗೂರು ಬಳಿಯ ಹೆದ್ದಾರಿ ಅಭಿವೃದ್ಧಿ ಬಗ್ಗೆಯೂ ಚರ್ಚೆ ನಡೆಸಿದರು.

ಆಂಧ್ರಪ್ರದೇಶದ ಕುಪ್ಪಂ–ಬಂಗಾರಪೇಟೆ–ಕೋಲಾರ–ಚಿಂತಾಮಣಿ, ಚಿಂತಾಮಣಿಯ ಗಜಾನನ ಸರ್ಕಲ್–ಚೇಳೂರು, ರಾಷ್ಟ್ರೀಯ ಹೆದ್ದಾರಿ 75ರಿಂದ ಹೊಸಕೋಟೆ–ಹೆಚ್.ಕ್ರಾಸ್–ಚಿಂತಾಮಣಿ ನಡುವೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 69, ರಾಷ್ಟ್ರೀಯ ಹೆದ್ದಾರಿ 42ರಿಂದ ಹೊಸಕೋಟೆ–ಗೌನಿಪಲ್ಲಿ–ಶ್ರೀನಿವಾಸಪುರ ಮೂಲಕ ರಾಷ್ಟ್ರೀಯ ಹೆದ್ದಾರಿ 75ಕ್ಕೆ ಸಂಪರ್ಕ ಕಲ್ಪಿಸುವ ಹೆದ್ದಾರಿ ಯೋಜನೆಗಳ ಬಗ್ಗೆಯೂ ಕೇಂದ್ರ ಸಚಿವರ ಗಮನ ಸೆಳೆದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಜ.8– ರಾಜೀವ್‌ನಗರ ಫೀಡರ್‌ನ ವ್ಯಾಪ್ತಿಯಲ್ಲಿ ತುರ್ತು ನಿರ್ವಹಣಾ ಕಾಮಗಾರಿ ನಿಮಿತ್ತ ಜನವರಿ 9 ರಂದು ಬೆಳಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ಗೋಪಾಲಗೌಡ ವೃತ್ತದಿಂದ ಡಿ.ಎಫ್.ಆರ್.ಎಲ್ ಕಚೇರಿಯವರೆಗೆ, ಪೊಲೀಸ್ ಕ್ವಾಟರ್ಸ್, ರಿಂಗ್ ರಸ್ತೆ ವಾಟರ್ ಟ್ಯಾಂಕ್ ಹತ್ತಿರ, ಡಾಲರ್ಸ್ ಕಾಲೋನಿ, ಗಟನಂ ಚೌಟ್ರಿ, ಕ್ರಿಶ್ಚಿಯನ್ ಕಾಲೋನಿ, ನಾಗರಾಜಪ್ಪ ಎನ್‌ಕ್ಲೇವ್, ಬೈರುಲ್ಲಾ ಮಸೀದಿ, ಸೂರ್ಯ ಟೆಂಪಲ್ ಹತ್ತಿರ, ಅಲ್–ಬದರ್ ರಸ್ತೆ, ಶಾಂತಿ ನಗರ, ಖುಬಾ ಮಸೀದಿ ಹಿಂಭಾಗ, ಉದಯಗಿರಿ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೈಸೂರು ಬಂದ್ ಯಶಸ್ವಿ; ಸಂವಿಧಾನ ವಿರೋಧಿಗಳಿಗೆ ತಕ್ಕ ಸಂದೇಶ


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ದಲಿತ ಪ್ಯಾಂಥರ್ಸ್ ಅಧ್ಯಕ್ಷ ಯೋಗನರಸಿಂಹ ಮಾತನಾಡಿದರು.

ಮೈಸೂರು,ಜ.8(ಎಂಟಿವೈ)–ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ವಿರುದ್ಧ ಸಂಸತ್‌ನಲ್ಲಿ ಕೇಂದ್ರ ಸಚಿವ ಅಮಿತ್ ಶಾ ನೀಡಿದ ಅಸಂಬದ್ಧ ಹೇಳಿಕೆ ಖಂಡಿಸಿ ನಡೆಸಿದ 'ಮೈಸೂರು ಬಂದ್'ಗೆ ಸಾರ್ವಜನಿಕರು ಉತ್ತಮ ಸಹಕಾರ ನೀಡುವ ಮೂಲಕ ಸಂವಿಧಾನದ ವಿರೋಧಿಗಳಿಗೆ ತಕ್ಕ ಉತ್ತರ ನೀಡಿದ್ದಾರೆ ಎಂದು ಕರ್ನಾಟಕ ದಲಿತ ಪ್ಯಾಂಥರ್ಸ್ ಅಧ್ಯಕ್ಷ ಯೋಗನರಸಿಂಹ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸಚಿವ ಅಮಿತ್ ಶಾ ಹೇಳಿಕೆ ಖಂಡಿಸಿ ಕರೆಕೊಟ್ಟಿದ್ದ ಮೈಸೂರು ಬಂದ್‌ಗೆ ಕೇವಲ ದಲಿತ ಸಂಘಟನೆಗಳು ಮಾತ್ರವಲ್ಲದೆ, ಮುಸ್ಲಿಂ ಮತ್ತು ಕ್ರೈಸ್ತ ಸಂಸ್ಥೆಗಳು, ಕಾರ್ಮಿಕ ಸಂಘಟನೆಗಳು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬೆಂಬಲ ನೀಡಿವೆ. ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ನೇತೃತ್ವದಲ್ಲಿ ಗಾಂಧಿನಗರದ ಜನತೆ ಬಂದ್‌ನಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಅಮಿತ್ ಶಾ ಕ್ಷಮೆಯಾಚನೆ ಅಥವಾ ರಾಜೀನಾಮೆ ನೀಡದಿದ್ದರೆ ನಮ್ಮ ನಡೆ ದೆಹಲಿ ಕಡೆ ಅಭಿಯಾನ ಆರಂಭಿಸುವ ಉದ್ದೇಶವೂ ಇದೆ ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ದಲಿತ ಪ್ಯಾಂಥರ್ಸ್ ಕಾರ್ಯಾಧ್ಯಕ್ಷ ಎನ್.ಕಿರಣ್‌ಕುಮಾರ್, ಕರ್ನಾಟಕ ಭೀಮಸೇನೆಯ ಸಂಘಟನಾ ಕಾರ್ಯದರ್ಶಿ ಮಂಜುನಾಥ್, ದಲಿತ ಮಹಾಸಭಾ ಗಾಂಧಿನಗರ ಘಟಕದ ಅಧ್ಯಕ್ಷ ರಂಗಸ್ವಾಮಿ, ಬಿ.ಆರ್.ಅಂಬೇಡ್ಕರ್ ಕಲಾವಿದರ ಸಂಘದ ಅಧ್ಯಕ್ಷ ಸಂತೋಷ್‌ಕುಮಾರ್, ಮುಖಂಡ ಬಾಲಚಂದ್ರ ಇದ್ದರು.

ಎಂಎಸ್‌ಐಎಲ್‌ನಿಂದ ಆಕರ್ಷಕ ಪ್ರವಾಸ ಕಾರ್ಯಕ್ರಮ

● ಸೆಪ್ಟೆಂಬರ್‌ನಲ್ಲಿ ಆದಿಕೈಲಾಸ, ವಾರಣಾಸಿ ಪ್ರವಾಸ ● ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಮಾಹಿತಿ


ಎಂ.ಬಿ.ಪಾಟೀಲ್

ಬೆಂಗಳೂರು,ಜ.8(ಕೆಎಂಶಿ)–ಮಧ್ಯಮ, ಕೆಳಮಧ್ಯಮ ವರ್ಗ, ವಿದ್ಯಾರ್ಥಿಗಳು, ಹಿರಿಯ ನಾಗರಿಕರು ಮತ್ತು ಸರ್ಕಾರಿ ನೌಕರರನ್ನು ಗಮನದಲ್ಲಿಟ್ಟುಕೊಂಡು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ಸಂಸ್ಥೆ ಆಕರ್ಷಕ ಪ್ರವಾಸ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಇಂದಿಲ್ಲಿ ತಿಳಿಸಿದ್ದಾರೆ.

ಎಂಎಸ್‌ಐಎಲ್ ಡೈರಿ, ಕ್ಯಾಲೆಂಡರ್, ಬಾಂಡ್ ಜೆರಾಕ್ಸ್ ಪೇಪರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಸಂಸ್ಥೆಯು ಗುಣಮಟ್ಟ ಮತ್ತು ವಿಶ್ವಾಸಾರ್ಹತೆಗೆ ಹೆಸರಾಗಿದೆ. ಪ್ರವಾಸ ಕಾರ್ಯಕ್ರಮಗಳ ಮೂಲಕ ಜನರಿಗೆ ಮತ್ತಷ್ಟು ಹತ್ತಿರವಾಗುತ್ತಿದೆ. ಪ್ರವಾಸ ಕಾರ್ಯಕ್ರಮದಡಿ ಬರುವ ಸೆಪ್ಟೆಂಬರ್‌ನಲ್ಲಿ ಆದಿಕೈಲಾಸ ಮತ್ತು ವಾರಾಣಸಿ ಪ್ರವಾಸ ಆಯೋಜಿಸಲಾಗುವುದು. ಆಫ್–ಲೈನ್ ಪ್ರವಾಸಿಗರಿಗೆ ಆದ್ಯತೆ ಕೊಡಲಾಗುತ್ತದೆ ಎಂದರು.

ಪ್ರವಾಸ ಪ್ಯಾಕೇಜ್‌ಗಳಲ್ಲಿ ಸುರಕ್ಷತೆ, ಶುಚಿ–ರುಚಿ ಆಹಾರ, ಮನೆ ಬಾಗಿಲಿನಿಂದಲೇ ಕರೆದುಕೊಂಡು ಹೋಗುವ ಮತ್ತು ವಾಪಸ್ ಕರೆತರುವುದು, ಸಹಾಯಕರ ನೆರವು, ಮಾಸಿಕ ಕಂತುಗಳಲ್ಲಿ ಹಣ ಪಾವತಿ, ಲಕ್ಕಿ ಡ್ರಾ, ಕೈಗೆಟಕುವ ವೆಚ್ಚದಲ್ಲಿ ಉತ್ತರ ಭಾರತ ಪ್ರವಾಸ ಮುಂತಾದ ಸೌಲಭ್ಯ ಮತ್ತು ಆಕರ್ಷಣೆಗಳಿವೆ. ಗುಂಪು ಪ್ರವಾಸ ಬಯಸುವವರಿಗೆ ಪ್ರತಿ ಬ್ಯಾಚ್‌ನಲ್ಲಿ ಗರಿಷ್ಠ 100 ಮಂದಿಗೆ ಅವಕಾಶ ಇರಲಿದೆ, ಅಲ್ಲದೆ ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಸ್ಟಡಿ–ಕಂ–ಪ್ಲೆಷರ್ ಟೂರ್, ಇಕೋ ಟೂರಿಸಂ, ಕೋಸ್ಟಲ್ ಟೂರಿಸಂ ಪ್ಯಾಕೇಜ್‌ಗಳನ್ನು ರೂಪಿಸಲು ಎಂಎಸ್‌ಐಎಲ್ ಚಿಂತನೆ ನಡೆಸಿದೆ.

ಸಂಸ್ಥೆಯ ಸದ್ಯದ ಪ್ಯಾಕೇಜ್‌ನಲ್ಲಿ ಕೇವಲ 20,000 ರೂ. ವೆಚ್ಚದಲ್ಲಿ 15ರಿಂದ 18 ದಿನಗಳ ಉತ್ತರ ಭಾರತ ಪ್ರವಾಸ ಮಾಡಬಹುದಾಗಿದೆ. ಸರ್ಕಾರಿ ಉದ್ಯೋಗಿಗಳನ್ನು ಗಮನದಲ್ಲಿಟ್ಟುಕೊಂಡು ಪ್ಯಾಕೇಜ್‌ನಲ್ಲಿ ಶೇ.50ರಷ್ಟು ಪಾವತಿಸಿ ಪ್ರವಾಸ ಕೈಗೊಳ್ಳಬಹುದು, ಪ್ರವಾಸ ನಂತರ ಉಳಿದ ಶೇ.50ರಷ್ಟು ಹಣ ಮಾಸಿಕ ಕಂತುಗಳಲ್ಲಿ ಕಟ್ಟಬಹುದು. ಲಕ್ಕಿ ಡ್ರಾ ವಿಜೇತರು ಹಣ ಪಾವತಿಸಬೇಕಿಲ್ಲ, ಎಲ್ಲ ಪ್ಯಾಕೇಜ್‌ಗಳಲ್ಲೂ ಎಂಎಸ್‌ಐಎಲ್‌ನ ಟೂರ್ ಮ್ಯಾನೇಜರ್ ಅಥವಾ ಸಹಾಯಕರೊಬ್ಬರು ಇರಲಿದ್ದು, ಪ್ರವಾಸಿಗರ ಅಗತ್ಯಗಳನ್ನು ಆಲಿಸಿ, ನೆರವು ನೀಡಲಿದ್ದಾರೆ. ಆದಷ್ಟು ಕಡಿಮೆ ವೆಚ್ಚದಲ್ಲಿ ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆ ಸಾಧ್ಯವಾಗಬೇಕು ಎಂಬ ಆಶಯದೊಂದಿಗೆ ಎಂಎಸ್‌ಐಎಲ್ ಈ ಹೆಜ್ಜೆ ಇಟ್ಟಿದೆ, ಖಾಸಗಿ ಸಂಸ್ಥೆಗಳ ಪ್ರವಾಸೀ ಕಾರ್ಯಕ್ರಮ ದರಗಳಿಗೆ ಹೋಲಿಸಿದರೆ, ಸಂಸ್ಥೆಯ ದರ ತುಂಬಾ ಕಡಿಮೆ ಇದೆ, ಪ್ರತಿಯೊಂದು ಸೇವೆಯನ್ನೂ ಗುಣಮಟ್ಟದೊಂದಿಗೆ ಒದಗಿಸಲಾಗುವುದು ಎಂದು ಎಂ.ಬಿ.ಪಾಟೀಲ್ ತಿಳಿಸಿದರು.

ಎಂಎಸ್‌ಐಎಲ್ ಸಂಸ್ಥೆ ಟೂರ್ಸ್ ಅಂಡ್ ಟ್ರಾವೆಲ್ಸ್ ವಿಭಾಗವು ಕಾಶಿ, ಅಯೋಧ್ಯೆ, ಪುರಿ, ಆದಿಕೈಲಾಸ, ಜೊತೆಗೆ ದುಬೈ, ಸಿಂಗಪುರ್, ವಿಯಟ್ನಾಂ, ಶ್ರೀಲಂಕಾ, ನೇಪಾಳ, ಥಾಯ್ಲೆಂಡ್ ಮತ್ತು ಯೂರೋಪ್‌ನ ಹಲವು ದೇಶಗಳಿಗೂ ಟೂರ್ ಪ್ಯಾಕೇಜ್‌ಗಳನ್ನು ರೂಪಿಸಿದೆ, ಈ ಪ್ರವಾಸಗಳಿಗೆ ದಿನಾಂಕ ನಿಗದಿಯಾಗಿದ್ದು, ಸಾರ್ವಜನಿಕರು ಮಾಹಿತಿ ಪಡೆದುಕೊಳ್ಳಬಹುದು.

ಎಂಎಸ್‌ಐಎಲ್, ಮೈಸೂರು ಪೇಂಟ್ಸ್ ಮತ್ತು ವಾರ್ನಿಶ್, ಎನ್‌ಜಿಇಎಫ್ ಮುಂತಾದ ಸಂಸ್ಥೆಗಳನ್ನು ಲಾಭದಾಯಕವನ್ನಾಗಿ ಮಾಡಲಾಗುತ್ತಿದೆ ಎಂದರು.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ 223 ಕೋಟಿ ವೆಚ್ಚದ ಕಾಮಗಾರಿಗೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಅನುಮೋದನೆ

ಮಾಜಿ ಸಂಸದ ಪ್ರತಾಪ್ ಸಿಂಹ ಮಾಹಿತಿ


ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸುಮಾರು ರೂ. 223 ಕೋಟಿ ವೆಚ್ಚದ ಎರಡೂ ಕಾಮಗಾರಿಗಳಿಗೆ ನವದೆಹಲಿಯಲ್ಲಿ ಬುಧವಾರ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಂದ ಮಾಜಿ ಸಂಸದ ಪ್ರತಾಪ್ ಸಿಂಹ ಅನುಮೋದನೆ ಪಡೆದರು.

ಮೈಸೂರು, ಜ.8– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸುಮಾರು ರೂ.223 ಕೋಟಿ ವೆಚ್ಚದ ಎರಡೂ ಕಾಮಗಾರಿಗಳಿಗೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಂದ ಅನುಮೋದಿಸಿದ್ದೇನೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಮೈಸೂರು– ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಕೆಲವು ಕಡೆ ಸೂಕ್ತವಾದ ಪ್ರವೇಶ ಮತ್ತು ನಿರ್ಗಮನ ಹಾಗೂ ಇತರೆ ಕಾಮಗಾರಿಗಳನ್ನು ಕೈಗೊಳ್ಳದಿದ್ದರು ರಸ್ತೆ ಉದ್ಘಾಟನೆಯಾಗಿತ್ತು.

ತದನಂತರ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಉದ್ದಕ್ಕೂ ಸೂಕ್ತವಾದ ಪ್ರವೇಶಾತಿ ಹಾಗೂ ನಿರ್ಗಮನದ ಕಾಮಗಾರಿಗಳು, ಕೆಲವೆಡೆ ಕೆಳಸೇತುವೆಗಳು ಮತ್ತು Foot Over Bridge ನಿರ್ಮಾಣ ಸೇರಿದಂತೆ ರೂ.1251 ಕೋಟಿ ಮೊತ್ತದ ಹೆಚ್ಚುವರಿ ಕಾಮಗಾರಿಗಳಿಗೆ ಒಪ್ಪಿಗೆ ಕೋರಿ ನಾನು ಸಂಸದನಾಗಿದ್ದಾಗಲೇ ಯೋಜನೆ ಪಟ್ಟಿಯನ್ನು ಕೇಂದ್ರಕ್ಕೆ ಕಳುಹಿಸಿದ್ದೆವು. ನಿತಿನ್ ಗಡ್ಕರಿ ಅವರು ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಕಾಮಗಾರಿಯ ವೀಕ್ಷಣೆಗೆ ಮತ್ತು 2024ರ ಮಾರ್ಚ್‌ನಲ್ಲಿ ಮೈಸೂರಿಗೆ ಬಂದಾಗ ಸದರಿ ಮೊತ್ತದ ಹೆಚ್ಚುವರಿ ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ನೀಡಬೇಕೆಂದು ಮನವಿ ಮಾಡಲಾಗಿತ್ತು.

ತದನಂತರ ನನಗೆ ಟಿಕೆಟ್ ಕೈತಪ್ಪಿದ್ದರಿಂದ, ಫಾಲೋ ಅಪ್ ಮಾಡಲು ಸಾಧ್ಯವಾಗಿರಲಿಲ್ಲ. ಪ್ರಸ್ತುತ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಕೈಗೊಳ್ಳಬೇಕಾದ ಮೇಲ್ಕಂಡ ಪ್ರಸ್ತಾವನೆಯ ರೂ.1251 ಕೋಟಿಗಳ ಹೆಚ್ಚುವರಿ ಕಾಮಗಾರಿಯಲ್ಲಿ ಬಹುಮುಖ್ಯವಾದ ಪಂಚಮುಖಿ ಗಣೇಶ ದೇವಾಲಯ ಬಳಿ ರಸ್ತೆ ವಿಸ್ತರೀಕರಣ, ರೆಸ್ಟ್ ಏರಿಯಾ (ಹೋಟೆಲ್, ಬಂಕ್) ಯೋಜನೆಗಳನ್ನು ಕೈಬಿಟ್ಟು ಯೋಜನಾ ವೆಚ್ಚವನ್ನು ರೂ.711 ಕೋಟಿಗೆ ಇಳಿಸಿ ಕಳೆದ ಡಿಸೆಂಬರ್ 2023ರಲ್ಲಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅಂಗೀಕಾರ ನೀಡಿತ್ತು. ಹಾಗಾಗಿ ಇಂದು ನವದೆಹಲಿಯಲ್ಲಿ ಕೇಂದ್ರ ಸಚಿವ ನಿತಿನ್ ಗಡ್ಕರಿಯವರನ್ನು ಭೇಟಿ ಮಾಡಿ, ಸುಮಾರು ರೂ.223 ಕೋಟಿ ಮೊತ್ತದ ಅತ್ಯವಶ್ಯಕವಾಗಿರುವ ಎರಡೂ ಕಾಮಗಾರಿಗಳ ಮಹತ್ವ ವಿವರಿಸಿ, ಸಚಿವರಿಂದ ಅನುಮೋದಿಸಿದ್ದೇನೆ ಎಂದು ಅವರು ತಿಳಿಸಿದ್ದಾರೆ.

ಜ.12ರಂದು ನಟನ ರಂಗಶಾಲೆಯಲ್ಲಿ 'ಯಾರು ಈ ಕೀಚಕ?' ನಾಟಕ ಪ್ರದರ್ಶನ



ಮೈಸೂರು,ಜ.8–ಜನವರಿ 12 ರಂದು ಭಾನುವಾರ ಸಂಜೆ 6.30ಕ್ಕೆ ರಾಮಕೃಷ್ಣನಗರದ ನಟನ ರಂಗಶಾಲೆಯಲ್ಲಿ 'ಯಾರು ಈ ಕೀಚಕ?' ನಾಟಕ ಪ್ರದರ್ಶನವಿದೆ. ಈ ನಾಟಕವನ್ನು ನಿವೃತ್ತ ಕನ್ನಡ ಪ್ರಾಧ್ಯಾಪಕ ಕಾ.ಲ.ವಿಶ್ವನಾಥ ರಚಿಸಿದ್ದು, ರಂಗಕರ್ಮಿ ಕೆ.ವಿ.ಕೃಷ್ಣ ಕಶ್ಯಪ್ ನಿರ್ದೇಶಿಸಿದ್ದಾರೆ.

ಇದರಲ್ಲಿ ಪಾತ್ರೋದ್ಧರಣ ಪ್ರಕ್ರಿಯೆ ಮತ್ತು ಶೃಂಗಾರ–ವೀರರಸ ಸಂಗಮವಿದೆ. ಗುರುಕುಲದ ಸಹಪಾಠಿಗಳಾದ ಕೀಚಕ, ಭೀಮ, ಜರಾಸಂಧ, ದುರ್ಯೋಧನರ ಬಾಲ್ಯದ ತುಂಟಾಟ, ಸ್ನೇಹದ ಕೀಟಲೆಗಳ ರಸದೂಟವಿದೆ. ಪ್ರೇಕ್ಷಕರೇ ಕೀಚಕನ ವ್ಯಕ್ತಿತ್ವದ ನಿರ್ಣಾಯಕರು. ರಚನೆಕಾರರ, ದಿಗ್ದರ್ಶಕರ ಮುಕ್ತ ಪ್ರಸ್ತುತಿಗೆ ಪ್ರೇಕ್ಷಕ ಮಹಾಶಯರ ಪರಾಮರ್ಶೆಗಳು ಮತ್ತು ಕರತಾಡನಗಳೇ ಅಭಿನಂದನಾ ಹಾರ–ತುರಾಯಿಗಳೆಂದು ಭಾವಿಸಲಿರುವರು. ಈ ನಾಟಕದಲ್ಲಿ ನಿರ್ದೇಶಕರೇ ಮುಖ್ಯ ಪಾತ್ರ ವಹಿಸಿದ್ದಾರೆ; ಮೈಸೂರಿನ ಸಕ್ರಿಯ ರಂಗಕಲಾವಿದರಾದ ನಿವೃತ್ತ ಐಎಎಸ್ ಅಧಿಕಾರಿ ಎ.ಕೆ.ಮೊನ್ನಪ್ಪ, ಡಾ.ಮಾಧುರಿ ಕುಲಕರ್ಣಿ, ರೊಟೇರಿಯನ್ ಬದರಿನಾರಾಯಣ ಕೃಷ್ಣನ್ ಮತ್ತು ಅನುರಾಧ ನಂದಕುಮಾರ್ ವಿಶಿಷ್ಟ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ನಟನ ರಂಗಶಾಲೆಯಲ್ಲಿ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳು ವಿಭಿನ್ನ ಪಾತ್ರಗಳಲ್ಲಿ ವಿಜೃಂಭಿಸುತ್ತಿರುವುದು ಅತೀವ ರಂಜನೀಯವಾಗಿರಲಿದೆ.

ಬಾಂಗ್ಲಾ ಪಾಸ್‌ಪೋರ್ಟ್ ರದ್ದಾದ ಬೆನ್ನಲ್ಲೇ ಶೇಖ್ ಹಸೀನಾರ ವೀಸಾ ವಿಸ್ತರಿಸಿದ ಭಾರತ


ಹಸೀನಾ

ನವದೆಹಲಿ: ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರನ್ನು ಸ್ವದೇಶಕ್ಕೆ ಹಸ್ತಾಂತರಿಸುವಂತೆ ಒತ್ತಡ ಹೆಚ್ಚುತ್ತಿರುವ ಮಧ್ಯೆಯೇ ಭಾರತವು ಅವರ ವೀಸಾ ಅವಧಿ ವಿಸ್ತರಿಸಿದೆ. ಬಾಂಗ್ಲಾದೇಶದ ಮಧ್ಯಂತರ ಸರ್ಕಾರವು ಬಲವಂತದ ನಾಪತ್ತೆಗಳು ಮತ್ತು ಹತ್ಯೆಗಳಲ್ಲಿ ಭಾಗಿಯಾಗಿರುವ ಆರೋಪದ ಮೇಲೆ ಉಚ್ಚಾಟಿತ ಪ್ರಧಾನಿ ಶೇಖ್ ಹಸೀನಾ ಸೇರಿದಂತೆ 96 ಮಂದಿಯ ಪಾಸ್‌ಪೋರ್ಟ್ ರದ್ದುಗೊಳಿಸಿದೆ. ಈ ಬೆಳವಣಿಗೆ ಮರುದಿನವೇ ವೀಸಾ ವಿಸ್ತರಣೆ ಯಾಗಿದೆ. 77 ವರ್ಷದ ಹಸೀನಾ ಬಾಂಗ್ಲಾ ದೇಶದಿಂದ ಪಲಾಯನ ಮಾಡಿದ ನಂತರ ಭಾರತದಲ್ಲಿ ಆಶ್ರಯ ಕಂಡುಕೊಂಡಿದ್ದಾರೆ. ತನ್ನ 16 ವರ್ಷಗಳ ಅವಾಮಿ ಲೀಗ್ (ಎಎಲ್) ಆಡಳಿತವನ್ನು ವಿದ್ಯಾರ್ಥಿ ನೇತೃತ್ವದ ಬೃಹತ್ ಪ್ರತಿಭಟನೆ ಉರುಳಿಸಿದ ನಂತರ ಭಾರತದಲ್ಲಿ ವಾಸಿಸುತ್ತಿದ್ದಾರೆ. ಬಾಂಗ್ಲಾದೇಶದ ಅಂತರರಾಷ್ಟ್ರೀಯ ಅಪರಾಧಗಳ ನ್ಯಾಯಮಂಡಳಿ ಹಸೀನಾ ಮತ್ತು ಹಲವಾರು ಮಾಜಿ ಕ್ಯಾಬಿನೆಟ್ ಮಂತ್ರಿಗಳು, ಸಲಹೆಗಾರರು, ಮಿಲಿಟರಿ ಮತ್ತು ನಾಗರಿಕ ಅಧಿಕಾರಿಗಳಿಗೆ ಮಾನವೀಯತೆ ಮತ್ತು ನರಮೇಧದ ವಿರುದ್ಧದ ಅಪರಾಧಗಳಿಗಾಗಿ ಬಂಧನ ವಾರಂಟ್‌ಗಳನ್ನು ಹೊರಡಿಸಿದೆ. ಫೆ12ರೊಳಗೆ ಬಂಧಿಸುವಂತೆ ಗಡುವನ್ನು ನಿಗದಿಪಡಿಸಿದೆ.

ಜೆಎಸ್‌ಎಸ್ ಉನ್ನತ ಶಿಕ್ಷಣ, ಸಂಶೋಧನಾ ಅಕಾಡೆಮಿಯ 15ನೇ ಘಟಿಕೋತ್ಸವ ನಾಳೆ

2795 ಮಂದಿಗೆ ವಿವಿಧ ಪದವಿ ಪ್ರದಾನ


ಮೈಸೂರು, ಜ.8(ಎಂಟಿವೈ)–ಮೈಸೂರಿನ ಬನ್ನಿಮಂಟಪದ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಸಭಾಂಗಣದಲ್ಲಿ ಸಂಸ್ಥೆಯ 15ನೇ ಘಟಿಕೋತ್ಸವ ಸಮಾರಂಭ ಜ.10ರಂದು ಬೆಳಗ್ಗೆ 11ಕ್ಕೆ ಜರುಗಲಿದ್ದು, ವಿವಿಧ ವಿಷಯಗಳಲ್ಲಿ 2795 ಮಂದಿ ಪದವಿ ಸ್ವೀಕರಿಸಲಿದ್ದಾರೆ ಎಂದು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಉಪಕುಲಪತಿ ಡಾ.ಹೆಚ್.ಬಸವನಗೌಡಪ್ಪ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಾ.ಧನಂಜಯ ವೈ.ಚಂದ್ರಚೂಡ್ ಘಟಿಕೋತ್ಸವ ಭಾಷಣ ಮಾಡುವರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಸಿ.ಜಿ.ಬೆಟಸೂರಮಠ ಮತ್ತು ಅಕಾಡೆಮಿಯ ಸಮಕುಲಾಧಿಪತಿ ಡಾ.ಬಿ.ಸುರೇಶ್ ಹಾಗೂ ಇನ್ನಿತರರು ಪಾಲ್ಗೊಳಲಿದ್ದಾರೆ ಎಂದರು.

ಈ ಬಾರಿಯ ಘಟಿಕೋತ್ಸವದಲ್ಲಿ 1660 ವಿದ್ಯಾರ್ಥಿನಿಯರು, 1135 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 2795 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುತ್ತದೆ. ಒಬ್ಬರು ಡಾಕ್ಟರ್ ಆಫ್ ಲಿಟರೇಚರ್ ಪದವಿ, 104 ಅಭ್ಯರ್ಥಿಗಳಿಗೆ ಪಿಹೆಚ್.ಡಿ ಪದವಿ, 56 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ 75 ಪದಕ ಮತ್ತು ಪ್ರಮಾಣ ಪತ್ರ ವಿತರಿಸಲಾಗುತ್ತದೆ. ಪದಕ ಪಡೆದ 56 ವಿದ್ಯಾರ್ಥಿಗಳಲ್ಲಿ 43 ಮಂದಿ ವಿದ್ಯಾರ್ಥಿನಿಯರೇ ಇದ್ದಾರೆ ಎಂದರು.

ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಹಾಗೂ ಅಧ್ಯಯನಕ್ಕೆ ಬೇಕಾದ ಸೌಲಭ್ಯ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯಲ್ಲಿರುವುದರಿಂದ ಅನೇಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪುರಸ್ಕಾರ ಲಭಿಸಿದೆ. ನ್ಯಾಕ್ ಎ++ ಮಾನ್ಯತೆ ಪಡೆದ ಮುಂಚೂಣಿ ವಿಶ್ವವಿದ್ಯಾನಿಲಯಗಳಲ್ಲಿ ನಮ್ಮ ಸಂಸ್ಥೆಯೂ ಒಂದಾಗಿದೆ ಎಂದರು. ಗೋಷ್ಠಿಯಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಸಚಿವ ಡಾ.ಬಿ.ಮಂಜುನಾಥ, ಪರೀಕ್ಷಾ ನಿಯಂತ್ರಕ ಡಾ.ಆರ್.ಸುಧೀಂದ್ರಭಟ್, ಡೀನ್ ಡಾ.ವಿಶಾಲ್ ಕುಮಾರ್ ಗುಪ್ತ, ಡಾ.ರವೀಶ್ ಇದ್ದರು.

ಕೌಟಿಲ್ಯ ವಿದ್ಯಾಲಯದಲ್ಲಿ ವೇಷಭೂಷಣ ಸ್ಪರ್ಧೆ


ಮೈಸೂರಿನ ಕೌಟಿಲ್ಯ ವಿದ್ಯಾಲಯದಲ್ಲಿ ವೇಷಭೂಷಣ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಪ್ರಾಂಶುಪಾಲರಾದ ಶಶಿಕಲಾ, ಶಾಲೆ ಅಧ್ಯಕ್ಷ ಟಿ.ಬಾಬು, ಶೈಕ್ಷಣಿಕ ಸಂಯೋಜಕಿ ಕವಿತಾ ಶಶಿಕಿರಣ್, ಮತ್ತಿತರರು ಈ ವೇಳೆ ಉಪಸ್ಥಿತರಿದ್ದರು.

ವಾಣಿ ಕೌಟುಂಬಿಕ ಕಥಾಸ್ಪರ್ಧೆಗೆ ಆಹ್ವಾನ

ಮೈಸೂರು,ಜ.8–ಪ್ರಸಿದ್ಧ ಕಾದಂಬರಿಗಾರ್ತಿ ವಾಣಿ ಅವರ ಸ್ಮರಣೆ ಅಂಗವಾಗಿ ಲೇಖಿಕಾ ಸಾಹಿತ್ಯ ವೇದಿಕೆಯು 'ವಾಣಿ ಕೌಟುಂಬಿಕ ಕಥಾಸ್ಪರ್ಧೆ' ಏರ್ಪಡಿಸಿದೆ. ಕೌಟುಂಬಿಕ ಬಾಂಧವ್ಯ, ಪರಸ್ಪರ ಪ್ರೀತಿ, ಗೌರವ, ಕುಟುಂಬವನ್ನು ಒಗ್ಗೂಡಿಸುವ ನೆಲೆಗಟ್ಟಿನ ಕಥೆಗಳನ್ನು ಕಳಿಸಬಹುದು. ಆರರಿಂದ 8 ಪುಟಗಳ ಕಥೆಗಳನ್ನು ಜ.25ರೊಳಗೆ deepaarun rao@gmail.com ಇಲ್ಲಿಗೆ ಕಳಿಸಬಹುದು. ಹೆಚ್ಚಿನ ಮಾಹಿತಿಗೆ ಲೇಖಿಕಾ ಸಾಹಿತ್ಯ ವೇದಿಕೆ ಸಂಚಾಲಕಿ ಶೈಲಜಾ ಸುರೇಶ್ 9916378955 ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ದೇಶ - ವಿದೇಶ

ಕೆನಡಾ ಮುಂದಿನ ಪ್ರಧಾನಿ ರೇಸ್‌ನಲ್ಲಿ ಭಾರತೀಯ ಮೂಲದ ಅನಿತಾ ಆನಂದ್



ಒಟ್ಟಾವ: ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿರುವ ಜಸ್ಟಿನ್ ಟ್ರುಡೊ ಅವರ ಸ್ಥಾನಕ್ಕೆ ಅವರ ಸಂಪುಟದಲ್ಲಿ ಸಾರಿಗೆ ಸಚಿವರಾಗಿ ಕಾರ್ಯ ನಿರ್ವಹಿಸುತ್ತಿದ್ದ ಅನಿತಾ ಆನಂದ್ ಹೆಸರು ಬಲವಾಗಿ ಕೇಳಿ ಬರುತ್ತಿದೆ. ಸೋಮವಾರ ಪ್ರಧಾನಿ ಹುದ್ದೆಗೆ ಟ್ರೂಡೊ ರಾಜೀನಾಮೆ ನೀಡಿರುವುದರಿಂದ ಹೊಸ ನಾಯಕನ ಆಯ್ಕೆ ಅನಿವಾರ್ಯವಾಗಿದೆ. ಬರೋಬ್ಬರಿ ಹತ್ತು ವರ್ಷಗಳ ಕಾಲ ಪ್ರಧಾನಿ ಹುದ್ದೆಯಲ್ಲಿದ್ದ ಟ್ರುಡೋ ರಾಜೀನಾಮೆಗೆ ಒತ್ತಾಯಿಸಿ ಸ್ವಪಕ್ಷದಲ್ಲೇ ಭಿನ್ನಮತ ಸೃಷ್ಟಿಯಾಗಿದ್ದರಿಂದ ಈ ಬೆಳವಣಿಗೆ ನಡೆದಿದೆ.

ಆದರೆ ಲಿಬರಲ್ ಪಕ್ಷ ನೂತನ ಪ್ರಧಾನಿ ಆಯ್ಕೆ ಮಾಡುವವರೆಗೆ ತಾನೇ ಪ್ರಧಾನಿ ಹುದ್ದೆಯಲ್ಲಿ ಮುಂದುವರಿಯುವುದಾಗಿ ಘೋಷಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕೆನಡಾದ ಮುಂದಿನ ಪ್ರಧಾನಿ ಯಾರು ಎಂಬ ಲೆಕ್ಕಾಚಾರ ಆರಂಭವಾಗಿದೆ.

ಮಾರ್ಚ್ 24ರಂದು ಹೊಸ ಪ್ರಧಾನಿ ಆಯ್ಕೆಯಾಗಲಿದ್ದಾರೆ. ಸಾರಿಗೆ ಮತ್ತು ಆಂತರಿಕ ವ್ಯವಹಾರಗಳ ಖಾತೆ ಸಚಿವರಾಗಿರುವ ಅನಿತಾ ಆನಂದ್ ಜೊತೆಗೆ, ಡೊಮಿನಿಕ್ ಲೆಬ್ಲಾಂಕ್, ಕ್ರಿಸ್ಟಿನಾ ಫ್ರೀಲ್ಯಾಂಡ್, ಮೆಲ್ಲೆನ್ ಜೋಲಿ, ಫ್ರಾಂಕೋಯಿಸ್ ಫಿಲಿಪ್ ಚಾಂಪೇನ್ ಮತ್ತು ಮಾರ್ಕ್ ಕರ್ನಿ ಹೆಸರು ಕೂಡಾ ಚಾಲ್ತಿಯಲ್ಲಿದೆ.

ಕೇರಳ ದೇಗುಲದಲ್ಲಿ ಆನೆ ದಾಳಿ: 20ಕ್ಕೂ ಹೆಚ್ಚು ಮಂದಿಗೆ ಗಾಯ



ಮಲಪ್ಪುರಂ: ಕೇರಳದ ಮಲಪ್ಪುರಂನಲ್ಲಿನ ದೇಗುಲವೊಂದರ ಧಾರ್ಮಿಕ ಉತ್ಸವದ ವೇಳೆ ಆನೆಯೊಂದು ದಾಳಿ ಮಾಡಿದ ಪರಿಣಾಮ ಕನಿಷ್ಠ 20 ಮಂದಿ ಗಾಯಗೊಂಡಿದ್ದಾರೆ. ಕೇರಳದ ಮಲಪ್ಪುರಂನ ತಿರೂರಿನ ಬಿ.ಪಿ.ಅಂಗಡಿಯ ಜಾರಮ್ ಮೈದಾನದಲ್ಲಿ ಈ ಘಟನೆ ನಡೆದಿದ್ದು. ದೇಗುಲ ಉತ್ಸವಕ್ಕಾಗಿ ಸಿಂಗಾರಗೊಂಡು ನಿಂತಿದ್ದ ಆನೆಯೊಂದು ಏಕಾಏಕಿ ಆಕ್ರೋಶಗೊಂಡು ತನ್ನ ಮುಂದಿದ್ದ ವ್ಯಕ್ತಿ ಮೇಲೆ ಹಲ್ಲೆ ಮಾಡಿದೆ.

ವ್ಯಕ್ತಿಯನ್ನು ಸೊಂಡಿಲಿನಿಂದ ಎತ್ತಿಕೊಂಡ ಆನೆ ಏಕಾಏಕಿ ಬಟ್ಟೆ ಒಗೆಯುವಂತೆ ನೆಲಕ್ಕೆ ಒಗೆದಿದೆ. ಬಳಿಕ ಅಲ್ಲಿ ನೆರೆದಿದ್ದ ಜನರತ್ತ ಆನೆ ನುಗ್ಗಿದ್ದು ಈ ವೇಳೆ ಕನಿಷ್ಠ 20 ಮಂದಿ ಗಾಯಗೊಂಡಿದ್ದಾರೆ ಮತ್ತು ಈ ಪೈಕಿ ಇಬ್ಬರ ಸ್ಥಿತಿ ಗಂಭೀರವಾಗಿದೆ. ಇಲ್ಲಿನ ಬಿಪಿ ಅಂಗಡಿಯಲ್ಲಿರುವ ಯಾಹೂ ತಂಗಳ್ ದೇಗುಲದಲ್ಲಿ ನಾಲ್ಕು ದಿನಗಳ ವಾರ್ಷಿಕ ಉತ್ಸವಗಳು ಅಥವಾ ನೇರ್ಚಾ ಕಾರ್ಯಕ್ರಮ ನಡೆಯುತ್ತಿತ್ತು. ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಐದು ಆನೆಗಳು ಭಾಗಿಯಾಗಿದ್ದವು. ಆದರೆ ಕಾರ್ಯಕ್ರಮ ಮುಗಿಯುವ ಕೆಲವೇ ಗಂಟೆಗಳ ಮೊದಲು ಪಕ್ಕೋತ್ ಶ್ರೀಕುಟ್ಟನ್ ಎಂಬ ಹೆಸರಿನ ಆನೆಯು ದಿಢೀರ್ ಆಕ್ರೋಶಗೊಂಡು ದಾಳಿ ನಡೆಸಿದೆ.

ಅಧಿಕಾರ ಹಸ್ತಾಂತರ ಪ್ರಕ್ರಿಯೆಯಲ್ಲಿ ಬೈಡನ್ ಕಿರಿಕ್; ಟ್ರಂಪ್ ಗಂಭೀರ ಆರೋಪ



ವಾಷಿಂಗ್‌ಟನ್: ಅಮೇರಿಕಾದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ತಿಂಗಳು ಪದಗ್ರಹಣ ಮಾಡಲಿದ್ದಾರೆ. ಆದರೆ ಇದಕ್ಕೂ ಮೊದಲು ನಡೆಯಬೇಕಿರುವ ಅಧಿಕಾರ ಹಸ್ತಾಂತರ ಪ್ರಕ್ರಿಯೆಗಳ ಬಗ್ಗೆ ಅವರು ತೀವ್ರ ಅಸಮಾಧಾನ ಹೊರಹಾಕಿದ್ದಾರೆ. ಲಾಫೇರ್‌ನಿಂದ ಹಿಂದೆಂದೂ ನೋಡಿರದಂತಹ ದುಬಾರಿ ಮತ್ತು ಹಾಸ್ಯಾಸ್ಪದ ಕಾರ್ಯನಿರ್ವಾಹಕ ಆದೇಶಗಳು, ಗ್ರೀನ್ ನ್ಯೂ ಸ್ಕ್ಯಾಮ್ ಮತ್ತು ಇತರ ಹಣವನ್ನು ವ್ಯರ್ಥ ಮಾಡುವ ವಂಚನೆಗಳವರೆಗೆ, ಅಧಿಕಾರ ಹಸ್ತಾಂತರವನ್ನು ಸಾಧ್ಯವಾದಷ್ಟು ಕಷ್ಟಕರವಾಗಿಸಲು ಬಿಡೆನ್ ಸಾಧ್ಯವಿರುವ ಎಲ್ಲವನ್ನೂ ಮಾಡುತ್ತಿದ್ದಾರೆ ಎಂದು ಟ್ರಂಪ್, ಟ್ರೂತ್ ಸೋಷಿಯಲ್ ಪೋಸ್ಟ್‌ನಲ್ಲಿ ಹೇಳಿದ್ದಾರೆ. ಭಯಪಡಬೇಡಿ, ಬೈಡನ್ ಅವಧಿಯ ಈ ಆದೇಶಗಳು ಶೀಘ್ರದಲ್ಲೇ ಕೊನೆಗೊಳ್ಳುತ್ತವೆ ಮತ್ತು ನಾವು ಸಾಮಾನ್ಯ ಜ್ಞಾನ ಮತ್ತು ಶಕ್ತಿಯ ರಾಷ್ಟ್ರವಾಗುತ್ತೇವೆ ಎಂದು ಟ್ರಂಪ್ ಭರವಸೆ ನೀಡಿದ್ದಾರೆ. ಬೈಡನ್ ಅಧಿಕಾರ ಹಸ್ತಾಂತರಕ್ಕೆ ಸಹಕರಿಸುತ್ತಿಲ್ಲ ಎಂದು ಟ್ರಂಪ್ ಹೇಳಿದ್ದರೆ, ಟ್ರಂಪ್ ಅವಧಿಯಲ್ಲಿ ಶ್ವೇತಭವನದ ಮುಖ್ಯಸ್ಥರಾಗಲಿರುವ ಸೂಸಿ ವೈಲ್ಸ್ ಟ್ರಂಪ್ ಹೇಳಿಕೆಗೆ ತದ್ವಿರುದ್ಧ ಹೇಳಿಕೆ ನೀಡಿದ್ದಾರೆ.

ಮಹಿಳೆಯ ದೇಹಾಕೃತಿ ಟೀಕಿಸುವುದೂ ಲೈಂಗಿಕ ಕಿರುಕುಳ

ಕೊಚ್ಚಿ: ಮಹಿಳೆಯ ದೇಹ ರಚನೆ ಕುರಿತಾದ ಟೀಕೆಗಳೂ ಕೂಡ ಲೈಂಗಿಕ ಕಿರುಕುಳವಾಗಿದ್ದು, ಇದು ಶಿಕ್ಷಾರ್ಹ ಅಪರಾಧವಾಗಿದೆ ಎಂದು ಕೇರಳ ಹೈಕೋರ್ಟ್ ಮಹತ್ವದ ಆದೇಶ ನೀಡಿದೆ. ಕೇರಳ ರಾಜ್ಯ ವಿದ್ಯುತ್ ಮಂಡಳಿ ಮಾಜಿ ಉದ್ಯೋಗಿಯೊಬ್ಬರು ಸಲ್ಲಿಸಿದ್ದ ಮನವಿಯನ್ನು ವಜಾಗೊಳಿಸುವ ಸಂದರ್ಭದಲ್ಲಿ ನ್ಯಾಯಮೂರ್ತಿ ಎ.ಬದರುದ್ದೀನ್, ಈ ಮಹತ್ವದ ತೀರ್ಪು ನೀಡಿದ್ದಾರೆ. ತನ್ನ ವಿರುದ್ಧ ಅದೇ ಸಂಸ್ಥೆಯ ಮಹಿಳಾ ಸಿಬ್ಬಂದಿಯೊಬ್ಬರು ದಾಖಲಿಸಿರುವ ಲೈಂಗಿಕ ಕಿರುಕುಳ ಪ್ರಕರಣವನ್ನು ರದ್ದುಗೊಳಿಸುವಂತೆ ಕೇರಳ ರಾಜ್ಯ ವಿದ್ಯುತ್ ಮಂಡಳಿ ಮಾಜಿ ಉದ್ಯೋಗಿಯೊಬ್ಬರು ಅರ್ಜಿ ಸಲ್ಲಿಸಿದ್ದರು. ಆರೋಪಿ 2013ರಿಂದ ತನ್ನ ವಿರುದ್ಧ ಅಸಭ್ಯ ಪದಗಳನ್ನು ಬಳಸಿದ್ದಾರೆ ಮತ್ತು ನಂತರ 2016–17 ರಲ್ಲಿ ಆಕ್ಷೇಪಾರ್ಹ ಸಂದೇಶಗಳು ಮತ್ತು ದೂರವಾಣಿ ಕರೆ ಮಾಡಿ ಕಿರುಕುಳ ನೀಡುತ್ತಿದ್ದರು ಎಂದು ಮಹಿಳೆ ತನ್ನ ದೂರಿನಲ್ಲಿ ಆರೋಪಿಸಿದ್ದರು. ಅಲ್ಲದೆ ಆತನ ವಿರುದ್ಧ ಕೆಎಸ್‌ಇಬಿ ಮತ್ತು ಪೊಲೀಸರಿಗೆ ದೂರು ನೀಡಿದರೂ ಆತ ಆಕೆಗೆ ಆಕ್ಷೇಪಾರ್ಹ ಸಂದೇಶಗಳನ್ನು ಕಳುಹಿಸುತ್ತಲೇ ಇದ್ದ ಎಂದು ಮಹಿಳೆ ದೂರಿದ್ದಾರೆ. ಅರ್ಜಿ ವಿಚಾರಣೆ ನಡೆಸಿದ ಕೇರಳ ಹೈಕೋರ್ಟ್, ಐಪಿಸಿಯ ಸೆಕ್ಷನ್ 354 ಎ ಮತ್ತು 509 ಮತ್ತು ಕೇರಳ ಪೊಲೀಸ್ ಕಾಯ್ದೆಯ ಸೆಕ್ಷನ್ 120 (ಒ) ಅಡಿಯಲ್ಲಿ ಅಪರಾಧಗಳನ್ನು ಆಕರ್ಷಿಸುವ ಅಂಶಗಳನ್ನು ಪ್ರಾಥಮಿಕವಾಗಿ ರೂಪಿಸಲಾಗಿದೆ ಎಂದು ಹೇಳಿದೆ.

ಯುಎಸ್ ಒತ್ತೆಯಾಳುಗಳ ಬಿಡುಗಡೆಗಾಗಿ ಹಮಾಸ್‌ಗೆ 'ಡೆಡ್'ಲೈನ್ ನೀಡಿದ ಟ್ರಂಪ್

ವಾಷಿಂಗ್ಟನ್: ಅಮೆರಿಕದ 47ನೇ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಲಿರುವ ಜ.20ರೊಳಗೆ ಅಮೆರಿಕದ ಒತ್ತೆಯಾಳುಗಳನ್ನು ಹಮಾಸ್ ಬಿಡುಗಡೆ ಮಾಡದಿದ್ದಲ್ಲಿ ಹಮಾಸ್‌ಗೆ ನರಕ ಏನೆಂದು ತೋರಿಸಿ ಬಿಡುತ್ತೇವೆ ಎಂದು ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗಂಭೀರ ಎಚ್ಚರಿಕೆ ನೀಡಿದ್ದಾರೆ. ಒತ್ತೆಯಾಳುಗಳ ಬಿಡುಗಡೆಗಾಗಿ ನಡೆಯುತ್ತಿರುವ ಸಂಧಾನಕ್ಕೆ ನಾನು ಅಡ್ಡಿಪಡಿಸುವುದಿಲ್ಲ. ಆದರೆ ನಾನು ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸುವ ಹೊತ್ತಿಗೆ ಎಲ್ಲಾ ಅಮೆರಿಕನ್ ಒತ್ತೆಯಾಳುಗಳು ಬಿಡುಗಡೆಯಾಗಿರಬೇಕು. ಇಲ್ಲದಿದ್ದರೆ ಮಧ್ಯಪ್ರಾಚ್ಯದಲ್ಲಿ ಸೃಷ್ಟಿಯಾಗಲಿರುವ ನರಕ ಸದೃಶ್ಯ ದೃಶ್ಯಕ್ಕೆ ನಾನು ಹೊಣೆಗಾರನಲ್ಲ ಎಂದು ಟ್ರಂಪ್ ಹೇಳಿದ್ದಾರೆ. ಅಮೆರಿಕದ ಒತ್ತೆಯಾಳುಗಳನ್ನು ಬಿಡುಗಡೆ ಮಾಡುವ ಕುರಿತು ಹಮಾಸ್‌ನೊಂದಿಗೆ ಮಾತು ಕತೆಗಳ ಸ್ಥಿತಿಯ ಕುರಿತು ಕೇಳಲಾದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಡೊನಾಲ್ಡ್ ಟ್ರಂಪ್, ಮಧ್ಯಪ್ರಾಚ್ಯಕ್ಕೆ ವಿಶೇಷ ರಾಯಭಾರಿಯಾಗಿರುವ ಸ್ಟೀವನ್ ಚಾರ್ಲ್ಸ್ ವಿಟ್‌ಕಾಫ್ ನೇತೃತ್ವದಲ್ಲಿ ನಡೆಯುತ್ತಿರುವ ಸಂಧಾನ ಮಾತುಕತೆ ಯಶಸ್ವಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಅಮೆರಿಕದ ಪ್ರಜೆಗಳನ್ನು ಒತ್ತೆಯಾಳುಗಳಾಗಿ ಇಟ್ಟುಕೊಂಡಿರುವ ಹಮಾಸ್ ಉಗ್ರ ಸಂಘಟನೆಗೆ ಅಮೆರಿಕದ ಸೇನಾ ತಾಕತ್ತಿನ ಅರಿವಿದೆ ಎಂದು ನಾನು ಭಾವಿಸುತ್ತೇನೆ ಎಂದರು.

ಮೈಸೂರು ಮಿತ್ರ ಗುರುವಾರ 9 ಜನವರಿ 2025

ಸಕಾಲಕ್ಕೆ ಸಾರ್ವಜನಿಕರ ಸಮಸ್ಯೆ ಇತ್ಯರ್ಥಪಡಿಸಿ



ಮಡಿಕೇರಿ ಕಾವೇರಿ ಕಲಾಕ್ಷೇತ್ರದಲ್ಲಿ ಲೋಕಾಯುಕ್ತ ಅಧಿಕಾರಿಗಳು ಸಾರ್ವಜನಿಕರ ದೂರು ಸ್ವೀಕರಿಸಿದರು.

ಮಡಿಕೇರಿ, ಜ.8–ಸಾರ್ವಜನಿಕರ ಸಮಸ್ಯೆಗಳನ್ನು ಸಕಾಲದಲ್ಲಿ ಇತ್ಯರ್ಥಪಡಿಸಲು ಶ್ರಮಿಸಬೇಕು ಎಂದು ಲೋಕಾಯುಕ್ತ ಪೊಲೀಸ್ ಉಪ ಅಧೀಕ್ಷಕ ಕೆ.ಸಿ.ಪ್ರಕಾಶ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಕಾವೇರಿ ಕಲಾಕ್ಷೇತ್ರದಲ್ಲಿ ಬುಧವಾರ ಸಾರ್ವಜನಿಕರ ದೂರು ಸ್ವೀಕರಿಸಿ ಮಾತನಾಡಿದ ಅವರು, ಸರ್ಕಾರಿ ಅಧಿಕಾರಿಗಳು ಸಾರ್ವಜನಿಕ ಸೇವೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಉತ್ತರದಾಯಿತ್ವ ಹೊಂದಿರಬೇಕು. ಕಂದಾಯ, ಪಂಚಾಯತ್ ರಾಜ್, ಸ್ಥಳೀಯ ಸಂಸ್ಥೆಗಳು ಸೇರಿದಂತೆ ವಿವಿಧ ಇಲಾಖೆ ಕಚೇರಿಗಳಿಗೆ ಸಾರ್ವಜನಿಕರು ಕೆಲಸಕ್ಕಾಗಿ ಭೇಟಿ ನೀಡುತ್ತಾರೆ. ಆದ್ದರಿಂದ ಜನರಿಗೆ ಸ್ಪಂದಿಸಿ ಕರ್ತವ್ಯ ನಿರ್ವಹಿಸುವುದು ಅಧಿಕಾರಿ ಮತ್ತು ಸಿಬ್ಬಂದಿ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಸಾರ್ವಜನಿಕವಾಗಿ ಅಧಿಕಾರಿಗಳು ಮತ್ತು ಸಿಬ್ಬಂದಿ ಕರ್ತವ್ಯ ನಿಷ್ಠೆಯಿಂದ ಕಾರ್ಯ ನಿರ್ವಹಿಸಿದಾಗ ಸಮಸ್ಯೆಗಳನ್ನು ಇತ್ಯರ್ಥಪಡಿಸಬಹುದು. ವಿದ್ಯಾರ್ಥಿನಿಲಯಗಳಲ್ಲಿ ಸ್ವಚ್ಛತೆಗೆ ಹೆಚ್ಚಿನ ಒತ್ತು ನೀಡಬೇಕು. ಗುಣಮಟ್ಟದ ಆಹಾರ ವಿತರಿಸಬೇಕು. ಜೊತೆಗೆ ಸುಭದ್ರತೆಯತ್ತ ಗಮನಹರಿಸಬೇಕು ಎಂದು ತಾಲೂಕು ಮಟ್ಟದ ಅಧಿಕಾರಿಗಳಿಗೆ ಆದೇಶಿಸಿದರು.

ನಗರಸಭೆ ವ್ಯಾಪ್ತಿಯಲ್ಲಿ ರಸ್ತೆಬದಿ ಸ್ವಚ್ಛತೆಗೆ ಒತ್ತು ನೀಡಬೇಕು. ಸಾರ್ವಜನಿಕರ ಕುಂದುಕೊರತೆ ಆಲಿಸಬೇಕು. ಪ್ಲಾಸ್ಟಿಕ್ ಬಿಸಾಡದಂತೆ ಅರಿವು ಮೂಡಿಸಬೇಕು. ಬೀದಿ ದೀಪ ಸಮರ್ಪಕ ನಿರ್ವಹಣೆ ಮಾಡಬೇಕು. ರಸ್ತೆಗುಂಡಿ ಮುಚ್ಚಬೇಕು. ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಬೇಕು ಎಂದರು.

ಕೃಷಿ ಇಲಾಖೆ, ತೋಟಗಾರಿಕೆ, ಮೀನುಗಾರಿಕೆ, ಪಶುಪಾಲನೆ, ಕಾರ್ಮಿಕ, ಲೋಕೋಪಯೋಗಿ, ಪಂಚಾಯತ್ ರಾಜ್, ಶಾಲಾ ಶಿಕ್ಷಣ ಸೇರಿದಂತೆ ವಿವಿಧ ಇಲಾಖೆಯ ಕಾರ್ಯಕ್ರಮ ಸಂಬಂಧಿಸಿದಂತೆ ಮಾಹಿತಿ ಪಡೆದರು. ಇದೇ ವೇಳೆ 4 ಅರ್ಜಿಗಳು ಸಲ್ಲಿಕೆಯಾದವು. ತಹಸೀಲ್ದಾರ್ ಪ್ರವೀಣ್ ಕುಮಾರ್, ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ಪೌರಕಾರ್ಮಿಕರ ಮನೆ ನಿರ್ಮಾಣಕ್ಕೆ ಚಾಲನೆ

ಉಕ್ಕುಡದಲ್ಲಿ 12 ಮನೆಗಳ ನಿರ್ಮಾಣಕ್ಕೆ ಶಾಸಕ ಮಂತರ್ ಗೌಡ ಭೂಮಿಪೂಜೆ

ಮಡಿಕೇರಿ, ಜ.8–ನಗರಸಭೆ ವ್ಯಾಪ್ತಿಯ ಕರ್ಣಂಗೇರಿ ಗ್ರಾಮ ಬಳಿಯ ಉಕ್ಕುಡದಲ್ಲಿ ಪೌರಕಾರ್ಮಿಕರಿಗೆ ಗೃಹಭಾಗ್ಯ ಯೋಜನೆಯಡಿ ಮನೆ ನಿರ್ಮಾಣಕ್ಕೆ ಶಾಸಕ ಡಾ. ಮಂತರ್‌ಗೌಡ ಬುಧವಾರ ಚಾಲನೆ ನೀಡಿದರು.

ಗೃಹಭಾಗ್ಯ ಯೋಜನೆಯಡಿ ತಲಾ 7.50 ಲಕ್ಷ ರೂ. ವೆಚ್ಚದಲ್ಲಿ ಮೂರು ಅಂತಸ್ತಿನ 12 ಮನೆಗಳ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಶಾಸಕರು, ಸರ್ಕಾರ ಪೌರಕಾರ್ಮಿಕರಿಗೆ ಅಗತ್ಯ ಮೂಲ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಹೆಚ್ಚಿನ ಕಾಳಜಿ ವಹಿಸಿದೆ. ಪೌರಕಾರ್ಮಿಕರು ಪ್ರತಿನಿತ್ಯ ನಗರ, ಪಟ್ಟಣ ಪ್ರದೇಶದಲ್ಲಿ ಸ್ವಚ್ಛತೆಗೆ ದುಡಿಯುತ್ತಾರೆ. ಇವರಿಗೆ ಮೂಲಸೌಲಭ್ಯ ಕಲ್ಪಿಸುವುದು ಹೆಚ್ಚಿನ ಆದ್ಯತೆಯಾಗಿದೆ. ಆ ನಿಟ್ಟಿನಲ್ಲಿ ಶೀಘ್ರ ಮನೆ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ತಾಕೀತು ಮಾಡಿದರು.



ಮಡಿಕೇರಿಯ ಉಕ್ಕುಡದಲ್ಲಿ ಪೌರಕಾರ್ಮಿಕರ ಮನೆಗಳ ನಿರ್ಮಾಣಕ್ಕೆ ಶಾಸಕ ಡಾ.ಮಂತರ್‌ಗೌಡ ಭೂಮಿಪೂಜೆ ನೆರವೇರಿಸಿದರು.

ಉಕ್ಕುಡದಲ್ಲಿ ಅಂಬೇಡ್ಕರ್ ಭವನ ನಿರ್ಮಿಸಬೇಕಿದೆ. ಆ ನಿಟ್ಟಿನಲ್ಲಿ 2 ಎಕರೆ ಜಾಗವನ್ನು ಕಾಯ್ದಿರಿಸಿ, ಭವನ ನಿರ್ಮಿಸಲಾಗುವುದು. ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರನ್ನು ಭೇಟಿ ಮಾಡಿ, ಹೆಚ್ಚಿನ ಅನುದಾನ ಬಿಡುಗಡೆಗೆ ಮನವಿ ಮಾಡಲಾಗುವುದು. ಉಕ್ಕುಡ ರಸ್ತೆ ಮಾರ್ಗವನ್ನು ಅಗಲೀಕರಣ ಮಾಡಬೇಕು. ಈಗಾಗಲೇ ಪೈಸಾರಿ ಜಾಗದಲ್ಲಿ ವಾಸಿಸುತ್ತಿರುವವರಿಗೆ ಹಕ್ಕುಪತ್ರ ನೀಡುವಂತಾಗಬೇಕು. ನಿವೇಶನ ರಹಿತರಿಗೆ ನಿವೇಶನ ಒದಗಿಸುಬೇಕು ಎಂದರು.

ಬಳಿಕ ನಗರೋತ್ಥಾನ 4ನೇ ಹಂತದಡಿ ಪಿಕೆಜಿಬಿ ನಿವೇಶನಕ್ಕೆ ಸಂಪರ್ಕ ಕಲ್ಪಿಸುವ ಸಿಸಿ ರಸ್ತೆ, ಪಿಕೆಜಿಬಿಗೆ ಸಂಪರ್ಕ ಕಲ್ಪಿಸುವ ಸಿಸಿ ಉಪರಸ್ತೆ ಪಿಕೆಜಿಬಿ ಸೈಟ್ ವ್ಯಾಪ್ತಿಯಲ್ಲಿ ಮಳೆ ನೀರು ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸರು ಚಾಲನೆ ನೀಡಿದರು.

ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ರಾಜೇಶ್ ಯಲ್ಲಪ್ಪ, ವಿಧಾನಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ನಗರಸಭಾ ಸದಸ್ಯರಾದ ಅರುಣ್ ಶೆಟ್ಟಿ ಸತೀಶ್, ಸಬಿತಾ, ಜಗದೀಶ್, ಸದಾ, ಮುಡಾ ಸದಸ್ಯ ಚಂದ್ರಶೇಖರ್, ನಗರಸಭೆ ಮಾಜಿ ಅಧ್ಯಕ್ಷರಾದ ಕಾವೇರಮ್ಮ ಸೋಮಣ್ಣ, ಜುಲೈಕಾಬಿ, ಪ್ರಮುಖರಾದ ಟಿ.ಪಿ.ರಮೇಶ್, ಸುರಯ್ಯ ಅಬ್ರಾರ್, ನವೀನ್ ಅಂಬೆಕಲ್ಲು ಪೌರಾಯುಕ್ತ ಎಚ್.ಆರ್.ರಮೇಶ್, ಇಂಜಿನಿಯರ್ ಸತೀಶ್, ಹೇಮಂತ್ ಇತರರು ಇದ್ದರು.

ಆಟದ ಮೈದಾನಕ್ಕೆ 5 ಲಕ್ಷ ಬಿಡುಗಡೆ

ಮಡಿಕೇರಿ ನಗರದ ಗೌಳಿಬೀದಿಯ ಚೆರಿಯಮನೆ ಪೊನ್ನಪ್ಪ ಆಟದ ಮೈದಾನ, ಉದ್ಯಾನ ಅಭಿವೃದ್ಧಿಗೆ ಶಾಸಕರ ನಿಧಿಯಡಿ 5 ಲಕ್ಷ ರೂ. ಬಿಡುಗಡೆ ಮಾಡಲಾಗಿದೆ ಎಂದು ಡಾ.ಮಂತರ್‌ಗೌಡ ತಿಳಿಸಿದರು.

ಆಟದ ಮೈದಾನ ಹಾಗೂ ಉದ್ಯಾನ ಅಭಿವೃದ್ಧಿಗೆ ಚಾಲನೆ ನೀಡಿ ಮಾತನಾಡಿದ ಅವರು, ಈಗಾಗಲೇ ನಗರಸಭೆ ವತಿಯಿಂದ 2.50 ಲಕ್ಷ ರೂ. ಅನುಮೋದನೆ ದೊರೆತಿದೆ. ಚೆರಿಯಮನೆ ಪೊನ್ನಪ್ಪ ಅವರು ಮೈದಾನಕ್ಕೆ ಜಾಗ ನೀಡಿದ್ದಾರೆ. ಆ ನಿಟ್ಟಿನಲ್ಲಿ ಸ್ಥಳೀಯರಿಗೆ ಅನುಕೂಲವಾಗಲು ಉದ್ಯಾನ ಅಭಿವೃದ್ಧಿಪಡಿಸಲಾಗುವುದು ಎಂದರು.

ಮಲ್ಲಳ್ಳಿ ಜಲಪಾತ ಅಭಿವೃದ್ಧಿ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಶಾಸಕರು, ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಅವರ ಜತೆ ಈಗಾಗಲೇ ಚರ್ಚಿಸಲಾಗಿದೆ. ಆ ನಿಟ್ಟಿನಲ್ಲಿ ಕೇಬಲ್ ಕಾರ್ ಅಳವಡಿಕೆಗೆ ಅವಕಾಶವಿದ್ದು, ಪಿಪಿಟಿ ಮಾದರಿಯಲ್ಲಿ ಅನುಷ್ಠಾನಗೊಳಿಸಬೇಕಿದೆ ಎಂದು ತಿಳಿಸಿದರು.

ಕಾರು ಡಿಕ್ಕಿ: ಬೈಕ್ ಸವಾರನ ಕಾಲು ಮುರಿತ

ನಾಪೋಕ್ಲು (ದುಗ್ಗಳ), ಜ.8–ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರನ ಕಾಲು ಮುರಿದಿರುವ ಘಟನೆ ಸಮೀಪದ ಕೊಟ್ಟಮುಡಿ ಜಂಕ್ಷನ್‌ನಲ್ಲಿ ಬುಧವಾರ ಜರುಗಿದೆ.



ಬೈಕ್ ಸವಾರ ರಂಗಸ್ವಾಮಿ ಕಾಲು ಮುರಿದಿದ್ದು, ಮಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ನಾಪೋಕ್ಲು ಕಡೆಯಿಂದ ಮೂರ್ನಾಡು ಕಡೆಗೆ ಬರುತ್ತಿದ್ದ ಕಾರು ಕೊಟ್ಟಮುಡಿ ಜಂಕ್ಷನ್‌ನಲ್ಲಿ ಬೈಕ್‌ಗೆ ಡಿಕ್ಕಿ ಹೊಡೆದಿದೆ.

ಈ ಸಂಬಂಧ ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಿ.ಕೆ.ಬೊಮ್ಮಯ್ಯ ನಿಧನ



ಕುಶಾಲನಗರ: ಪಟ್ಟಣದ ಬಾಪೂಜಿ ಬಡಾವಣೆ ನಿವಾಸಿ, ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ಡಿ.ಕೆ.ಬೊಮ್ಮಯ್ಯ(79) ಬುಧವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗುರುವಾರ ಸಂಜೆ ಸ್ವಗ್ರಾಮ ಸೋಮವಾರಪೇಟೆ ಬಳಿಯ ದೊಡ್ಡಮಳ್ತೆ ಗ್ರಾಮದಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿರಾಜಪೇಟೆಯಲ್ಲಿ ಮಹಿಳಾ ವಿಚಾರಗೋಷ್ಠಿ



ವಿರಾಜಪೇಟೆ ಮಹಿಳಾ ಸಮಾಜ ಸಭಾಂಗಣದಲ್ಲಿ ನಡೆದ ಮಹಿಳಾ ವಿಚಾರಗೋಷ್ಠಿಯನ್ನು ವೈಜ್ಞಾನಿಕ ಪರಿಷತ್ ಕೊಡಗು ಜಿಲ್ಲಾಧ್ಯಕ್ಷೆ ವನಿತಾ ಚಂದ್ರಮೋಹನ್ ಉದ್ಘಾಟಿಸಿದರು.

ವಿರಾಜಪೇಟೆ, ಜ.8–ನಿಮ್ಮ ಆರೋಗ್ಯ, ನಿಮ್ಮ ಕೈಯಲ್ಲಿದೆ. ಯೋಗ ಮತ್ತು ಧ್ಯಾನದಿಂದ ಉತ್ತಮ ಆರೋಗ್ಯವಾಗಿರಲು ಸಾಧ್ಯ ಎಂದು ವೈಜ್ಞಾನಿಕ ಪರಿಷತ್ ಕೊಡಗು ಜಿಲ್ಲಾಧ್ಯಕ್ಷೆ ವನಿತಾ ಚಂದ್ರಮೋಹನ್ ಹೇಳಿದರು.

ಪಟ್ಟಣದ ಮಹಿಳಾ ಸಮಾಜ ಸಭಾಂಗಣದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬಿಸಿ ಟ್ರಸ್ಟ್ ವತಿಯಿಂದ ಮಹಿಳಾ ಜ್ಞಾನ ವಿಕಾಸ ಯೋಜನೆಯಡಿ ಆಯೋಜಿಸಿದ್ದ ತಾಲೂಕು ಮಟ್ಟದ ವಿಚಾರಗೋಷ್ಠಿ ಉದ್ಘಾಟಿಸಿ 'ಆರೋಗ್ಯವಂತ ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ' ಕುರಿತು ಮಾತನಾಡಿದ ಅವರು, ಮಹಿಳೆಯರು ಮನೆ ಕೆಲಸ ಮಾಡಿ ಕುಟುಂಬದ ಎಲ್ಲರ ಆರೋಗ್ಯ ಕಾಪಾಡುವ ಮೂಲಕ ಎಲ್ಲಾ ಕ್ಷೇತ್ರಗಳಲ್ಲೂ ಸೇವೆ ಸಲ್ಲಿಸುತ್ತಿದ್ದಾರೆ. ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಬೇಕು ಎಂದರು.

ಜಿಲ್ಲಾ ಪಂಚಾಯಿತಿ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷೆ ಮನೆಯಪಂಡ ಕಾಂತಿ ಸತೀಶ್ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವಿರಾಜಪೇಟೆಗೆ ಮೊದಲ ಬಾರಿ ಬಂದಾಗ ನಾವು ಪ್ರೋತ್ಸಾಹ ನೀಡಿದ್ದೇವು. ಅಂದು ಚೆಕ್‌ಗೆ ಸಹಿ ಮಾಡಲು ಬಾರದೆ ಇದ್ದ ಗ್ರಾಮೀಣ ಮಹಿಳೆಯರು ಇಂದು ಬ್ಯಾಂಕ್, ಕಚೇರಿಗಳ ವ್ಯವಹಾರವನ್ನು ಮಾಡುತ್ತಿದ್ದಾರೆ. ಧರ್ಮಸ್ಥಳ ಸಂಘದಿಂದ ಸೌಲಭ್ಯ ಬಳಸಿಕೊಂಡು ಅನೇಕ ಕುಟುಂಬಗಳು ಅಭಿವೃದ್ಧಿ ಹೊಂದಿವೆ ಹೆಣ್ಣೊಂದು ಕಲಿತರೆ ಕುಟುಂಬವೇ ಕಲಿತಂತೆ, ಹೆಣ್ಣು ಸಮಾಜದ ಕಣ್ಣು ಎಂದು ಹೇಳಿದರು.

ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕಿ ಲೀಲಾವತಿ ಮಾತನಾಡಿ, ಮನಿಷ್ಯನಿಗೆ ಮೊದಲು ಬೇಕಾಗಿರುವುದು ಆರೋಗ್ಯ, ಸಮಾಜದಲ್ಲಿ ಬಡಹೆಣ್ಣು ಮಕ್ಕಳಿಗೆ ಸೌಲಭ್ಯ ಒದಗಿಸುವಂತಾಗಬೇಕು ಎಂದರು.

ಅರುವತೋಕ್ಲು ಸರ್ವದೈವತಾ ಶಾಲೆ ಮುಖ್ಯ ಶಿಕ್ಷಕಿ ಮನೆಯಪಂಡ ಶೀಲಾ ಬೋಪಣ್ಣ ಮಾತನಾಡಿ, ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಪೋಷಕರ ಪಾತ್ರ ಕುರಿತು ತಿಳಿಸಿದರು. ಗೋಷ್ಠಿಯಲ್ಲಿ ಯೋಜನೆಯ ತಾಲೂಕು ಅಧಿಕಾರಿ ಬಿ.ದಿನೇಶ್, ಯೋಜನೆ ಕೃಷಿ ಅಧಿಕಾರಿ ವಸಂತ, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಆರ್.ಶ್ರೇಯಾ, ವಲಯ ಮೇಲ್ವಿಚಾರಕ ಶಿವಕುಮಾರ್, ತಾಲೂಕಿನ ಮಹಿಳಾ ಜ್ಞಾನ ವಿಕಾಸ, ಸೇವಾ ಪ್ರತಿನಿಧಿಗಳು ಹಾಜರಿದ್ದರು.

ನಾಟ್ಯಂಜಲಿ ನೃತ್ಯ ಸಂಸ್ಥೆಗೆ ಶೇ.100 ಫಲಿತಾಂಶ



ಭರತ ನಾಟ್ಯ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ವಿರಾಜಪೇಟೆ ನಾಟ್ಯಂಜಲಿ ನೃತ್ಯ ಸಂಸ್ಥೆ ವಿದ್ಯಾರ್ಥಿಗಳು.

ವಿರಾಜಪೇಟೆ: ಗಂಗೂಬಾಯಿ ಹಾನಗಲ್ ಯೂನಿವರ್ಸಿಟಿ ವತಿಯಿಂದ ಅಕ್ಟೋಬರ್‌ನಲ್ಲಿ ನಡೆದ ಭರತ ನಾಟ್ಯ ಪರೀಕ್ಷೆಯಲ್ಲಿ ವಿರಾಜಪೇಟೆ ನಾಟ್ಯಂಜಲಿ ನೃತ್ಯ ಸಂಸ್ಥೆಗೆ ಶೇ.100ರಷ್ಟು ಫಲಿತಾಂಶ ಬಂದಿದೆ.

ಸಂಸ್ಥೆ ವಿದ್ಯಾರ್ಥಿಗಳಾದ ಮನ್ವಿತಾ, ಜಾನ್ವಿಶೆಟ್ಟಿ, ಅಶ್ಮಯ ಸಚಿನ್ ಹಾಗೂ ಪ್ರಿಂಯಾ ಪೊನ್ನಮ್ಮ ಉತ್ತಮ ಅಂಕ ಗಳಿಸಿದ್ದಾರೆ. ಸಂಸ್ಥೆ ಹಲವಾರು ವರ್ಷಗಳಿಂದ ಸತತವಾಗಿ ಶೇ.100ರಷ್ಟು ಫಲಿತಾಂಶ ಪಡೆಯುವ ಮೂಲಕ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕರಾದ ಗುರು ಹೇಮಾವತಿ, ಕಾಂತ್‌ರಾಜ್ ಹಾಗೂ ಗುರು ಕಾವ್ಯಶ್ರೀ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕುವೆಂಪು ಎಲ್ಲಾ ಯುಗಗಳಿಗೂ ಸಲ್ಲುವ ಶ್ರೇಷ್ಠ ಕವಿ

• ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸ್ಮರಣೆ • ಚಾ.ನಗರದಲ್ಲಿ ಕುವೆಂಪು ಜಯಂತಿ ಆಚರಣೆ

ಚಾಮರಾಜನಗರ, ಜ.8–ರಾಷ್ಟ್ರಕವಿ ಕುವೆಂಪು ಅವರು ಇಡೀ ಜಗತ್ತಿಗೆ ವಿಶ್ವಮಾನವ ಸಂದೇಶ ನೀಡುವ ಮೂಲಕ ಎಲ್ಲಾ ಯುಗಗಳಿಗೂ ಸಲ್ಲುವ ಶ್ರೇಷ್ಠ ಕವಿಯಾಗಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸ್ಮರಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಕುವೆಂಪು ಅವರ ಜಯಂತಿ ಆಚರಣೆ ಕಾರ್ಯಕ್ರಮ ಉದ್ಘಾಟಿಸಿ, ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದ ಅವರು, ಕನ್ನಡದಲ್ಲಿ ಅನೇಕ ಮೌಲ್ಯಯುತ ಕಥೆ, ಕವನ, ಕಾದಂಬರಿಗಳನ್ನು ರಚಿಸುವ ಮೂಲಕ ಕುವೆಂಪು ಅವರು ಕನ್ನಡ ಭಾಷೆ, ಸಂಸ್ಕೃತಿಗೆ ಅಪಾರವಾದ ಕೊಡುಗೆ ನೀಡಿದ್ದಾರೆ. ಅವರು ಕಥೆ, ಕವನಗಳಿಗೆ ಸೀಮಿತವಾಗಿರದೇ ಹಲವಾರು ವಿಮರ್ಶಾತ್ಮಕ ಹಾಗೂ ವೈಚಾರಿಕತೆಯ ಲೇಖನಗಳನ್ನು ರಚಿಸಿದ್ದಾರೆ. ಪುಟ್ಟಪ್ಪ ಅವರು ನೀಡಿದ ವಿಶ್ವಮಾನವ ಸಂದೇಶ ಇಂದಿಗೂ ಪ್ರಸ್ತುತವಾಗಿದೆ ಎಂದು ಅಭಿಪ್ರಾಯಪಟ್ಟರು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಕನ್ನಡದ ಅತ್ಯಂತ ಶ್ರೇಷ್ಠ ಕವಿಗಳಲ್ಲಿ ಕುವೆಂಪು ಒಬ್ಬರಾಗಿದ್ದಾರೆ. ಅವರ ವಿಶ್ವಮಾನವ ಸಂದೇಶ ಸಾರ್ವಕಾಲಿಕವಾಗಿದೆ. ಕುವೆಂಪು ಅವರ ಅರ್ಥಪೂರ್ಣ ಚಿಂತನೆ, ಆದರ್ಶಗಳನ್ನು ಅನುಸರಿಸಿ ಪಾಲಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.



ಚಾಮರಾಜನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕುವೆಂಪು ಅವರ ಭಾವಚಿತ್ರಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಪುಷ್ಪಾರ್ಚನೆ ನೆರವೇರಿಸಿದರು.

ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥ ಪ್ರಸನ್ನ ಮಾತನಾಡಿ, ಕುವೆಂಪು 20ನೇ ಶತಮಾನದ ಕನ್ನಡದ ಬಹುದೊಡ್ಡ ಕವಿಯಾಗಿದ್ದಾರೆ. ಆಡು ಮುಟ್ಟದ ಸೊಪ್ಪಿಲ್ಲ, ಕುವೆಂಪು ಅವರು ರಚಿಸದ ಕಥೆ, ಕವನಗಳಿಲ್ಲ ಎಂದರೇ ತಪ್ಪಾಗಲಾರದು. ಕಥೆ, ಕವಿತೆ, ಕಾದಂಬರಿ, ನಾಟಕಕಾರ, ವಿಮರ್ಶಕರು, ಆತ್ಮಕಥನ, ಜೀವನ ಚರಿತ್ರೆ, ವೈಚಾರಿಕ ಲೇಖನಗಳನ್ನು ರಚಿಸಿ ಕನ್ನಡ ಸಾಹಿತ್ಯದಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ. ಇವೆಲ್ಲವೂ ಈ ದೇಶದ ಸಾಮಾಜಿಕ ಹಿನ್ನೆಲೆಯಲ್ಲಿ ರಚಿತವಾಗಿವೆ ಎಂದು ತಿಳಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಜಿಲ್ಲಾಧಿಕಾರಿ ಶಿಲ್ಪನಾಗ್ ಸಂವಿಧಾನ ಪೀಠಿಕೆ ಬೋಧಿಸಿದರು. ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪಿ.ಮರಿಸ್ವಾಮಿ, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಪಂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಟಿ.ಹೀರಾಲಾಲ್, ಬಿಆರ್‌ಟಿ ಉಪಅರಣ್ಯ ಸಂರಕ್ಷಣಾಧಿಕಾರಿ ಶ್ರೀಪತಿ, ಮಹದೇಶ್ವರ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಸಂತೋಷ್ ಕುಮಾರ್, ಕಾವೇರಿ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸುರೇಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಉದಯ್ ಕುಮಾರ್, ವಿವಿಧ ಕನ್ನಡಪರ ಸಂಘಟನೆ, ರೈತ ಮುಖಂಡರು ಇದ್ದರು.

> ಕುವೆಂಪು ಅವರು ರಾಮಾಯಣದಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿಗತ ಪಾತ್ರಗಳ ಮೌಲ್ಯವನ್ನು ಅತ್ಯುತ್ತಮವಾಗಿ ಜನರಿಗೆ ಮನವರಿಕೆ ಮಾಡಿದ್ದಾರೆ. ಸ್ತ್ರೀಪರ ಧೋರಣೆಗೆ ಮಹತ್ವ ನೀಡಿದ್ದಾರೆ. ರಾಮಾಯಣದಲ್ಲಿ ತಂದೆ–ತಾಯಿ, ಅಣ್ಣ–ತಮ್ಮ, ಸಹೋದರತ್ವದ ಪ್ರಾಮುಖ್ಯತೆ ತಿಳಿಸಿ ಸಾಮಾನ್ಯದಲ್ಲಿ ಅಸಾಮಾನ್ಯತೆ ಕಂಡವರು ಕುವೆಂಪು. ಓ ನನ್ನ ಚೇತನ, ಆಗು ನೀ ಅನಿಕೇತನ ಕವಿತೆ ರಚಿಸಿ ಕನ್ನಡಕ್ಕೆ ವಿಶ್ವಮಾನ್ಯತೆ ತಂದುಕೊಟ್ಟವರು ಕುವೆಂಪು.
>
> –ಮಂಜುನಾಥ ಪ್ರಸನ್ನ, ಡಿಡಿಪಿಯು

ಅಮಾಯಕನಿಗೆ ವಂಚಿಸಿ ಎಟಿಎಂನಲ್ಲಿ 50 ಸಾವಿರ ಲಪಟಾಯಿಸಿದ್ದ ಆರೋಪಿ ಬಂಧನ



ಎಟಿಎಂನಲ್ಲಿ ಕಾರ್ಡ್ ಬದಲಿಸಿ ಹಣ ಡ್ರಾ ಮಾಡಿದ್ದ ಆರೋಪಿಯನ್ನು ಗುಂಡ್ಲುಪೇಟೆ ಪಟ್ಟಣ ಠಾಣೆ ಪೊಲೀಸರು ಬಂಧಿಸಿರುವುದು.

ಗುಂಡ್ಲುಪೇಟೆ: ಎಟಿಎಂನಲ್ಲಿ ಹಣ ತೆಗೆಯಲು ಸಹಾಯ ಕೇಳಿದ ಅಮಾಯಕನಿಗೆ ವಂಚಿಸಿ ಆತನ ಖಾತೆಯಲ್ಲಿದ್ದ 50 ಸಾವಿರ ರೂ. ಲಪಟಾಯಿಸಿದ್ದ ಆರೋಪಿಯನ್ನು ಪಟ್ಟಣ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಚಾಮರಾಜನಗರ ತಾಲೂಕಿನ ತಮ್ಮಡಹಳ್ಳಿ ಗ್ರಾಮದ ಲೋಕೇಶ್ ಅಲಿಯಾಸ್ ಚಿಕ್ಕಗುಂಡು(32) ಬಂಧಿತ. ತಾಲೂಕಿನ ಬೆಟ್ಟಹಳ್ಳಿ ಗ್ರಾಮದ ದಾಸಾಚಾರಿ ಡಿ.29ರಂದು ಪಟ್ಟಣದ ಚಾಮರಾಜನಗರ ರಸ್ತೆಯ ಎಸ್‌ಬಿಐನ ಎಟಿಎಂನಲ್ಲಿ ಹಣ ಡ್ರಾ ಮಾಡಲು ಬಾರದೆ ಈತನ ನೆರವು ಕೇಳಿದ್ದರು.

ಬಳಿಕ ಈತ ಕಾರ್ಡ್ ಹಾಗೂ ಎಟಿಎಂ ಪಿನ್ ನಂಬರ್ ಪಡೆದು ಯಾಕೋ ಹಣ ಬರುತ್ತಿಲ್ಲ ಎಂದು ಹೇಳಿ ದಾಸಾಚಾರಿಗೆ ಬೇರೆ ಕಾರ್ಡ್ ನೀಡಿದ್ದ. ಇದರ ಬಗ್ಗೆ ಅರಿವಿಲ್ಲದ ದಾಸಾಚಾರಿ ಹೊರಗೆ ಹೋದ ನಂತರ 50 ಸಾವಿರ ರೂ. ಡ್ರಾ ಮಾಡಿದ್ದಾನೆ.

ಬಳಿಕ ಮೊಬೈಲಿಗೆ ಹಣ ತೆಗೆದಿರುವ ಸಂದೇಶ ಬಂದ ಹಿನ್ನೆಲೆಯಲ್ಲಿ ದಾಸಾಚಾರಿ ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಕೂಡಲೇ ಕಾರ್ಯಪ್ರವೃತ್ತರಾದ ಪೊಲೀಸರು ಎಟಿಎಂ ಕೇಂದ್ರ ಕ್ಯಾಮರಾದಲ್ಲಿ ರೆಕಾರ್ಡ್ ಆಗಿದ್ದ ಫೋಟೋ ಹಾಗೂ ಮೊಬೈಲ್ ಟವರ್ ಆಧಾರದ ಮೇಲೆ ಆರೋಪಿಯನ್ನು ಪತ್ತೆಹಚ್ಚಿ ಬಂಧಿಸಿದ್ದಾರೆ.

ಪ್ರಯಾಣಿಕರಿಗೆ ಬ್ಯಾಗ್ ವಾಪಸ್ ನೀಡಿದ ಅಧಿಕಾರಿ



ತೆರಕಣಾಂಬಿ ಬಸ್ ನಿಲ್ದಾಣದಲ್ಲಿ ಬಿಟ್ಟು ಹೋಗಿದ್ದ ಬ್ಯಾಗ್ ಅನ್ನು ಪ್ರಯಾಣಿಕರಿಗೆ ಸಾರಿಗೆ ನಿಯಂತ್ರಣಾಧಿಕಾರಿ ವಿಠಲ್ ಮರಳಿ ನೀಡಿದರು.

ಗುಂಡ್ಲುಪೇಟೆ, ಜ.8–ತಾಲೂಕಿನ ತೆರಕಣಾಂಬಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರು ಬಿಟ್ಟು ಹೋಗಿದ್ದ ಬ್ಯಾಗ್ ಅನ್ನು ಅವರಿಗೆ ಸುರಕ್ಷಿತವಾಗಿ ತಲುಪಿಸುವ ಮೂಲಕ ಸಾರಿಗೆ ನಿಯಂತ್ರಣಾಧಿಕಾರಿ ಪ್ರಾಮಾಣಿಕತೆ ಮೆರೆದಿದ್ದಾರೆ.

ಬುಧವಾರ ಚಾಮರಾಜನಗರ ತಾಲೂಕಿನ ಮಂಗಲ ಹೊಸೂರು ಗ್ರಾಮದ ಶಿವಮ್ಮ ಅವರು ಅಗತ್ಯವಸ್ತುಗಳಿದ್ದ ಬ್ಯಾಗ್ ಅನ್ನು ತೆರಕಣಾಂಬಿ ಬಸ್ ನಿಲ್ದಾಣದಲ್ಲಿ ಬಿಟ್ಟುಹೋಗಿದ್ದರು. ನಂತರ ಬ್ಯಾಗ್ ಅನ್ನು ಟ್ರಾಫಿಕ್ ಕಂಟ್ರೋಲರ್ ಎಸ್. ವಿಠಲ್ ಪರಿಶೀಲಿಸಿ, ಆಧಾರ್ ಕಾರ್ಡ್‌ನಲ್ಲಿದ್ದ ಮೊಬೈಲ್ ನಂಬರಿಗೆ ಕರೆ ಮಾಡಿ ಮಾಹಿತಿ ನೀಡಿದರು. ಬಳಿಕ ಬಸ್ ನಿಲ್ದಾಣಕ್ಕೆ ಬಂದ ಶಿವಮ್ಮಗೆ ಬ್ಯಾಗ್ ಅನ್ನು ಮರಳಿ ನೀಡಿದರು.

ಉತ್ತಮ ಸಮಾಜಕ್ಕಾಗಿ ವಕೀಲರು ಸೇವೆಗೆ ಮುಂದಾಗಬೇಕು



ಚಾಮರಾಜನಗರ ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ವಕೀಲ ಸ್ನೇಹಿ, ನಮ್ಮ ವಕೀಲರ ಬಳಗದ ಡೈರಿಯನ್ನು ನ್ಯಾಯಾಧೀಶೆ ಬಿ.ಎಸ್.ಭಾರತಿ ಬಿಡುಗಡೆಗೊಳಿಸಿದರು.

ಚಾಮರಾಜನಗರ, ಜ.8–ಸಮಾಜದಲ್ಲಿ ವಕೀಲರ ಪಾತ್ರ ಅತ್ಯಂತ ಹಿರಿದಾಗಿದೆ. ಉತ್ತಮ ಸಮಾಜ ನಿರ್ಮಾಣಕ್ಕೆ ವಕೀಲರು ಸೇವೆ ಸಲ್ಲಿಸಲು ಮುಂದಾಗಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಬಿ.ಎಸ್.ಭಾರತಿ ಹೇಳಿದರು.

ನಗರದ ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ವಕೀಲ ಸ್ನೇಹಿ, ನಮ್ಮ ವಕೀಲರ ಬಳಗದ ಡೈರಿ ಮತ್ತು ಕ್ಯಾಲೆಂಡರ್ ಬಿಡುಗಡೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ವಕೀಲರು ಸಮಾಜದ ಪ್ರಮುಖ ಭಾಗವಾಗಿದ್ದಾರೆ. ಸಮಾಜಮುಖಿ ಚಿಂತನೆಗಳಿಗೆ ಪೂರಕವಾಗಿ ಕಾನೂನು ಬದ್ಧ ಕೆಲಸ ನಿರ್ವಹಿಸಬೇಕು. ವೃತ್ತಿ ಪರತೆ ಜೊತೆ ಸಂವಿಧಾನ ಆಶಯಗಳನ್ನು ಸಹಕಾರಿಯಾಗಿಸಬೇಕು. ವಕೀಲರಲ್ಲಿ ಬದ್ಧತೆ, ಪ್ರಬುದ್ಧತೆ, ಪ್ರಾಮಾಣಿಕತೆ, ದಕ್ಷತೆ ಹಾಗೂ ಹೊಣೆಗಾರಿಕೆ ಮುಖ್ಯ ಎಂದು ತಿಳಿಸಿದರು.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಸ್.ಜೆ.ಕೃಷ್ಣ ಮಾತನಾಡಿ, ವಕೀಲ ವೃತ್ತಿಯಲ್ಲಿ ನಿಷ್ಠೆ ಮುಖ್ಯ. ವಕೀಲರು ವೃತ್ತಿಯಲ್ಲಿ ಎಂದು ತಾಳ್ಮೆ ಕಳೆದುಕೊಳ್ಳಬಾರದು. ಹಿರಿಯ ವಕೀಲರ ಜೊತೆ ಚರ್ಚಿಸಿ ಸಲಹೆ ಮತ್ತು ಮಾರ್ಗದರ್ಶನ ಪಡೆದು ಕೊಳ್ಳುವ ಮೂಲಕ ವೃತ್ತಿ ನೈಪುಣ್ಯತೆ ಹೆಚ್ಚಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ವಕೀಲರ ಸಂಘದ ನಿಕಟಪೂರ್ವ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್, ಸರ್ಕಾರಿ ವಕೀಲ ಆರ್.ಅರುಣ್‌ಕುಮಾರ್ ಮಾತನಾಡಿದರು. ಇದೇ ವೇಳೆ ನ್ಯಾಯಾಧೀಶರಾದ ಬಿ.ಎಸ್.ಹೊನ್ನಸ್ವಾಮಿ, ಆರ್.ಸುನಿಲ್, ಈಶ್ವರ್, ನಿವೇದಿತಾ ಅವರನ್ನು ಗೌರವಿಸಲಾಯಿತು. ಬಳಿಕ ಗಾಯಕರಾದ ಡಾ.ಸುಗಂಧ ರಾಜ್, ಜ.ಸುರೇಶ್ ನಾಗ್, ಪೊಲೀಸ್ ಹರಿ ಪ್ರಸಾದ್, ಮಯೂರ್, ವಕೀಲ ಮಹಾಲಿಂಗ ಗಿರ್ಗಿ ಅವರಿಂದ ಗಾಯನ ಕಾರ್ಯಕ್ರಮ ನಡೆಯಿತು. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್.ನಂಜಯ್ಯ, ಪ್ರಧಾನ ಕಾರ್ಯದರ್ಶಿ ಆರ್.ರಂಗಸ್ವಾಮಿ, ವಕೀಲರು ಹಾಜರಿದ್ದರು.

ಹಳೆಯ ವಿದ್ಯಾರ್ಥಿಗಳಿಗೆ ಸೂಚನೆ

ಚಾ.ನಗರ: ನಗರದ ರಾಮಸಮುದ್ರದಲ್ಲಿರುವ ಸಿ.ಆರ್.ಬಾಲರಪಟ್ಟಣ ಶಾಲೆಯನ್ನು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರ ಅನುಮತಿ ಮೇರೆಗೆ ಮುಚ್ಚಲಾಗಿದೆ. ಈ ಶಾಲೆಯಲ್ಲಿ ಪ್ರಾರಂಭದಿಂದ ಶಾಲೆ ಮುಚ್ಚುವ ತನಕ ಓದಿದ ಎಲ್ಲಾ ವಿದ್ಯಾರ್ಥಿಗಳ ಶಾಲಾ ದಾಖಲಾತಿಗಳನ್ನು ಚಾಮರಾಜನಗರದ ಸರ್ಕಾರಿ ಪದವಿಪೂರ್ವ ಬಾಲಕರ ಕಾಲೇಜಿ(ಪ್ರೌಢಶಾಲಾ ವಿಭಾಗ)ಗೆ ವರ್ಗಾಯಿಸಲಾಗಿದೆ. ಈ ಶಾಲೆಯಲ್ಲಿ ಓದಿದ ವಿದ್ಯಾರ್ಥಿಗಳು ದಾಖಲಾತಿಗಳು ಬೇಕಾದಲ್ಲಿ ಬಾಲಕರ ಕಾಲೇಜಿನ ಪ್ರೌಢಶಾಲಾ ವಿಭಾಗನ್ನು ಸಂಪರ್ಕ ಮಾಡುವಂತೆ ಸಿ.ಆರ್.ಬಾಲರಪಟ್ಟಣ ವಿದ್ಯಾಸಂಸ್ಥೆ ಪ್ರಕಟಣೆಯಲ್ಲಿ ಮನವಿ ಮಾಡಿದೆ.

ಶ್ರೀನಿವಾಸ್ ಬಿಳಿಗಿರಿರಂಗನಬೆಟ್ಟದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ

ಯಳಂದೂರು, ಜ.8–ತಾಲೂಕಿನ ಪ್ರಸಿದ್ಧ ಬಿಳಿಗಿರಿರಂಗನಬೆಟ್ಟದ ಶ್ರೀರಂಗನಾಥಸ್ವಾಮಿ ದೇಗುಲ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾಗಿ ಜೆ.ಶ್ರೀನಿವಾಸ್ ಅವಿರೋಧ ಆಯ್ಕೆಯಾದರು.

ಬುಧವಾರ ಪಟ್ಟಣದ ಬಿಳಿಗಿರಿರಂಗನಾಥಸ್ವಾಮಿ ದೇಗುಲ ಕಚೇರಿಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ಮೋಹನ್ ಕುಮಾರ್ ನೇತೃತ್ವದಲ್ಲಿ ನಡೆದ ಸಮಿತಿ ಮೊದಲ ಸಭೆಯಲ್ಲಿ ಜೆ.ಶ್ರೀನಿವಾಸ್ ಅವರನ್ನು ಎಲ್ಲರೂ ಒಮ್ಮತದಿಂದ ಆಯ್ಕೆ ಮಾಡಿದರು. ಸಮಿತಿಯಲ್ಲಿ 9 ಸದಸ್ಯರು ಇದ್ದಾರೆ.

ನೂತನ ಮಾತನಾಡಿದ ಶ್ರೀನಿವಾಸ್, ಬಿಳಿಗಿರಿರಂಗನಬೆಟ್ಟದ ದೇವಸ್ಥಾನಕ್ಕೆ ಪೌರಾಣಿಕ ಹಿನ್ನೆಲೆ ಇದೆ. ಈ ದೇಗುಲ ಅತ್ಯಂತ ಪುರಾತನ ದೇಗುಲವಾಗಿದ್ದು, ಪ್ರತಿವರ್ಷ ಲಕ್ಷಾಂತರ ಭಕ್ತರು ಭೇಟಿ ನೀಡುತ್ತಾರೆ. ಅಲ್ಲದೆ ವರ್ಷದಲ್ಲಿ ಎರಡು ಬಾರಿ ರಥೋತ್ಸವ ನಡೆಯುತ್ತದೆ. ಭಕ್ತರಿಗೆ ಸೌಕರ್ಯ ಒದಗಿಸಲು ಹಾಗೂ ದೇಗುಲದ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು, ದೇವಸ್ಥಾನ ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಗುಂಬಳ್ಳಿ ರಾಜಣ್ಣ, ಕೇತಮ್ಮ, ಸ್ಫೂರ್ತಿ, ವೆಂಕಟರಾಮು, ಸಿದ್ದರಾಜು, ಎಂ.ಸುರೇಶ್, ವಿ.ನಾರಾಯಣಸ್ವಾಮಿ, ಅರ್ಚಕ ರವಿಕುಮಾರ್, ಪಾರುಪತ್ತೇದಾರ ರಾಜು, ಯರಿಯೂರು ನಾಗೇಂದ್ರ, ಕೃಷಿಕ ಸಮಾಜದ ಅಧ್ಯಕ್ಷ ಗೌಡಹಳ್ಳಿ ರವಿ, ಟಿಎಪಿಸಿಎಂಎಸ್ ನಿರ್ದೇಶಕ ಪುಟ್ಟರಾಜು, ವಿಜಯ್ ಅನೇಕರು ಇದ್ದರು.



ಬಿಳಿಗಿರಿರಂಗನಬೆಟ್ಟದ ದೇಗುಲದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾಗಿ ಆಯ್ಕೆಯಾದ ಜೆ.ಶ್ರೀನಿವಾಸ್ ಅವರನ್ನು ಸದಸ್ಯರು ಅಭಿನಂದಿಸಿದರು.

ಕೆ.ರಾಜು ನಿಧನ



ಕೊಳ್ಳೇಗಾಲ, ಜ.8–ಪಟ್ಟಣದ ಲೋಕೋಪಯೋಗಿ ಇಲಾಖೆ ಕಚೇರಿಯ ವಾಟರ್‌ಮನ್ ಹಾಗೂ ಸರ್ಕಾರಿ ನೌಕರರ ಸಂಘದ ತಾಲೂಕು ನಿರ್ದೇಶಕ ಕೆ.ರಾಜು (46) ಅನಾರೋಗ್ಯದಿಂದ ಬುಧವಾರ ನಿಧನರಾದರು.

ಮೃತರು ತಾಯಿ, ಪತ್ನಿ ನಾಗಮಾದಮ್ಮ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗುರುವಾರ ಬೆಳಗ್ಗೆ ಮೃತರ ಸ್ವಗ್ರಾಮ ಪೊನ್ನಾಚಿಯಲ್ಲಿ ಅಂತ್ಯಕ್ರಿಯೆ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷರು, ನಿರ್ದೇಶಕರು, ಲೋಕೋಪಯೋಗಿ ಇಲಾಖೆ ಸಿಬ್ಬಂದಿ ಸಂತಾಪ ಸೂಚಿಸಿದರು.

ಮೈಸೂರು ಮಿತ್ರ

ಐವರು ಸಾಧಕರಿಗೆ ಲಯನ್ಸ್‌ನಿಂದ ಸನ್ಮಾನ



ವಿವಿಧ ಕ್ಷೇತ್ರದ ಐದು ಮಂದಿ ಸಾಧಕರನ್ನು ಲಯನ್ಸ್ ಕ್ಲಬ್ ಆಫ್ ಮೈಸೂರು ಪರಿವರ್ತನದ ವತಿಯಿಂದ ಬುಧವಾರ ಸನ್ಮಾನಿಸಲಾಯಿತು.

ಮೈಸೂರು, ಜ.8(ಎಸ್‌ಪಿಎನ್)– ವಿವಿಧ ಕ್ಷೇತ್ರದ ಐದು ಮಂದಿ ಸಾಧಕರನ್ನು ಲಯನ್ಸ್ ಕ್ಲಬ್ ಆಫ್ ಮೈಸೂರು ಪರಿವರ್ತನದ ವತಿಯಿಂದ ಬುಧವಾರ ಸನ್ಮಾನಿಸಲಾಯಿತು.

ಮೈಸೂರು ಓವಲ್ ಮೈದಾನದ ಸಮೀಪದ ಲಯನ್ಸ್ ಕ್ಲಬ್ ಕಚೇರಿಯಲ್ಲಿ ವಿವಿಧ ಕ್ಷೇತ್ರದ ಸಾಧಕರಾದ ಕೃಷಿ ವಿಜ್ಞಾನಿ ಡಾ.ವಸಂತಕುಮಾರ್ ತಿಮ್ಮಕಾಪುರ, ಹಿರಿಯ ಪತ್ರಕರ್ತ ಕೆ.ನರಸಿಂಹಮೂರ್ತಿ, ಗುಂಡ್ಲುಪೇಟೆಯ ಸಾಮಾಜಿಕ ಹೋರಾಟಗಾರ ಸುಭಾಷ್ ಮಾಡ್ರಹಳ್ಳಿ, ಮಂಡ್ಯ ಆರೋಗ್ಯ ಇಲಾಖೆಯ ಪುಟ್ಟಲಿಂಗಮ್ಮ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಮೈಸೂರು ಘಟಕದ ನಿರ್ದೇಶಕ ಪಿ.ರಾಘವೇಂದ್ರ (ಅಪುರಾ) ಅವರಿಗೆ ಲಯನ್ಸ್ ಎನ್ ಸುಬ್ರಹ್ಮಣ್ಯ ಅಭಿನಂದಿಸಿದರು.

ನಂತರ ಮಾತನಾಡಿದ ಅವರು, ಲಯನ್ಸ್ ಸಂಸ್ಥೆಗೆ ಸೇವಾ ಕ್ಷೇತ್ರದಲ್ಲಿ ನೂರು ವರ್ಷಗಳ ಇತಿಹಾಸವಿದೆ. ಇಲ್ಲಿ ಒಮ್ಮೆ ತೊಡಗಿಸಿಕೊಳ್ಳುವ ಸದಸ್ಯರು, ಮುಂದೆ, ಲಯನ್ಸ್ ಸಂಸ್ಥೆ ವಿವಿಧ ವಿಭಾಗದಲ್ಲಿ ಕೆಲಸ ಮಾಡಲು ಅವಕಾಶ ದೊರೆಯುತ್ತದೆ. ಸೇವಾಕ್ಷೇತ್ರದಲ್ಲಿ ತಾಳ್ಮೆಯಿಂದ ಕೆಲಸ ಮಾಡಬೇಕು ಎಂದು ಸದಸ್ಯರಿಗೆ ಸಲಹೆ ನೀಡಿದರು.

ಈ ವೇಳೆ ಲಯನ್ಸ್ ವಾಣಿ ಸುಬ್ರಹ್ಮಣ್ಯ, ಗೈಡಿಂಗ್ ಲಯನ್ ಪಿ.ಉಮಾಶಂಕರ್, ಕಾರ್ಯದರ್ಶಿ ಡಾ.ಕೃಷ್ಣಮೂರ್ತಿ ಚಮರಂ, ಲಯನ್ ಕ್ಲಬ್ ಅಧ್ಯಕ್ಷ ಎಚ್.ಎಂ.ಸತೀಶ, ಕಬ್ಲ ಸದಸ್ಯರಾದ ಸಿ.ಡಿ.ಕೃಷ್ಣ, ಕೆ.ಎನ್.ಪುನೀತ್‌ಕುಮಾರ್, ಬಿ.ಎಲ್.ಗಿರೀಶ್, ಗುರುದತ್ ಇತರರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಮೊಬೈಲ್ ಫೋನ್ ಶೋರೂಮ್‌ಗೆ ಕೆಲಸಕ್ಕೆ ಬೇಕಾಗಿದ್ದಾರೆ.
ಪಾರ್ಟ್ ಟೈಂ / ಫುಲ್ ಟೈಂ
ಸಂಪರ್ಕಿಸಿ.
9886409722

ಕಂಪ್ಯೂಟರ್ ರಿಪೇರಿ
ನಿರುದ್ಯೋಗ ಸ್ನೇಹಿತರೇ ಉಚಿತವಾಗಿ ಕಲಿಯಿರಿ Free... Free
ಮತ್ತು ಸಾಫ್ಟ್‌ವೇರ್ ಇನ್ಸ್ಟಾಲೇಷನ್ ಕೋರ್ಸ್
COMPUTER REPAIR
Software Installation Course
1) Free Course Material/Notes
2) Free OS & Latest Software
3) Antivirus/Data recovery
4) 30 hours Classes / 1 Monthly/Day
5) Windows 7,8,10 Instlation
6) Batch wise Classes
T&C Apply
Best Opportunity Start.. Your own Service Center
GRCTC Computer: 7760240575

ಹೊಸ ಮನೆ ಮಾರಾಟಕ್ಕಿದೆ
3 BHK, 30x40
EAST FACE
MUDA APPROVED
Near St. Joseph School, Yelwala, Mysore
Mob: 8217851695

HOUSE FOR SALE
Vijayanagar 3rd Stage [East Face] Ground Floor - Parking & Office Space
1st Floor - 2 BHK Home
2nd Floor - Duplex
3 BHK House
9972268624
9844401228

WE ARE HIRING
Qualification
PUC or Degree
Male / Female
9844184349

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ Security Field Officer ಬೇಕಾಗಿದ್ದಾರೆ. ಹಾಗೂ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಕೆ.ಆರ್.ಎಸ್. ವರುಣಾ, ಟೆರಿಷನ್ ಕಾಲೇಜು ಸುತ್ತಮುತ್ತ ಮತ್ತು ಬೋಗಾದಿ, ಮೈಸೂರಿನ ಸುತ್ತಮುತ್ತ
ವಿದ್ಯಾರ್ಹತೆ : SSLC PASS or Fail
9538886328

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಪ್ರವಾಸ
ಗುಜರಾತ್ ಪ್ರವಾಸ 8 ದಿನಗಳು
ದಿನಾಂಕ: 18–01–2025
ನೇಪಾಳ ಪ್ರವಾಸ 9 ದಿನಗಳು
ದಿನಾಂಕ: 18–01–2025
ಪೂರಿ ಜಗನ್ನಾಥ ಪ್ರವಾಸ 4 ದಿನಗಳು
ದಿನಾಂಕ: 21–01–2025
ಶಿರಡಿ ಪ್ರವಾಸ 3 ದಿನಗಳು
ದಿನಾಂಕ: 23–01–2025
ಶ್ರೀಲಂಕಾ ಪ್ರವಾಸ 8 ದಿನಗಳು
ದಿನಾಂಕ: 18–01–2025
6360146483, 9480843945

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲೋಮ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.
ಸೆಂಟ್ ಮೇರೀಸ್ ಆಸ್ಪತ್ರೆ
ಸಿಲ್ಕ್ ಫ್ಯಾಕ್ಟರಿ ಸರ್ಕಲ್
NIE ಕಾಲೇಜ್ ಪಕ್ಕ, ಮೈಸೂರು
9916908454

Experience female Telecaller required
Ready to work in financial services as recovery process 12K salary + attractive incentives. Fresher 10K. Work place: SLV Enterprises, 2060, K-46/3, 2nd Floor, Madvachar Road, Near 101 Ganapati Temple, Agrahara, Mysore-570 004. Contact:
Mob: 9945166614

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ಕಂಪನಿಯಲ್ಲಿ Security Gaurd ಬೇಕಾಗಿದ್ದಾರೆ.
ವೇತನ 19000/- 26days
ವಯೋಮಿತಿ: 22 to 50 ವರ್ಷದ ಒಳಗಡೆ ಇರಬೇಕು ಕೆಲಸದ ಸಮಯ 8 ಗಂಟೆಗಳು ವಿದ್ಯಾಭ್ಯಾಸ: SSLC, PUC, Degree, Pass or Fail
9741300222
9880116412

ವಧು–ವರರಿಗೆ ಸಂಪರ್ಕಿಸಿ
ಲಿಂಗಾಯಿತ, ಒಕ್ಕಲಿಗ, ಕುರುಬ SC/ST ಯಾವುದೇ ಜನಾಂಗದವರು, ವಿಚ್ಛೇದಿತರು ವಿಧವೆಯರು ಕೂಡಲೇ ಸಂಪರ್ಕಿಸಿ:
9591015713

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ., ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ್ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಬೇಕಾಗಿದ್ದಾರೆ
ಮೆಡಿಕಲ್ ಸ್ಟೋರ್‌ನಲ್ಲಿ ಅನುಭವವುಳ್ಳ, D.Pharma ಮಾಡಿರುವ ಹಾಗೂ ಕಂಪ್ಯೂಟರ್ ಜ್ಞಾನವುಳ್ಳ, ಹುಡುಗ/ಹುಡುಗಿಯರು /ಮಹಿಳೆಯರು ಬೇಕಾಗಿದ್ದಾರೆ.
9901080314

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ITI ಮಾಡಿರುವವರು ಬೇಕಾಗಿದ್ದಾರೆ. ಶ್ರೀರಂಗಪಟ್ಟಣ ಹತ್ತಿರ ಮೈಸೂರಿನ ಸುತ್ತಮುತ್ತ
8105913298

ತಕ್ಷಣ ಬೇಕಾಗಿದ್ದಾರೆ
ನಂಜನಗೂಡು, ತಾಂಡ್ಯ ಮತ್ತು ಕಡಕೊಳ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ & ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ: ಸೂಪರ್‌ವೈಸರ್: 25000+W/o (12 hrs)
ಗಾರ್ಡ್: 24000+W/o (12 hrs)
9620667819, 9620777819

ಸೈಟ್ ಮಾರಾಟಕ್ಕಿದೆ
ಬೋಗಾದಿ ರಿಂಗ್ ರಸ್ತೆಯಿಂದ 3 ಕಿ.ಮೀ. ದೂರದಲ್ಲಿರುವ ಬೈರವ ಎನ್‌ಕ್ಲೇವ್‌ನಲ್ಲಿ 30x40 ಅನುಮೋದಿತ ಮುಡಾ. ಬೋಗಾದಿ–ಗದ್ದಿಗೆ ಮುಖ್ಯ ರಸ್ತೆಯಿಂದ ಕೇವಲ 100 ಮೀ. ಬೆಲೆ: 4200 / ಪ್ರತಿ ಚದರ ಅಡಿಗೆ
8792235466, 8884616461

50x80, 3 ಸೈಟುಗಳು ಮಾರಾಟಕ್ಕಿದೆ
ಉತ್ತರ ಮುಖ, 40 ಅಡಿ ರಸ್ತೆ, ರೂಪನಗರ, ಎಸ್‌ಬಿಎಂ ಲೇಔಟ್‌ಗೆ ಹೊಂದಿಕೊಂಡಿದೆ. ಬೆಲೆ 4000 / ಪ್ರತಿ ಚದರ ಅಡಿ.
8884616461, 8792235466

ಸೈಟ್ ಮಾರಾಟಕ್ಕಿದೆ
20x40, 30x40, ಎಸ್‌ಬಿಎಂ ಲೇಔಟ್ ಬೋಗಾದಿ, ರೈಲ್ವೇ ಲೇಔಟ್ ಹತ್ತಿರ. ಬೆಲೆ: 4600 / ಪ್ರತಿ ಚದರ ಅಡಿಗೆ.
8792235466, 8884616461

ಕೆಬಿಎಲ್ ಗಾರ್ಡನಿಯಾ ಲೇಔಟ್‌ನಲ್ಲಿ
60 ಅಡಿ ರಸ್ತೆಯಲ್ಲಿ 45x60 ವಾಣಿಜ್ಯ ಸೈಟ್ ಮಾರಾಟಕ್ಕಿದೆ. ವಿಜಯನಗರ 4ನೇ ಹಂತಕ್ಕೆ ಹೊಂದಿಕೊಂಡಿದೆ. ಪ್ರತಿ ಚದರ ಅಡಿಗೆ 4750. ಬೆಲೆ: 1.25 ಕೋಟಿ.
8884616461, 8792235466

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಹತ್ತಿರ 8 ಗಂಟೆ ಶಿಫ್ಟ್‌ನಲ್ಲಿ ಕೆಲಸ ಮಾಡುವ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ವೇತನ ತಿಂಗಳಿಗೆ 17500 ರೂ.ಗಳು ಹಾಗೂ ವಿಜಯನಗರ ಮೊದಲನೆ ಹಂತ ರೆಗ್ಯೂಲರ್ ರಾತ್ರಿ ಕೆಲಸ ಮಾಡಲು (12 ಗಂಟೆ) ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ವೇತನ 12000 ರೂ.ಗಳು. ಸಂಪರ್ಕಿಸಿ:
9731976148

ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ (ಸಂಬಳ 10,000)
Field Executives
ಬೇಕಾಗಿದ್ದಾರೆ. (ಸಂಬಳ: 15000)
ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ
8150005111

ತೇಜಸ್ವಿನಿ ಟೂರಿಸ್ಟ್
17–3–2025 10 ದಿನ, ಕಾಶಿ, ಅಯೋಧ್ಯ, ಗಯಾ ಇತ್ಯಾದಿ,
20–4–2025 18 ದಿನ ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶ
2–4–2025 ಕನ್ಯಾಕುಮಾರಿ, ರಾಮೇಶ್ವರ, ಒಟ್ಟು 16 ಸ್ಥಳಗಳು ಇತ್ಯಾದಿ
5–5–2025 ನೇಪಾಳ, ಮುಕ್ತಿನಾಥ, ಮನೋಕಾಮಿನ 10 ಸ್ಥಳಗಳು ಇತ್ಯಾದಿ
9379792644

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

RENT
A Fully Furnished Vegetarian Restaurant and Homestay with 6 Rooms in Vidyaranyapuram, Mysore.
CONTACT:
99020 35175

ಉದ್ಯೋಗ ಅವಕಾಶ
ಬಿಡುವಿನ ವೇಳೆ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ಜೊತೆಗೆ ಊಟ, ವಸತಿಯೊದಗಿಸಲಾಗುತ್ತದೆ ಸಂಬಳ – ರೂ. 15200 – 86,100
7337645977, 7892046990

FOR SALE
1. Sites @ Bogadi Near Rainbow School
Including @ Registration 20L
2. 30x40 Sites @ JnanaBharathi Layout, JP Nagar
3. 40x60 West Facing Site @ Sharada Layout JP Nagar.
4. 30x40, Sites Attach to Brahmins Layout, Just 5 Kms from Ring Road@Just 20 Lakh
PRAKRUTHI PROPERTIES
95386 90359, 90359 90359

ವಧು ಬೇಕಾಗಿದ್ದಾರೆ
ಬ್ರಾಹ್ಮಣ ಕುಟುಂಬದ 45 ವರ್ಷದ ಜರ್ಮನಿಯಲ್ಲಿ ಕೆಲಸ ಮಾಡುತ್ತಿರುವ ಹುಡುಗನಿಗೆ ಬ್ರಾಹ್ಮಣ ಅಥವಾ ಲಿಂಗಾಯತ್ ಹುಡುಗಿ ಬೇಕಾಗಿದ್ದಾರೆ.
MRJ MATRIMONY
Mob: 8904890413

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಅನುಭವವುಳ್ಳ ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ: ಸೂಪರ್‌ವೈಸರ್: 25000+W/o (8 hrs)
ಗಾರ್ಡ್: 21500+W/o (8 hrs)
ಊಟ ತಿಂಡಿ ಸೌಲಭ್ಯವಿರುತ್ತದೆ
9880727819, 9620777819

ಇನ್ಫೋಸಿಸ್ ಸಂಸ್ಥೆಗೆ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
ವಿದ್ಯಾಭ್ಯಾಸ: SSLC ಮೇಲ್ಪಟ್ಟು
ವಯಸ್ಸು: 23 ರಿಂದ 50ರ ಒಳಗಿರಬೇಕು
ಸಂಬಳ: ರೂ. 19000/-
ಸೌಲಭ್ಯ: ESI/PF/bonus/Gratuity/ Free Uniform & Insurance
9538014456
9008794218

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವೀಸ್
8197383645, 9008711654

ಬೇಕಾಗಿದ್ದಾರೆ
MARUTHI SUZUKI ARENA AND TATA MOTORS CAR SHOWROOM ಗಳಿಗೆ ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಶಿಯರ್, ಆಫೀಸ್ ಬಾಯ್, ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ, ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀಧರರು, (*ಸಂಬಳ: 18000rs ಇಂದ 30000rs + ಇನ್ಸೆಂಟಿವ್ಸ್*) ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ.
9535849148, 7411273440

JOBNET
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೇ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ದಿಂದ 20,000 ಸಂಪಾದಿಸಿ.
Mob: 9731891409

ಸುಲಭ ಕಂತುಗಳಲ್ಲಿ ನಿವೇಶನ
ನಿಮ್ಮ ಕನಸಿನ ನಿವೇಶನವನ್ನು ಕಡಿಮೆ ದರದಲ್ಲಿ ಹಾಗೂ ಸುಲಭ ಕಂತುಗಳಲ್ಲಿ ಪಡೆಯಬೇಕೇ ಹಾಗಾದರೆ ಇಂದೇ ಸಂಪರ್ಕಿಸಿ. ಹೆಚ್ಚಿನ ಮಾಹಿತಿಗಾಗಿ
8050051444, 8050052444

WANTED
Telecallers
Marketing Manager
TV Anchors
PigMe Collection Boy
Office Assistant
Mob: 9980959598

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
1. ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು
2. ಶಿಷ್ಯರಣೆ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು

ತಕ್ಷಣ ಬೇಕಾಗಿದ್ದಾರೆ
JK TYRE INDUSTRIES LTD.
ಮೈಸೂರು SSLC PASS or Fail ಆದ ಹುಡುಗರು ಬೇಕಾಗಿದ್ದಾರೆ.
ಸಂಬಳ: 15,000/–
ಅನುಕೂಲತೆ: ESI, PF, Canteen ಸೌಲಭ್ಯವಿರುತ್ತದೆ.
6362491336, 9611601179

SITE FOR SALE
N/E Corner
60x70
Suvarna Nagara, Bogadi Road.
Mob: 8050821108

ಜಮೀನು ಮಾರಾಟಕ್ಕಿದೆ
ಮೈಸೂರಿನ ಕುವೆಂಪು ನಗರದಿಂದ ಕೇವಲ 6 ಕಿಲೋಮೀಟರ್ ದೂರದಲ್ಲಿರುವ ಪೆರಿಫೆರಲ್ ರಿಂಗ್ ರೋಡ್‌ಗೆ ಹೊಂದಿಕೊಂಡಿರುವ ಲೇಔಟ್‌ಗೆ ಸೂಕ್ತವಾದ 8.5 ಎಕರೆ ಜಮೀನು ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
ಸಂಪರ್ಕಿಸಿ: ಡಾ.ಗುರುಪ್ರಸಾದ್
9036284426

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ತಕ್ಷಣ ಬೇಕಾಗಿದ್ದಾರೆ
TVS, ಟಯೋಟಾ, ಬ್ರಿಟಾನಿಯಾ, ಎಂಎನ್‌ಸಿ ಕಂಪನಿಗಳಿಗೆ ಆಫೀಸ್‌ಗಳಿಗೆ, ಶೋರೂಂಗಳಿಗೆ 5th, 7th, 10th, PUC, Degree, Diploma, ITI (All trades) ಯುವಕ, ಯುವತಿಯರು.
ಸಂಬಳ: 18,000/–, 60,000/–, ವಸತಿ, ಊಟವಿದೆ. ಸಂಪರ್ಕಿಸಿ:
Mob: 9035277967

ಉದ್ಯೋಗವಕಾಶ
ಮಹಿಳೆಯರು ನಡೆಸುವ ಚಿಕ್ಕ ಹೋಟೆಲ್ ಮೆಸ್‌ಗೆ ಚುರುಕಾಗಿ ಕೆಲಸ ಮಾಡುವವರು ಬೇಕಾಗಿದ್ದಾರೆ. ಆಕರ್ಷಕ ಸಂಬಳವುಂಟು.
Mob: 8431416590

WANTED
ರೂಮ್ ಬಾಯ್ಸ್ ಬೇಕಾಗಿದ್ದಾರೆ
ಕೆ.ಟಿ.ಸ್ಟ್ರೀಟ್‌ನಲ್ಲಿರುವ ಹೋಟೆಲ್‌ಗೆ ಬೇಕಾಗಿದ್ದಾರೆ
9916623340

WANTED
FRONT OFFICE STAFF
For Mysore International Travels Pvt Ltd.
9611957201
9611957301

WANTED
Female Receptionist for a showroom
Salary 20000/-
Ph.7406 369 369

SITES for SALE
JP Nagar Ring Road
30x40,34Lakhs
Near Gurur Bus Stop, Ramabainagar,Mysore.
(Corporation limits with E Katha)
DTCP approved 1.5 Kms from JP Nagar Ring Road
8660105902



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು, ಯುವಕ/ಯುವತಿಯರು, ಮಹಿಳೆಯರು, ವಿಧವೆಯರು/ವಿಚ್ಛೇದಿತೆಯರು, ಹೋಮ್ ನರ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. ನಮ್ಮಲ್ಲೇ ಕಡ್ಡಾಯ ವಾಗಿ ಉಳಿದು ಕೊಳ್ಳುವರಿಗೆ ಮಾತ್ರ ಅವಕಾಶ. ಸಂಬಳ 15,000 ರಿಂದ 20,000ವರೆಗೆ. ಉಚಿತ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ.
9591547239, 9632039123

COMMERCIAL SPACE FOR RENT
15000 sq.ft. available near NIE College, Vidyaranyapuram.
Mob: 8317484765

HOUSE FOR SALE
20x30 Ground Floor
2 Bed Room, 1st Floor
2 Bedroom, 10x20 one hall
(Roof top) 2 Solar system
2 hot Water geyser tank. MUDA approved. Sathagalli Rajkumar Road, behind Registar Office Mysuru. Rs. 58 Lakhs (Nego)
9845116744

ಬೇಕಾಗಿದ್ದಾರೆ
ವಿಜಯ ಸರ್ವಿಸ್ ಸ್ಟೇಷನ್, ಮೈಸೂರು ಪೆಟ್ರೋಲ್ ಬಂಕಿನಲ್ಲಿ ಕೆಲಸಮಾಡಲು ಹಗಲು, ರಾತ್ರಿ ಮತ್ತು ಪಾರ್ಟ್ ಟೈಂ ಪಾಳಿಯಲ್ಲಿ ಹುಡುಗ/ಹುಡುಗಿಯರು ಬೇಕಾಗಿದ್ದಾರೆ.
9980131139

ಬೇಕಾಗಿದ್ದಾರೆ
ಆನ್ಲೈನ್ ಕಂಪ್ಯೂಟರ್ ಅಂಗಡಿಯಲ್ಲಿ ಕೆಲಸ ಮಾಡಲು ಆಫೀಸ್ ಬಾಯ್ ಬೇಕಾಗಿದ್ದಾರೆ. ಸಂಬಳ: 6 ರಿಂದ 9 ಸಾವಿರ. ಸ್ಥಳ: ಬಂಡಿಪಾಳ್ಯ (APMC ಮೈಸೂರು).
Mob: 9986781434

Document Lost
N. Venu Gopal, #326, North East, Mysore-570 007, have lost allotment copy of House No. 326, North East of N.R. Mohalla.
Finders please contact:
Mob: 9886799833

ಮನೆ ಭೋಗ್ಯಕ್ಕೆ ಇದೆ
ಶ್ರೀರಾಂಪುರ 2ನೇ ಹಂತ, LIC ಲೇಔಟ್ ಭೋಗ್ಯ 6 ಲಕ್ಷ ಸಿಂಗಲ್ ಬೆಡ್ ರೂಂ ಉತ್ತರ ದಿಕ್ಕು (ಗ್ರೌಂಡ್ ಫ್ಲೋರ್) ಹೊಸ ಮನೆ
ಸತೀಶ್: 9113612442
ಸ್ವಾಮಿ: 9845570573

STAFF REQUIRED URGENTLY
Vidyasagar Stationary & Xerox Vijayanagar 2ndStage, Near Podar School
Female/Male-Fulltime
SSLC/PUC/Degree with Good Computer Knowledge
9740246040

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್
ಸಂಬಳ: 11,000 ರಿಂದ 12000 (12 ಗಂಟೆಗೆ), ಸ್ಥಳ: ಸರಸ್ವತಿಪುರಂ, ಒಂಟಿಕೊಪ್ಪಲು, ಬನ್ನಿಮಂಟಪ, ಅಶೋಕರಸ್ತೆ, ಉದ್ಬೂರು ಗೇಟ್
7483638113
0821-4256244

ಸರ್ಕಾರಿ ನೋಂದಾಯಿತ ಸಂಸ್ಥೆ
ಹಗಲು ರಾತ್ರಿ ಪಾಳಿಗೆ 24 ಗಂಟೆ ಪಾಳಿ ಮಾಡುವವರು ಹೋಂ ನರ್ಸಿಂಗ್ ಕೆಲಸಕ್ಕೆ ನಮ್ಮಲ್ಲೆ ಉಳಿದುಕೊಂಡು ಊಟ ವಸತಿ ಉಚಿತ ಸಂಬಳ 18–25 ಸಾವಿರ ತಕ್ಷಣ ಬೇಕಾಗಿದ್ದಾರೆ.
8970630124
6366104034

ಕೆಲಸಕ್ಕೆ ಹುಡುಗರು/ ಹುಡುಗಿಯರು ಬೇಕಾಗಿದ್ದಾರೆ
ಇಂಗ್ಲಿಷ್ ಓದಲು ಬರೆಯಲು ತಿಳಿದಿರುವ ಯವುದೇ ವಿದ್ಯಾರ್ಹತೆ ಇರುವ (SSLC to Degree) F/P ಹುಡುಗರು / ಹುಡುಗಿಯರು "ಸಗಟು ಔಷಧ ವ್ಯಾಪಾರ" ಮಳಿಗೆಯಲ್ಲಿ ಕೆಲಸ ಮಾಡುವವರು ಬೇಕಾಗಿದ್ದಾರೆ. ಸ್ಥಳ: (SBI ಶಾಖೆ ದೇವರಾಜ ಮೊಹಲ್ಲಾ ಹತ್ತಿರ)
9902356334, 9902356331

SITE FOR SALE
40X60 SITE
ROOPA NAGARA
9740088990

ಬೇಕಾಗಿದ್ದಾರೆ
ಐಸ್‌ಕ್ರೀಮ್ ಮತ್ತು ಫಾಸ್ಟ್ ಫುಡ್ ಪಾರ್ಲರ್‌ಗೆ ಅಡುಗೆ ಮಾಡಲು ಸಹಾಯಕರು ಹಾಗೂ ವೈಟರ್ (Waiters) ಕೆಲಸದ ಸಮಯ: ಸಾಯಂಕಾಲ 6 ರಿಂದ ರಾತ್ರಿ 12ರವರೆಗೆ ಮಾಸಿಕ ಸಂಬಳ: ರೂ.9000/– ಕೆಲಸದ ಸ್ಥಳ: ಗೋಕುಲಂ ರಸ್ತೆ, ಜಯಲಕ್ಷ್ಮಿಪುರಂ, ಮೈಸೂರು
8310414784

SITES FOR SALE
20X30, 30X40
(Bank Loan Available)
Srirampura Ring Road, Mysore
8050345574

ಬೇಕಾಗಿದ್ದಾರೆ
ಶಾಲೆಯಲ್ಲಿ ಕಸಗುಡಿಸಲು ಅಡುಗೆ ಮತ್ತಿತರ ಸಹಾಯಕ ಕೆಲಸಗಳಿಗೆ 40 ವಯಸ್ಸು ಮೀರದ ಆರೋಗ್ಯವಂತ ಮಹಿಳೆಯರು. ಕೆಲಸದ ಸಮಯ ಬೆಳಿಗ್ಗೆ 9 ರಿಂದ ಸಂಜೆ 6 ಸಂಬಳ ಪ್ರತಿ ದಿನಕ್ಕೆ 300/–ರಂತೆ ತಿಂಗಳಿಗೆ 9000/–
ಜ್ಞಾನ ಗಂಗೋತ್ರಿ ಕಾನ್ವೆಂಟ್, ರಾಜೇಂದ್ರ ನಗರ ಮೈಸೂರು
9243580672

ಬೇಕಾಗಿದ್ದಾರೆ
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ ಯಾವುದೇ ಟಾರ್ಗೆಟ್ ಇರುವುದಿಲ್ಲ
ವಿದ್ಯಾರ್ಹತೆ: 10th ಪಾಸ್/ಫೇಲ್
7353290565

ತಕ್ಷಣ ಬೇಕಾಗಿದ್ದಾರೆ
(Consultancy ಅಲ್ಲ) ಮೈಸೂರಿನಲ್ಲಿರುವ Govt. Rtg A.W. Group of ಕಂಪನಿಗೆ Freshers+ Experience ಆದ 194 ಕನ್ನಡ ಬಲ್ಲ ಅಭ್ಯರ್ಥಿಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC, PUC, ITI, Any Degree, Dip.
ವಯೋಮಿತಿ: 18-34 Years, ತಿಂಗಳಿಗೆ: 21500–27000, (ಉಚಿತ ಊಟ +ವಸತಿಯೊಂದಿಗೆ)
ಸ್ಫೂರ್ತಿ: 7406821955
7349699460

ಮನೆ ಭೋಗ್ಯಕ್ಕೆ
60x40, 3BHK
ಅಟ್ಯಾಚ್ ಬಾತ್ ರೂಂ
SVEI ಸ್ಕೂಲ್ ಹತ್ತಿರ
ವಿಜಯ ನಗರ 4ನೇ ಹಂತ
9591847851
9632013009

SITE FOR SALE
30x40 West Face Muda Allotted Site For Sale in Vijayanagara 4th Stage Near Raju Corner,
Price: 95 Lakhs (Negotiable)
8197707001

SITE FOR SALE
30x40 North West corner SITE FOR SALE in KBL GARDENIA attached to Rashtrothana Vidya Kendra and vijayanagar 4th Stage
9845809369

ನಿವೇಶನ ಮಾರಾಟಕ್ಕಿದೆ
ಮೈಸೂರು
ಶ್ರೀರಾಂಪುರದ ಸಾರಿಗೆ ನಗರ 3ನೇ ಹಂತದ ಬಡಾವಣೆಯ 30x40 ಅಡಿ N/E ನಿವೇಶನ ಮಾರಾಟಕ್ಕಿದೆ
9739151987
9844669696

ಮನೆ ಮಾರಾಟಕ್ಕಿದೆ
43x45 ವಿಸ್ತರಣೆಯಲ್ಲಿ 7 ಮನೆಗಳು (ಹಿಂದೆ)
16x12 ವಿಸ್ತರಣೆಯಲ್ಲಿ 8 ಮಳಿಗೆಗಳು (ರೋಡ್‌ಸೈಡ್)
#1533, ತ್ಯಾಗರಾಜ ರೋಡ್, 8ನೇ ಕ್ರಾಸ್, ಅಗ್ರಹಾರ, ಮೈಸೂರು
9480291901
6361637505

ಮೈಸೂರು ಮಿತ್ರ ಗುರುವಾರ 9 ಜನವರಿ 2025

ದಲೈಲಾಮರ ದರ್ಶನ ಪಡೆದ ಟಿಬೆಟಿಯನ್ನರು



ವ್ಹೀಲ್‌ಚೇರ್‌ನಲ್ಲಿ ಬಂದ ವೃದ್ಧರನ್ನು ಆಶೀರ್ವದಿಸಿದ ದಲೈಲಾಮ.



ಬೈಲಕುಪ್ಪೆ, ಜ.8– ಕೊರೆಯುವ ಚಳಿಯನ್ನು ಲೆಕ್ಕಿಸದೆ ಸಾವಿರಾರು ಟಿಬೆಟಿಯನ್ನರು ತಮ್ಮ ಆರಾಧ್ಯದೈವ ಪರಮಪೂಜ್ಯ ದಲೈಲಾಮರ ಆಶೀರ್ವಾದ ಪಡೆದುಕೊಂಡರು.

ಪಿರಿಯಾಪಟ್ಟಣ ತಾಲೂಕಿನ ಬೈಲಕುಪ್ಪೆಯ ತಶೀಲಂಪು ದೇವಸ್ಥಾನದಲ್ಲಿ ವಿಶ್ರಾಂತಿ ಪಡೆಯುತ್ತಿರುವ ದಲೈಲಾಮರವರು ಟಿಬೆಟಿಯನ್ ಸಮುದಾಯದ 80 ವರ್ಷದ ಮೇಲ್ಪಟ್ಟ ಹಿರಿಯ ವೃದ್ಧರಿಗೆ ಮತ್ತು ಒಂದು ವರ್ಷದ ಒಳಗೆ ಇರುವಂತಹ ಶಿಶುಗಳಿಗೆ ಆಶೀರ್ವಾದ ಮಾಡಿದರು.

ವ್ಹೀಲ್‌ಚೇರ್ ಮುಖಾಂತರ ಸಾಕಷ್ಟು ಮಂದಿ ಟಿಬೆಟಿಯನ್ ವೃದ್ಧರು ತಮ್ಮವರೊಂದಿಗೆ ಆಗಮಿಸಿ ತಮ್ಮ ನೆಚ್ಚಿನ ಗುರುವಿನ ಆಶೀರ್ವಾದ ಪಡೆದುಕೊಂಡರು. ದಲೈಲಾಮರನ್ನು ನೋಡಿ ಕೆಲ ಸಮಯ ಭಾವುಕರಾದರು. ಬೆಳಗ್ಗೆಯಿಂದಲೇ ದಲೈಲಾಮ ಕಚೇರಿ ಸಿಬ್ಬಂದಿಗಳು ದರ್ಶನಕ್ಕೆ ಸಕಲ ವ್ಯವಸ್ಥೆ ಮಾಡಿದರು. ಪೊಲೀಸ್ ಬಿಗಿಭದ್ರತೆಯಲ್ಲಿ ಆಶೀರ್ವಾದ ಪಡೆದುಕೊಳ್ಳಲು ಸರದಿ ಸಾಲಿನಲ್ಲಿ ಸುಮಾರು 2000ಕ್ಕೂ ಹೆಚ್ಚು ಟಿಬೆಟಿಯನ್ ವೃದ್ಧರು ಮತ್ತು ಮಕ್ಕಳು ಆಗಮಿಸಿದ್ದರು

ತಾಯೂರು ಹಾಲು ಉತ್ಪಾದಕರ ಸಂಘಕ್ಕೆ
ಮಾಧು ಅಧ್ಯಕ್ಷ, ನಿರಂಜನ್ ಉಪಾಧ್ಯಕ್ಷ



ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತಾಯೂರು ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಮಾಧು,ಉಪಾಧ್ಯಕ್ಷರಾಗಿ ನಿರಂಜನ್ ಅವಿರೋಧವಾಗಿ ಆಯ್ಕೆಯಾದರು.

ತಿ.ನರಸೀಪುರ, ಜ.8– ವರುಣ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ತಾಯೂರು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಮಾಧು, ಉಪಾಧ್ಯಕ್ಷರಾಗಿ ನಿರಂಜನ್ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದೆ ಸಂತೋಷ್ ಕುಮಾರ್ ಹಾಗೂ ಮಹದೇವನಾಯಕ ಅಧ್ಯಕ್ಷ–ಉಪಾಧ್ಯಕ್ಷರಾಗಿದ್ದ ವೇಳೆ ಆಡಿಟ್ ವರದಿ ಸಲ್ಲಿಕೆಯಾಗದ ಹಿನ್ನೆಲೆಯಲ್ಲಿ ಸಂಘವನ್ನು ಸೂಪರ್ ಸೀಡ್ ಮಾಡಲಾಗಿತ್ತು.

ಈ ಹಿನ್ನೆಲೆಯಲ್ಲಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿಯ 5 ವರ್ಷಗಳ ಅವಧಿಗೆ ಬುಧವಾರ ಚುನಾವಣೆ ನಿಗದಿಪಡಿಸಲಾಗಿತ್ತು. ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಮಾಧು, ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಬಯಸಿ ನಿರಂಜನ್ ಇಬ್ಬರೇ ನಾಮಪತ್ರ ಸಲ್ಲಿಸಿ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾಧಿಕಾರಿ ಅಶ್ವಿನ್ ಕುಮಾರ್ ಇಬ್ಬರ ಅವಿರೋಧ ಆಯ್ಕೆಯನ್ನು ಪ್ರಕಟಿಸಿದರು.

ಸಂಘದ ನಿರ್ದೇಶಕರಾದ ಎಂ.ಕುಮಾರ್, ಪುಟ್ಟಸ್ವಾಮಿ, ಬಸವರಾಜನಾಯಕ, ರವಿ, ಸವಿತಾ ಹಾಗೂ ಸಣ್ಣತಾಯಮ್ಮ ಚುನಾವಣಾ ಸಭೆಯಲ್ಲಿ ಹಾಜರಿದ್ದು ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ಸಮ್ಮತಿ ಸೂಚಿಸಿದರೆ, ನಿರ್ದೇಶಕರಾದ ಶಿವಕುಮಾರ್, ಸದಾನಂದಮೂರ್ತಿ, ಚಿಕ್ಕಣ್ಣ, ನಂಜುಂಡಸ್ವಾಮಿ ಗೈರಾಗಿದ್ದರು.

ಈ ವೇಳೆ ನೂತನ ಅಧ್ಯಕ್ಷ ಮಾಧು ಮಾತನಾಡಿ, ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿಯಿಂದ ಹಾಲು ಉತ್ಪಾದಕರಿಗೆ ಸಿಗುವ ಸೌಲಭ್ಯಗಳನ್ನು ಪ್ರಾಮಾಣಿಕವಾಗಿ ದೊರಕಿಸಲಾಗುವುದು. ರೈತರು ಸಹ ವ್ಯವಸಾಯದ ಜೊತೆ ಜೊತೆಯಲ್ಲಿ ಹೈನುಗಾರಿಕೆ ಮಾಡಿದರೆ ಆರ್ಥಿಕವಾಗಿ ಸದೃಢವಾಗಲು ಸಾಧ್ಯ. ಸಂಘದ ಎಲ್ಲ ನಿರ್ದೇಶಕರು ಉತ್ಪಾದಕರು, ಗ್ರಾಮಸ್ಥರ ಸಹಕಾರದೊಂದಿಗೆ ಸಂಘ ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗಲು ಪ್ರಯತ್ನ ಪಡುವುದಾಗಿ ತಿಳಿಸಿದರು.

ಉಪಾಧ್ಯಕ್ಷ ನಿರಂಜನ್ ಅವಿರೋಧವಾಗಿ ಆಯ್ಕೆ ಮಾಡಿದ ಸಂಘದ ನಿರ್ದೇಶಕರಿಗೆ ಅಭಿನಂದನೆ ಸಲ್ಲಿಸಿ ಮಾತನಾಡಿ, ತಾಯೂರು ಹಾಲು ಉತ್ಪಾದಕರ ಸಹಕಾರ ಸಂಘವನ್ನು ಮಾದರಿ ಸಂಘವಾಗಿ ಮಾಡಬೇಕೆಂಬ ಮಹದಾಸೆ ನಮ್ಮದಾಗಿದ್ದು, ಅಧ್ಯಕ್ಷರೊಡಗೂಡಿ ಸಂಘಕ್ಕೆ ಬರಬೇಕಾದ ಅನುದಾನ ತಂದು ಹಾಲು ಉತ್ಪಾದಕರಿಗೆ ಅನುಕೂಲ ಕಲ್ಪಿಸಿಕೊಡುತ್ತೇನೆ ಎಂದು ತಿಳಿಸಿದರು.

ಈ ವೇಳೆ ಮುಖಂಡರಾದ ಚಾಮುಂಡನಾಯಕ, ರೇವುನಾಯಕ, ವೆಂಕಟರಮಣನಾಯಕ, ಸುಬ್ಬನಾಯಕ, ನಾಗರಾಜು, ಚಿಕ್ಕಬಸವನಾಯಕ, ಮಹೇಶ್, ಸಂಘದ ಕಾರ್ಯದರ್ಶಿ ಪಿ.ಲಕ್ಷ್ಮಣ್, ಸಹಾಯಕ ಶಿವಮೂರ್ತಿ ಹಾಜರಿದ್ದರು.

ನಂ.ಗೂಡಲ್ಲಿ ಒಕ್ಕಲಿಗರ ಮುದ್ದಣ್ಣ ಜಯಂತಿ ಆಚರಣೆ



ಒಕ್ಕಲಿಗರ ಮುದ್ದಣ್ಣ ಜಯಂತಿಯನ್ನು ಆಚರಿಸಲಾಯಿತು.

ನಂಜನಗೂಡು, ಜ.8– ಶಿವಶರಣ ಒಕ್ಕಲಿಗರ ಮುದ್ದಣ್ಣ ಕೃಷಿ ಕಾಯಕದ ಮಹತ್ವವನ್ನು ಜಗತ್ತಿಗೆ ಸಾರಿದ ಮಹಾಶಿವ ಶರಣ, ಜೊತೆಗೆ ತಮ್ಮ ವಚನ ಸಾಹಿತ್ಯದ ಮೂಲಕ ಸಾಮಾಜಿಕ ಸಮಾನತೆಗಾಗಿ ಶ್ರಮಿಸಿದ ಮಹಾನ್ ಶರಣ ಎಂದು ಬಸವಯೋಗಿ ಹೇಳಿದರು.

ನಗರದ ಆರ್.ಪಿ.ರಸ್ತೆಯಲ್ಲಿ ಶರಣರ ಸಂಘಗಳ ಒಕ್ಕೂಟ ಹಾಗೂ ಒಕ್ಕಲಿಗ ಸಮಾಜದ ಮುಖಂಡರ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಒಕ್ಕಲಿಗರ ಮುದ್ದಣ್ಣ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದರು. ಒಕ್ಕಲಿಗ ಮುದ್ದಣ್ಣನವರು 12ನೇ ಶತಮಾನದಲ್ಲಿ ವಿಜಾಪುರ ಜಿಲ್ಲೆಯ ಜೋಳದಹಾಳ ಗ್ರಾಮದಲ್ಲಿ ಜನಿಸಿದವರು. ಅವರು ಕೃಷಿ ಕಾಯಕದಿಂದಲೇ ದಾಸೋಹ ಮಾಡುತ್ತಾ ಕೃಷಿ ಕಾಯಕವನ್ನು ಶ್ರೇಷ್ಠ ಕಾಯಕವೆಂದು ಜಗತ್ತಿಗೆ ಸಾರಿದ ಮಹಾಶಿವ ಶರಣ, ಜೊತೆಗೆ 12ನೇ ಶತಮಾನದಲ್ಲಿ ಜಾತಿ ವ್ಯವಸ್ಥೆ, ಮೌಢ್ಯದ ವಿರುದ್ಧ ಹೋರಾಟ ನಡೆಸಿದವರು ಎಂದರು.

ಸುಮಾರು 12 ವಚನಗಳನ್ನು ಒಕ್ಕಲುತನದ ಬಗ್ಗೆ ರಚಿಸಿದ್ದಾರೆ. ಒಕ್ಕಲಿಗ ಮುದ್ದಣ್ಣ ಸೇರಿದಂತೆ ಸುಮಾರು 108 ಶಿವಶರಣರಲ್ಲಿ ಕೆಲವೇ ಶಿವಶರಣರ ಜಯಂತಿಗಳ ಆಚರಣೆ ನಡೆಸಲಾಗುತ್ತಿದೆ. ಎಲ್ಲಾ ಶಿವಶರಣರು ಕೂಡ ಬೆಳಕಿಗೆ ಬರಬೇಕು ಅವರ ಜಯಂತಿ ಕಾರ್ಯಕ್ರಮವನ್ನು ಆಚರಣೆ ನಡೆಸುವ ಮೂಲಕ ಅವರ ತತ್ವ ಆದರ್ಶಗಳನ್ನು ನಾವು ಪಾಲನೆ ಮಾಡುವಂತೆ ಆಗಬೇಕು ಎಂದರು.

ಇದೇ ಸಂದರ್ಭದಲ್ಲಿ ಹಾಡ್ಯ ನವೀನ್, ಅಶೋಕ್, ನಂಜುಂಡಸ್ವಾಮಿ, ಗೋಪಾಲ್, ಸತೀಶ್, ತಿರುಮಲೇಶ್, ಕುಮಾರಸ್ವಾಮಿ, ಕೆಂಪೇಗೌಡ, ಗಿರಿರಾಜು, ಉಮೇಶ್, ವೆಂಕಟೇಶ್, ಗುರುಸ್ವಾಮಿ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

ಶಾಲಾ ವಾರ್ಷಿಕೋತ್ಸವ



ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆಯ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಗಳ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಆದಿಚುಂಚನಗಿರಿ ಶಾಖಾ ಮಠದ ಸೋಮೇಶ್ವರನಾಥ ಸ್ವಾಮೀಜಿ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಸಾಲಿಗ್ರಾಮ ಠಾಣೆಯ ಇನ್ಸ್‌ಪೆಕ್ಟರ್ ಕೃಷ್ಣರಾಜು, ಸಾಲಿಗ್ರಾಮ ತಹಶೀಲ್ದಾರ್ ಎನ್.ಎಸ್.ನರಗುಂದ, ಉಪತಹಸೀಲ್ದಾರ್ ಕೆಜಿ ಶರತ್ ಬಾಬು, ಶ್ರೀರಾಮ ದೇಗುಲದ ಪಾರುಪತ್ತೆದಾರ ಯತಿರಾಜು ಹಾಜರಿದ್ದರು.

ಸರಗೂರು ತಾಲೂಕು ಪ್ರಥಮ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಡಾ.ವೈ.ಡಿ. ರಾಜಣ್ಣ ಆಯ್ಕೆ



ಸರಗೂರು, ಜ.8– ಸಾಹಿತಿ, ಕವಿ ಹಾಗೂ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಡಾ. ವೈ.ಡಿ. ರಾಜಣ್ಣ ಅವರು ಸರಗೂರು ತಾಲೂಕು ಪ್ರಥಮ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಸರಗೂರು ಪಟ್ಟಣದ ಪ್ರವಾಸಿ ಮಂದಿರದ ಸಭಾಂಗಣದಲ್ಲಿ ತಾಲೂಕು ಅಧ್ಯಕ್ಷ ಕೆಂಡಗಣ್ಣಸ್ವಾಮಿ ಅಧ್ಯಕ್ಷತೆಯಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಡಾ.ವೈ.ಡಿ. ರಾಜಣ್ಣ ಅವರನ್ನು ಸರ್ವಾನುಮತದ ನಿರ್ಣಯ ಕೈಗೊಳ್ಳುವ ಮೂಲಕ ಆಯ್ಕೆ ಮಾಡಲಾಯಿತು.

ತಾಲೂಕು ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ ಮಾತನಾಡಿ, ಸರಗೂರು ಪಟ್ಟಣದಲ್ಲಿ ಜ.17ರಂದು ಸಮ್ಮೇಳನ ಜರುಗಲಿದ್ದು, ಶಾಸಕರ ಮಾರ್ಗದರ್ಶನದಲ್ಲಿ ಜಿಲ್ಲೆಯ ಉಸ್ತುವಾರಿ ಸಚಿವರು, ಶಾಸಕರು, ಸಾಹಿತಿಗಳು, ಚಿಂತಕರು, ಕನ್ನಡ ಹೋರಾಟಗಾರರನ್ನು ಆಮಂತ್ರಿಸಲಾಗುತ್ತಿದೆ. ಜಿಲ್ಲೆಯಲ್ಲೇ ವಿಶೇಷ ಸಮ್ಮೇಳನ ಕನ್ನಡ ಹಬ್ಬ ನುಡಿ ಜಾತ್ರೆ ಎನಿಸುವಂತೆ ಎಲ್ಲಾ ರೀತಿಯ ಸಿದ್ಧತೆಗಳು ಸಾಗಿವೆ ಎಂದರು.

ಸಮ್ಮೇಳದ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರು, ಜಿಪಂ ಮಾಜಿ ಸದಸ್ಯರೂ ಆದ ಪಿ. ರವಿ ಮಾತನಾಡಿ, ಸರಗೂರು ನೂತನ ತಾಲೂಕು ಕೇಂದ್ರವಾಗಿ ರೂಪುಗೊಂಡ ನಂತರದ ಪ್ರಥಮ ಸಾಹಿತ್ಯ ಸಮ್ಮೇಳನ ಇದಾಗಿದ್ದು, ಎಲ್ಲಾ ರೀತಿಯಲ್ಲೂ ಅರ್ಥಪೂರ್ಣವಾಗಿ ಹಾಗೂ ಅಚ್ಚುಕಟ್ಟಾಗಿ ಜರುಗಬೇಕು. ಸಮ್ಮೇಳನಾಧ್ಯಕ್ಷರ ಮೆರವಣಿಗೆ, ಪುಸ್ತಕ ಬಿಡುಗಡೆ, ಸ್ಮರಣ ಸಂಚಿಕೆ ಬಿಡುಗಡೆ, ಸರಗೂರು ತಾಲೂಕು ಸಾಧಕರಿಗೆ ಅಭಿನಂದನೆ, ಕವಿಗೋಷ್ಠಿ, ಹಾಸ್ಯ ಉತ್ಸವ ಹೀಗೆ ಹಲವು ಕಾರ್ಯಕ್ರಮಗಳನ್ನು ಸಮ್ಮೇಳನ ಒಳಗೊಂಡಿದೆ ಎಂದರು.

ಶಾಸಕರು ಹೆಚ್ಚು ಆಸಕ್ತಿಯಿಂದ ಸಮ್ಮೇಳನದ ಯಶಸ್ಸಿಗೆ ಸಹಕಾರ ನೀಡುತ್ತಿದ್ದಾರೆ. ತಾಲೂಕಿನ ಸಮಸ್ತರು ಈ ಕನ್ನಡದ ಹಬ್ಬದಲ್ಲಿ ಭಾಗಿಯಾಗುವ ಹಾಗೆ ಶ್ರಮಿಸಬೇಕು ಎಂದರು. ಸಮಿತಿ ಸದಸ್ಯರುಗಳಾದ ಗಿರೀಶ್, ಶಿವಣ್ಣ, ಎಸ್.ಎನ್. ನಾಗರಾಜು, ಶ್ರೀನಿವಾಸ್, ಸಿದ್ದರಾಜು, ಮಲ್ಲೇಶ್, ನಿಂಗರಾಜು, ಶಿವಶಂಕರ್, ಗೋಪಾಲಸ್ವಾಮಿ, ಬಂಗಾರಯ್ಯ, ಸುದೀರ್, ಸಕಲೇಶ್, ಶಿವರಾಜು ಉಪಸ್ಥಿತರಿದ್ದರು.

ಅಶ್ವರೂಢ ಬಸವಣ್ಣನವರ ಪುತ್ಥಳಿ ಪ್ರತಿ ಗ್ರಾಮದಲ್ಲೂ ಅನಾವರಣವಾಗಲಿ

ಬಸವ ಬಳಗ ಘಟಕದ ಜಿಲ್ಲಾಧ್ಯಕ್ಷ ಪ್ರದೀಪ್ ಮನವಿ



ಯುವ ಸಮಿತಿ ಪದಗ್ರಹಣ ಕಾರ್ಯಕ್ರಮವನ್ನು ವಿವಿಧ ಮಠಾಧೀಶರು ಉದ್ಘಾಟಿಸಿದರು.

ಸರಗೂರು, ಜ.8– ತಾಲೂಕಿನ ಹಂಚೀಪುರ ಗ್ರಾಮದ ಗುರುಮಲ್ಲೇಶ್ವರ ಪಟ್ಟದ ಮಠದ ಮುಂಭಾಗದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಸಹಯೋಗದಲ್ಲಿ ನೂತನ ಬಸವ ಬಳಗ ಸಂಘ ಸ್ಥಾಪನೆ ಮತ್ತು ಯುವ ಸಮಿತಿ ಪದಗ್ರಹಣ ಕಾರ್ಯಕ್ರಮ ನಡೆಯಿತು.

ಈ ವೇಳೆ ಮಾತನಾಡಿದ ಬಸವ ಬಳಗ ಜಿಲ್ಲಾ ಅಧ್ಯಕ್ಷ ಪ್ರದೀಪ್, ತಾಲೂಕಿನಲ್ಲಿ ಬಸವಣ್ಣನವರ ಪುತ್ಥಳಿ ಅನಾವರಣ ಮಾಡಬೇಕು. ಅದು ಹಂಚೀಪುರ ಗ್ರಾಮದಿಂದಲೇ ಪ್ರಾರಂಭವಾಗಿ ಪ್ರತಿ ಗ್ರಾಮಗಳಲ್ಲಿ ಬಸವಣ್ಣನವರು ಕುದುರೆ ಮೇಲೆ ಕುಳಿತಿರುವ ಪುತ್ಥಳಿ ಸ್ಥಾಪಿಸಬೇಕು. 12ನೇ ಶತಮಾನದ ಬಸವಣ್ಣನವರ ಹಾಗೂ ಅವರ ಸಮಕಾಲೀನ ಶರಣರ ತತ್ವ ಸಂದೇಶಗಳನ್ನು ಪ್ರಪಂಚದಾದ್ಯಂತ ಸಾರುವ ಕೆಲಸವನ್ನು ಯುವಕರು ಮಾಡಬೇಕು. ನಾನೂ ಸಹ ಇಂತಹ ಪವಿತ್ರವಾದ ಸೇವೆಗೆ ಕೈಜೋಡಿಸುವುದಾಗಿ ತಿಳಿಸಿದರು.

ಪಡುವಲು ವಿರಕ್ತ ಮಠದ ಮಹದೇವಸ್ವಾಮೀಜಿ ಮಾತನಾಡಿ, ಒಕ್ಕೂಟ ಸಂಘಗಳಾಗಿ ಉಳಿಯದೆ ಸಮಾಜ ಸುಧಾರಕ ಬಸವಣ್ಣ ಆದರ್ಶಗಳನ್ನು ಪಾಲಿಸುವ ಹಾಗೂ ಸಂಘ ಹಾಗೂ ಸಮಾಜದ ಅಭಿವೃದ್ಧಿಗೆ ಒತ್ತು ನೀಡುವಂತಾಗಬೇಕು ಬಸವಣ್ಣನವರು ವಚನಗಳಲ್ಲಿಯೇ ಜೀವನದ ಮೌಲ್ಯಗಳ ಬಗ್ಗೆ ಸಾಕಷ್ಟು ಮಾಹಿತಿಯನ್ನು ನೀಡಿದ್ದಾರೆ ಎಂದರು.

ದಡದಹಳ್ಳಿ ಮಠದ ಶ್ರೀ ಷಡಕ್ಷರಿ ಸ್ವಾಮೀಜಿ ಮಾತನಾಡಿ, ಹನ್ನೆರಡನೇ ಶತಮಾನದಲ್ಲಿ ಶರಣರು ಕಾಂತಿಗೈದ ಕಾಯಕ ನಿಷ್ಠೆ, ಧರ್ಮ ನಿಷ್ಠೆಗಳನ್ನು ಅನುಷ್ಠಾನಕ್ಕೆ ತರುವ ಮೂಲಕ ಇಂದಿನ ಸಾಮಾಜಿಕ ಪಿಡುಗುಗಳಾದ ಮೂಢನಂಬಿಕೆ, ಕಂದಾಚಾರ, ಇವುಗಳನ್ನು ಹೋಗಲಾಡಿಸಬೇಕು. ಇದು ಕೇವಲ ಒಂದು ಸಮಾಜಕ್ಕೆ ಸೀಮಿತವಾಗದೆ ಸರ್ವ ಸಮಾಜದ ಏಳಿಗೆಗೆ ಕಾಯಕ ಗೈದ ಬಸವಣ್ಣ ನವರ ಹೆಸರಿನ ಬಸವ ಬಳಗವು ಹೆಮ್ಮರವಾಗಿ ಬೆಳೆಯಲಿ ಎಂದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಕಾಟವಾಳು ನಟರಾಜು ಮಾತನಾಡಿದರು. ಕಿರಿಯ ತೊಟದಾರ್ಯ ಸ್ವಾಮೀಜಿ, ಆಶೀರ್ವಚನ ನೀಡಿದರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಕಾಟವಾಳು ನಟರಾಜು, ಕೋಶಾಧ್ಯಕ್ಷ ಸಿ.ಕೆ. ಗಿರೀಶ್, ಬಸವ ಬಳಗದ ತಾಲೂಕು ಅಧ್ಯಕ್ಷ ಹಂಚೀಪುರ ಗಣಪತಿ ಮಾತನಾಡಿದರು.

ಈ ಸಂದರ್ಭದಲ್ಲಿ ಯುವ ಘಟಕದ ಅಧ್ಯಕ್ಷ ನಂದೀಶ್, ಗಿರಿ ಕುಮಾರ್, ಸಿದ್ದಪ್ಪ ಗುರುಸ್ವಾಮಿ, ಪಪಂ ಉಪಾಧ್ಯಕ್ಷ ಶಿವಕುಮಾರ್, ಡಿ.ಸಿ. ಸಿದ್ದಪ್ಪ, ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಕೆಂಡಗಣ್ಣಸ್ವಾಮಿ, ಹಂಚೀಪುರ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಡಿ.ಪಿ. ನಟರಾಜು, ವೀರಶೈವ ಸಮಾಜದ ಟೌನ್ ಅಧ್ಯಕ್ಷ ಎಸ್.ಎನ್. ಮೋಹನ್‌ಕುಮಾರ್, ಹಂಚೀಪುರ ಗ್ರಾಮದ ಯಜಮಾನರಾದ ಶಿವಣ್ಣ, ಪುಟ್ಟಣ್ಣ, ಬಸವಣ್ಣ, ಮಹದೇವಸ್ವಾಮಿ, ನಂಜಪ್ಪ, ಜಯಕುಮಾರ್, ಮಂಜುನಾಥ, ಬಸವರಾಜು, ಮಹದೇವಸ್ವಾಮಿ, ಮಹದೇವಪ್ಪ, ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರು ಭಕ್ತ ಬಳಗದ ಸಂಘ ಅಧ್ಯಕ್ಷ ಮಹೇಶ್, ಪರಶಿವಮೂರ್ತಿ, ನಿಜಪ್ಪ, ಭವನೇಶ್, ಮಹಿಳಾ ಘಟಕದ ಅಧ್ಯಕ್ಷೆ ಶಶಿಕಲಾ ಅಧ್ಯಕ್ಷೆ ಜ್ಯೋತಿ ಯೋಗೇಶ್, ಶಿವರಾಜಪ್ಪ, ಮಂಗಳ, ಜಗದೀಶ್, ಮಣಿ, ಬಸವಣ್ಣ, ಎಸ್.ಎನ್.ಪ್ರಕಾಶ್, ಡಿಸಿ ಸಿದ್ದಪ್ಪ, ಶಿವರಾಜಪ್ಪ, ಸಿದ್ದಪ್ಪ, ಶಶಿಕುಮಾರ್, ಮಾದಪ್ಪ, ಗುರುಮಲ್ಲಪ್ಪ, ಚೆನ್ನಮಲ್ಲಪ್ಪ, ಸತೀಶ್, ವಿಕೇಶ್, ಮಹೇಶ್, ಗೀತಾ ಶಿವಕುಮಾರ್, ರಾಜೇಶ್, ಶಿವರುದ್ರ, ಸಂಘದ ಸದಸ್ಯರು ಭಾಗವಹಿಸಿದ್ದರು.

ಗ್ರಾಮೀಣ ಫೌಂಡೇಶನ್ ಆಫ್ ಕರ್ನಾಟಕ ಟ್ರಸ್ಟ್‌ನ ಕ್ಯಾಲೆಂಡರ್ ಬಿಡುಗಡೆ



ನೂತನ ದಿನದರ್ಶಿಕೆಯನ್ನು ಬಿಡುಗಡೆ ಮಾಡಲಾಯಿತು.

ತಿ.ನರಸೀಪುರ, ಜ.8– ವರ್ಷವಿಡೀ ಉಪಯೋಗವಾಗುವ ದಿನಚರಿ ಪ್ರತಿಯೊಬ್ಬರಿಗೂ ನಿತ್ಯವೂ ಮಾರ್ಗಸೂಚಿಯಾಗಿರುತ್ತದೆ ಎಂದು ಜಲ ಅಭಿವೃದ್ಧಿ ಪರಿಣತರು ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳ ಮಾರ್ಗದರ್ಶಕ ರಾಧಾ ಡಾ. ಅಚ್ಯುತಾ ರಾವ್ ಹೇಳಿದರು.

ತಾಲೂಕಿನ ಶಂಭುದೇವನಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತಿ.ನರಸೀಪುರ ಪಟ್ಟಣದ ಗ್ರಾಮೀಣ ಫೌಂಡೇಶನ್ ಆಫ್ ಕರ್ನಾಟಕ ಟ್ರಸ್ಟ್ ವತಿಯಿಂದ ಹೊರತಂದಿರುವ ನೂತನ ದಿನದರ್ಶಿಕೆಯನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ನಿತ್ಯದ ಕೆಲಸ, ವಾರಗಳಲ್ಲಿ ಏನೇನು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಹಾಗೂ ಪ್ರತಿನಿತ್ಯ ನಾವು ನಮ್ಮ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ದಿನಚರಿ ಅತ್ಯವಶ್ಯಕವಾಗಿದೆ ಎಂದರು.

ಗ್ರಾಪಂ ಅಭಿವೃದ್ಧಿ ಅಧಿಕಾರಿ ದಯಾನಂದ್, ಗ್ರಾಮೀಣ ಫೌಂಡೇಶನ್ ಆಫ್ ಕರ್ನಾಟಕ ಟ್ರಸ್ಟ್‌ನ ಪೂಜಿತ್ ಮೆಡಿಕಲ್ ಕುಮಾರ್, ಗ್ರಾಪಂ ಅಧ್ಯಕ್ಷ ಪುಟ್ಟಸ್ವಾಮಿ, ಮುಖ್ಯ ಶಿಕ್ಷಕಿ ಚಿತ್ರ ವಿಶಾಲಾಕ್ಷಿ, ಎಸ್‌ಡಿಎಂಸಿ ಅಧ್ಯಕ್ಷೆ ಶೋಭಾ, ಟ್ರಸ್ಟ್‌ನ ಎನ್. ಮರಿಸ್ವಾಮಿ, ಉದ್ಯಮಿ ಎನ್. ಸತೀಶ್, ಸಿಬಿ ಹುಂಡಿ ನಿಂಗರಾಜು, ಓಂ ಗುರು ಶಿವಣ್ಣ ಹೊಸಪುರ ಸಿದ್ದರಾಜು, ಮಲ್ಲಿಕಾ, ವನಜಾಕ್ಷಿ ಮಲ್ಲು ರಮೇಶ್ವರ್ ರಾವ್ ಮತ್ತಿತರರಿದ್ದರು.

ನಾಳೆ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಾಲಯದಲ್ಲಿ ವೈಕುಂಠ ಏಕಾದಶಿ



ತಿ.ನರಸೀಪುರ, ಜ.8– ಶುಕ್ರವಾರ (ಜ.10) ಲೋಕ ಕಲ್ಯಾಣಾರ್ಥವಾಗಿ 9ನೇ ವರ್ಷದ ವೈಕುಂಠ ಏಕಾದಶಿ ಪ್ರಯುಕ್ತ ದಕ್ಷಿಣಕಾಶಿಗಿಂತ ಗುಲಗಂಜಿ ಗಾತ್ರ ಎನಿಸಿರುವ ಶ್ರೀ ಗುಂಜಾ ನರಸಿಂಹ ಸ್ವಾಮಿ ದೇವಾಲಯದಲ್ಲಿ ವೈಕುಂಠ ಏಕಾದಶಿಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ.

ಈ ಬಾರಿ ಸಾವಿರಾರು ಭಕ್ತಾದಿಗಳಿಗೆ ಅನ್ನ ಸಂತರ್ಪಣೆಯೊಂದಿಗೆ ನಡೆಸುವ ಮೂಲಕ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ ತಿಳಿಸಿದರು.

ದೇವಾಲಯದ ಆವರಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶುಕ್ರವಾರ ಬೆಳಗ್ಗೆ ಸ್ವರ್ಗದ ಬಾಗಿಲ ಪ್ರವೇಶ. ನಂತರ ಬೆಳಗ್ಗೆ 5 ರಿಂದ 6 ಗಂಟೆಯವರೆಗೆ ಶ್ರೀ ಸ್ವಾಮಿಯವರ ಉತ್ಸವದೊಂದಿಗೆ ವೇದಪಾರಾಯಣ, ಬೆಳಗ್ಗೆ 6 ರಿಂದ 7 ಗಂಟೆಯವರೆಗೆ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ ಶ್ರೀಮತಿ ಕೆ. ಸುಧಾ ಮತ್ತು ತಂಡದವರಿಂದ (ಶ್ರೀ ವಿಷ್ಣು ಸಹಸ್ರನಾಮ ಚಾರಿಟಬಲ್ ಟ್ರಸ್ಟ್, ತಿ.ನರಸೀಪುರ), ಬೆಳಗ್ಗೆ 7 ರಿಂದ 8 ಗಂಟೆಯವರೆಗೆ ಭರತನಾಟ್ಯ ಶ್ರೀಮತಿ ವಸುಂಧರಾ ಮತ್ತು ತಂಡದವರಿಂದ ಕಲಾ ಸಂದೇಶ ಪ್ರತಿಷ್ಠಾನ ತಿ.ನರಸೀಪುರ, ಬೆಳಗ್ಗೆ 8 ರಿಂದ 9 ಗಂಟೆಯವರೆಗೆ ನಾದಸ್ವರ ಕಾರ್ಯಕ್ರಮ, ಲೋಕೇಶ್ ಮತ್ತು ತಂಡದವರಿಂದ ಬೆಳಗ್ಗೆ 9 ರಿಂದ 11 ಗಂಟೆಯವರೆಗೆ ದೇವರ ಭಕ್ತಿಗೀತೆಗಳು ಶ್ರೀ ಮಲ್ಲೇಶ್ ಮತ್ತು ತಂಡದವರಿಂದ (ಶ್ರೀ ಭ್ರಮರಾಂಭ ಕಲಾ ತಂಡ, ತಿ.ನರಸೀಪುರ).

ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ದೇವರ ಭಕ್ತಿಗೀತೆಗಳು ನಡೆಯಲಿವೆ. ಹೀಗಿ ರಾತ್ರಿವರೆಗೂ ಕಾರ್ಯಕ್ರಮಗಳು ನಡೆಯಲಿವೆ. ಪಾರುಪತ್ತೆದಾರ ವಿ. ಪ್ರದೀಪ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಿವಶಂಕರಮೂರ್ತಿ, ವಿಷ್ಣು ಸಹಸ್ರನಾಮ ಟ್ರಸ್ಟ್‌ನ ಸದಸ್ಯರಾದ ಪ್ರಮೀಳಾ, ಸುಧಾ, ಸೌಮ್ಯ, ಜ್ಯೋತಿ, ಇಂದ್ರ, ಲಕ್ಷ್ಮಿ, ರಂಗನಾಥಯ್ಯ, ಸುಧಾ, ಶೋಭಾ, ಕಲ್ಪನಾ, ಇಂದ್ರಾಣಿ, ಸುಮಿತ್ರ, ಸುನಂದ, ಮಹದೇವಮ್ಮ, ವಿನುತ, ಕುಮಾರಿ, ಕೋಮಲ, ಮಂಜುಳಾ, ಗೀತಾ, ಶುಭ ಮಾಲತಿ, ನಂದೀಶ್, ಅರ್ಜುನ್ ಹಾಜರಿದ್ದರು

ಗಿರಿಜನರಿಗೆ ಗಿರಿರಾಜ ಕೋಳಿಮರಿಗಳ ವಿತರಣೆ



ಗಿರಿರಾಜ ಕೋಳಿಮರಿಗಳನ್ನು ವಿತರಿಸಲಾಯಿತು.

ಹುಣಸೂರು, ಜ.8– ಕೃಷಿ ವಿಶ್ವ ವಿದ್ಯಾನಿಲಯ–ಜಿಕೆವಿಕೆ ಬೆಂಗಳೂರು, ಕೌಶಲ ಅಭಿವೃದ್ಧಿ ಕೇಂದ್ರ (ಟಿಎಸ್‌ಪಿ ಯೋಜನೆಯಡಿ), ಹುಣಸೂರು ಪಶುಪಾಲನಾ ಮತ್ತು ಪಶು ಸಂಗೋಪನ ಇಲಾಖೆಯ ಸಹಯೋಗದಿಂದ ಇಡಿಪಿ ಕಾರ್ಯಕ್ರಮದ ಅಡಿಯಲ್ಲಿ ಎರಡು ವಾರದ ಗಿರಿರಾಜ ಕೋಳಿಮರಿಗಳನ್ನು ತಾಲೂಕಿನ ರಂಗಯ್ಯನಕೊಪ್ಪಲು ಹಾಡಿಯಲ್ಲಿ ಗಿರಿಜನರಿಗೆ ತಲಾ ಹತ್ತು ಮರಿಗಳಂತೆ 40 ಮಂದಿ ಫಲಾನುಭವಿಗಳಿಗೆ ವಿತರಣೆ ಮಾಡಲಾಯಿತು.

ಬೆಂಗಳೂರು ಜಿಕೆವಿಕೆ, ಕೃಷಿ ವಿಶ್ವವಿದ್ಯಾನಿಲಯ ಪ್ರಾಧ್ಯಾಪಕರು ಮತ್ತು ಪ್ರಾಣಿಶಾಸ್ತ್ರದ ಮುಖ್ಯಸ್ಥ ಡಾ. ಆನಂದ್‌ರವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ, ಗಿರಿರಾಜ ಕೋಳಿ ಸಾಕಾಣಿಕೆ ಬಗ್ಗೆ ಮಾಹಿತಿ ನೀಡಿದರು ಹಾಗೂ ನಿರ್ವಹಣೆಯ ಕ್ರಮಗಳು, ಲಸಿಕೆ ಕಾರ್ಯಕ್ರಮ, ಆಹಾರದ ನಿರ್ವಹಣೆ, ಅದರ ಉಪಯೋಗಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು.

ಹುಣಸೂರು ತಾಲೂಕು ಪಶು ಸಂಗೋಪನ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಚೆನ್ನಬಸಪ್ಪನವರು ವೈಜ್ಞಾನಿಕವಾಗಿ ಹಸು ಸಾಕಾಣಿಕೆ, ಕುರಿ ಮತ್ತು ಮೇಕೆ ಸಾಕಾಣಿಕೆಯ ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಪಶು ವೈದ್ಯಾಧಿಕಾರಿ ಗಿರೀಶ್, ಧರ್ಮಾಪುರ ಗ್ರಾಪಂ ಅಧ್ಯಕ್ಷ ಮಹದೇವ, ಉಪಾಧ್ಯಕ್ಷೆ ಜ್ಯೋತಿ ಹಾಜರಿದ್ದರು.

ಹೆಚ್.ಡಿ.ಕೋಟೆ: ಬಿಜಿಎಸ್ ಶಿಕ್ಷಣ ಸಂಸ್ಥೆಗೆ ವಿಶೇಷ ಸ್ಥಾನವಿದೆ

ಪ್ರೊ.ಚಿಕ್ಕಬೋರಯ್ಯ ಸೇವಾಸ್ಮರಣೆ, ನುಡಿನಮನದಲ್ಲಿ ಡಾ. ಶ್ರೀ ನಿರ್ಮಲಾನಂದ ಶ್ರೀಗಳು



ಡಾ. ಶ್ರೀ ನಿರ್ಮಲಾನಂದ ಮಹಾಸ್ವಾಮೀಜಿ, ಚುಂಚಶ್ರೀ ಪ್ರಶಸ್ತಿ ಪುರಸ್ಕೃತರಾದ ಪ್ರೊ.ಕೆ.ಪಿ.ಬಸವೇಗೌಡರಿಗೆ ಅಭಿನಂದಿಸಿದರು.

ಹೆಚ್.ಡಿ.ಕೋಟೆ, ಜ.8– ಬಿಜಿಎಸ್ ಸಂಸ್ಥೆಯಲ್ಲಿ ನೂರಾರು ಶಿಕ್ಷಣ ಸಂಸ್ಥೆಗಳಿದ್ದರೂ ಸಹ ಹೆಚ್.ಡಿ.ಕೋಟೆ ತಾಲೂಕಿನ ಶಿಕ್ಷಣ ಸಂಸ್ಥೆಗೆ ವಿಶೇಷ ಸ್ಥಾನವಿದೆ ಎಂದು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಡಾ. ಶ್ರೀ ನಿರ್ಮಲಾನಂದ ಮಹಾಸ್ವಾಮೀಜಿ ತಿಳಿಸಿದರು.

ತಾಲೂಕು ಒಕ್ಕಲಿಗರ ಸಂಘ ಮತ್ತು ಆದಿಚುಂಚನಗಿರಿ ಶಿಕ್ಷಣ ಸಂಸ್ಥೆ ವತಿಯಿಂದ ಪ್ರೊ. ಚಿಕ್ಕಬೋರಯ್ಯ ಸೇವಾಸ್ಮರಣೆ ನುಡಿ ನಮನ ಚುಂಚಶ್ರೀ ಪ್ರಶಸ್ತಿ ಪುರಸ್ಕೃತರಾದ ಪ್ರೊ.ಕೆ.ಪಿ.ಬಸವೇಗೌಡರಿಗೆ ಅಭಿನಂದನೆ ಮತ್ತು ದತ್ತಿನಿಧಿ ಸ್ಥಾಪನೆ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ನನ್ನ ಓದು, ನನ್ನ ಸಂಪಾದನೆ ನನ್ನ ಕುಟುಂಬಕ್ಕೆ ಮಾತ್ರ ಎಂದರೆ ಆತನಿಗೆ ಸಮಾಜದ ಬಗ್ಗೆ ಚಿಂತನೆಗಳು ಇರುವುದಿಲ್ಲ, ಪರರ ಸೇವೆಯಲ್ಲಿ ಆನಂದವನ್ನು ಕಾಣಲು ಸಾಧ್ಯವಿಲ್ಲ ಎಂದ ಅವರು, ಪೂಜ್ಯ ಗುರುಗಳೊಂದಿಗೆ ಸೇರಿ ಹಿಂದುಳಿದ ತಾಲೂಕಿನಲ್ಲಿ ಶಿಕ್ಷಣ ಸಂಸ್ಥೆ ಕಟ್ಟಲು ನೆರವಾದರು. ಸುಂದರವಾದ ದೇಹದ ಮೂಲಕ ಸುಂದರ ಕಾರ್ಯಗಳ ಮಾಡಬೇಕಾದರೆ, ಸಮಾಜದ ಸೇವೆಗೆ ಅಣಿಗೊಳಿಸದಿದ್ದರೆ ಯಾವುದೇ ಬೆಲೆ ಇರುವುದಿಲ್ಲ, ಮನಸ್ಸು ಸುಂದರವಾಗುವುದಿಲ್ಲ.

ಸೇವೆಯೆ ಪರಧರ್ಮ ಎಂದು ಸನ್ಯಾಸಿಗಳು ಇರುತ್ತಾರೆ, ಭಕ್ತರು ಸೇರಿದರೆ ಮಾತ್ರ ಮಠವನ್ನು ನಡೆಸಲು ಸಾಧ್ಯ ಎಂದರು. ಪರರ ಜೀವದಲ್ಲಿ ಬೆಳಕನ್ನು ಕಾಣಲು ಹೊರಟ ವ್ಯಕ್ತಿ ಎಂದೂ ಕತ್ತಲನ್ನು ಕಾಣುವುದಿಲ್ಲ. ದೈವದಲ್ಲಿ ನಂಬಿಕೆ ಇಟ್ಟವರಿಗೆ ಅಸ್ತಿತ್ವದಲ್ಲಿರುವವರು ನೆರವಾಗಿ ಅವರ ದಾರಿಗೆ ದೀಪವಾಗುತ್ತದೆ ಎಂದರು.

ಪ್ರಶಸ್ತಿ ಪುರಸ್ಕೃತರಾದ ಪ್ರೊ.ಕೆ.ಪಿ.ಬಸವೇಗೌಡ ಮಾತನಾಡಿ, ತಾಲೂಕಿನಲ್ಲಿ ಶಿಕ್ಷಣ ಸಂಸ್ಥೆ ತೆರೆಯಬೇಕು, ತಾಲೂಕಿನ ಮಕ್ಕಳ ಶೈಕ್ಷಣಿಕ ಕನಸು ಕಂಡು ಬಾಲಗಂಗಾಧರನಾಥ ಸ್ವಾಮೀಜಿ ಮೂಲಕ ಸಂಸ್ಥೆ ತೆರೆಯುವಂತೆ ಮನವಿ ಮಾಡಿ ಅದನ್ನು ಸಾಕಾರಗೊಳಿಸಿ, ಲಕ್ಷಾಂತರ ವಿದ್ಯಾರ್ಥಿಗಳಿಗೆ ಶಿಕ್ಷಣ ದೊರೆಯುವಂತೆ ಮಾಡಲಾಗಿದ್ದು, ಪ್ರಸ್ತುತ 4 ಸಾವಿರ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ಶಾಖಾ ಮಠದ ಮುಖ್ಯಸ್ಥರಾದ ಸೋಮೇಶ್ವರನಾಥ ಸ್ವಾಮೀಜಿ, ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಜೆ.ಎನ್.ವೆಂಕಟೇಶ್, ವಿದ್ಯಾವರ್ಧಕ ಕಾಲೇಜಿನ ಅಧ್ಯಕ್ಷ ಗುಂಡಪ್ಪಗೌಡ, ಮುಖಂಡರಾದ ನಾರಾಯಣಗೌಡ, ಸಿ.ಎನ್.ನರಸಿಂಹೇಗೌಡ, ಬಿ.ಪಿ.ಭಾಸ್ಕರ್, ಚಲುವ, ಸುರೇಂದ್ರ, ಡಿ.ಆರ್.ಮಹೇಶ್, ತಮ್ಮಣ್ಣೇಗೌಡ, ನಿಂಗೇಗೌಡ, ಎ.ಜೆ. ಕಾಳೇಗೌಡ, ಕಾರ್ಯಕ್ರಮದಲ್ಲಿ ಪದವಿ ಪೂರ್ವ ವಿಭಾಗದ ಪ್ರಾಂಶುಪಾಲ ಬಿ. ಬೈರೇಗೌಡ, ಮುಖ್ಯ ಶಿಕ್ಷಕಿ ನಂದಿನಿ, ಮುಖ್ಯ ಶಿಕ್ಷಕ ಎ.ಸಿ. ಬೈರಪ್ಪ, ಉಪನ್ಯಾಸಕರುಗಳಾದ ರಾಮಚಂದ್ರ ಎಂ.ಆರ್, ಕಲ್ಲೇಶ್‌ಗೌಡ, ಮಹೇಂದ್ರ ಬಿ.ಸಿ, ಸಿದ್ದೇಗೌಡ, ಚೆನ್ನಕೇಶವ ನಾಯಕ ಎನ್.ಬಿ, ರವೀಶ, ರಾಜೇಶ್ ಬಿ.ಎಸ್, ಮಹೇಶ, ಸಿದ್ದರಾಜು, ಅವಿನ, ಪ್ರೀತಿ, ಚಿತ್ರ, ಚಿಕ್ಕದೇವಿ, ಸಂಗೀತ, ಚಂದನ, ರವಿ, ಮಹದೇವ, ದಿಲೀಪ, ಮಲ್ಲೇಶ ಟಿ, ಮುಖಂಡರಾದ ಎ.ಜೆ. ಕಾಳೇಗೌಡರು, ಬಿ.ಪಿ ಭಾಸ್ಕರ್, ಲಿಂಗೇಗೌಡರು, ಸೋಮೇಶ್‌ರವರು, ಡಿಸಿ ಸ್ವಾಮಿ, ಚೇತನ್, ನರಸಿಂಹಗೌಡ, ಶ್ರೀಮಠದ ಭಕ್ತರಾದ ನಾರಾಯಣ್ ಹಾಜರಿದ್ದರು.

ಆಯಸ್ಸು ವೃದ್ಧಿಗೆ ಸಂಶೋಧನೆಗಳಾಗುತ್ತಿವೆ; ಆದರೆ ಇನ್ನೂ ಫಲ ಮಾತ್ರ ದೊರೆತಿಲ್ಲ...

● ನೊಬೆಲ್ ಪ್ರಶಸ್ತಿ ಪುರಸ್ಕೃತ ಜೀವಶಾಸ್ತ್ರಜ್ಞ ವೆಂಕಿ ರಾಮಕೃಷ್ಣನ್ ವಿವರಣೆ ● ಮಿತ ಆಹಾರ, ನಿದ್ದೆ, ವ್ಯಾಯಾಮದಿಂದ ಆಯಸ್ಸು ವೃದ್ಧಿ ● ವಯಸ್ಕರ ಸಂಖ್ಯೆ ಹೆಚ್ಚಿಸಿಕೊಳ್ಳಲು ಚೀನಾ, ದ.ಕೊರಿಯಾ ಹರಸಾಹಸಪಡುತ್ತಿವೆ!

ಮೈಸೂರು, ಜ.8(ಎಂಕೆ)– ನೈಸರ್ಗಿಕ ಜೀವ ವಿಕಸನ ಪ್ರಕ್ರಿಯೆಯಲ್ಲಿ ಎಲ್ಲಾ ಜೀವಿಗಳಿಗೂ ಇಂತಿಷ್ಟೇ ಆಯಸ್ಸು ಎಂಬುದು ನಿರ್ಧಾರವಾಗಿರಲಿದ್ದು, ವೈಜ್ಞಾನಿಕ ಸಂಶೋಧನೆಗಳ ಪ್ರಕಾರ ದೇಹದ ಅಂಗಾಂಗ ರಚನೆಯ ಕಾರ್ಯ ಚಟುವಟಿಕೆ ಸ್ಥಗಿತಗೊಂಡಾಗ ಸಾವು ಸಂಭವಿಸಲಿದೆ. ಆಯಸ್ಸು ವೃದ್ಧಿಗೆ ಸಂಶೋಧನೆಗಳಾಗುತ್ತಿವೆ, ಆದರೆ ಫಲ ಮಾತ್ರ ದೊರೆತಿಲ್ಲ ಎಂದು ನೊಬೆಲ್ ಪ್ರಶಸ್ತಿ ಪುರಸ್ಕೃತ ಜೀವ ಶಾಸ್ತ್ರಜ್ಞ, ಲೇಖಕ ವೆಂಕಿ ರಾಮಕೃಷ್ಣನ್ ತಿಳಿಸಿದರು.

ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಮೈಸೂರು ವಿವಿ ವಿಜ್ಞಾನ ಭವನದಲ್ಲಿ ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್, ಮೈಸೂರು ಬುಕ್ ಕ್ಲಬ್ಸ್ ವತಿಯಿಂದ ಬುಧವಾರ ಆಯೋಜಿಸಿದ್ದ ಮರಣದ ಕಡೆಗೆ ಒಂದು ಪ್ರಯಾಣ; 'ನಾವೇಕೆ ಸಾಯುತ್ತೇವೆ(A journey onto mortality; Why We Die)' ಕೃತಿ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಲ್ಲಾ ಜೀವಿಗಳು ಹುಟ್ಟಿದ ಮೇಲೆ ಒಂದಲ್ಲಾ ಒಂದು ದಿನ ಸಾಯಲೇಬೇಕು. ಸಾವು ಹೇಗೆಲ್ಲಾ ಬರಲಿದೆ ಎಂಬುದು ನಮಗೆಲ್ಲಾ ತಿಳಿದಿದ್ದು, ಏಕೆ ಬರಲಿದೆ ಎಂಬುದನ್ನು ತಿಳಿಯಲು ನಿರಂತರ ಸಂಶೋಧನೆಗಳು ನಡೆಯುತ್ತಿವೆ ಎಂದರು.

ಇದುವರೆಗೆ 122 ವರ್ಷಕ್ಕಿಂತ ಹೆಚ್ಚು ಬದುಕಿದ್ದವರಿಲ್ಲ. ದೇಹದಲ್ಲಿ ಜೀವಕೋಶಗಳಿಂದ ರೂಪಿತವಾದ ಪ್ರೋಟಿನ್‌ಗಳು ಹಾಗೂ ರೈಬೋಸೋಮ್, ಮೈಟೊಕಾಂಡ್ರಿಯ, ಎಂ–ಆರ್‌ಎನ್‌ಎ(ಮೆಸೆಂಜರ್ ರೈಬೋನ್ಯೂಕ್ಲಿಕ್ ಆಮ್ಲ–ಆರ್‌ಎನ್‌ಎ) ದೇಹದ ಆಯುಷ್ಯವನ್ನು ನಿರ್ಧರಿಸುತ್ತವೆ. ದೇಹದಲ್ಲಿ ಪ್ರೋಟಿನ್ ಉತ್ಪಾದಿಸುವ ಹಾಗೂ ನಿಷ್ಕ್ರಿಯಗೊಳಿಸುವ ಸಾಮರ್ಥ್ಯ ದೇಹಕ್ಕೆ ಇರುವವರೆಗೂ ಬದುಕಿರುತ್ತೇವೆ. ವಯಸ್ಸಾಗುತ್ತಲೇ ನಾವು ಸಾವಿಗೆ ಹತ್ತಿರವಾಗುತ್ತಿರುತ್ತೇವೆ. ವಯಸ್ಸಾದಂತೆ ಜೀವಕೋಶಗಳಲ್ಲಿನ ಪ್ರೋಟಿನ್ ಉತ್ಪಾದನೆ ಸಾಮರ್ಥ್ಯ ಕಡಿಮೆಯಾಗುತ್ತಾ ಹೋಗುತ್ತದೆ. ನಾವು ಇಲ್ಲಿ ಸುಮ್ಮನೆ ಕುಳಿತಿದ್ದರೂ ನಮ್ಮೊಳಗಿನ ಸಾವಿರಾರು ಜೀವಕೋಶಗಳು ಸಾಯುತ್ತಲೇ ಇರುತ್ತವೆ ಎಂದು ವಿವರಿಸಿದರು.

ನಾವು ರೋಗ ನಿಯಂತ್ರಿಸುವ, ಆರೋಗ್ಯ ಕಾಯ್ದುಕೊಳ್ಳಲು ಪ್ರಯತ್ನವನ್ನು ಮುಂದುವರಿಸಬಹುದು. ಚಿಕಿತ್ಸೆ ಮೂಲಕ ಕ್ಯಾನ್ಸರ್‌ನಿಂದ ತಪ್ಪಿಸಿಕೊಳ್ಳಬಹುದು. ಆದರೆ, ವಯಸ್ಸಾಗುವುದನ್ನು ಹಾಗೂ ಸಾವನ್ನು ತಡೆಯಲಾಗದು. ಇದುವರೆಗೆ ದೀರ್ಘ ಕಾಲದವರೆಗೆ ಬದುಕಿದ್ದವರು ತಮ್ಮ ಆಯಸ್ಸನ್ನು ವೃದ್ಧಿಸಿಕೊಳ್ಳಲು ಯಾವುದೇ ಕ್ರಮಬದ್ಧ ವಿಧಾನ ಪಾಲಿಸಿಲ್ಲ. ಸಂಶೋಧನೆಗಳ ಪ್ರಕಾರ ನಿದ್ದೆ, ಮಿತ ಆಹಾರ ಸೇವನೆ ಮತ್ತು ವ್ಯಾಯಾಮದಿಂದ ಮಾತ್ರ ಆಯಸ್ಸು ವೃದ್ಧಿಯಾಗಲಿದೆ ಎಂಬುದು ಸಾಬೀತಾಗಿದೆ ಎಂದು ತಿಳಿಸಿದರು.



'ನಾವೇಕೆ ಸಾಯುತ್ತೇವೆ (Why We Die) ಕೃತಿ ಕುರಿತ ಸಂವಾದ ಕಾರ್ಯಕ್ರಮದಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತ ಜೀವಶಾಸ್ತ್ರಜ್ಞ ವೆಂಕಿ ರಾಮಕೃಷ್ಣನ್ ಮಾತನಾಡಿದರು. ವಿಜ್ಞಾನಿ ಪ್ರೊ.ಮೇವಾ ಸಿಂಗ್, ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ ಸಂವಾದ ನಡೆಸಿಕೊಟ್ಟರು.

ಸ್ವಂತ ಪ್ರತಿಭೆ ಅನಾವರಣಗೊಳಿಸುತ್ತಿಲ್ಲ....!

ಭಾರತೀಯ ವಿಜ್ಞಾನಿಗಳು ಸಂಶೋಧನೆಯಲ್ಲಿ ಸ್ವಂತ ಪ್ರತಿಭೆಯನ್ನು ಹೆಚ್ಚು ಅನಾವರಣಗೊಳಿಸುತ್ತಿಲ್ಲ. ಹಳೆ ವಿಷಯಗಳ ಮೇಲೆಯೇ ಸುತ್ತುತ್ತಿದ್ದಾರೆ. ದೇಶದಲ್ಲಿ ಪ್ರತಿಭಾವಂತ ವಿಜ್ಞಾನಿಗಳಿದ್ದಾರೆ. ಕಡಿಮೆ ಸಂಪನ್ಮೂಲಗಳಲ್ಲಿಯೇ ಶ್ಲಾಘನೀಯ ಕೆಲಸ ಮಾಡುತ್ತಿದ್ದಾರೆ. ಆದರೆ, ಹಲವರು ಈಗಾಗಲೇ ನಡೆದಿರುವ ಸಂಶೋಧನೆಗಳತ್ತಲೇ ಆಸಕ್ತಿ ವಹಿಸಿದ್ದು, ಅದರಲ್ಲೂ ಸ್ವಂತ ಪ್ರತಿಭೆ ಹೊರಹಾಕುತ್ತಿಲ್ಲ. ಭಾರತೀಯ ವಿಜ್ಞಾನಿಗಳು ವಿಶ್ವದರ್ಜೆಯ ಆವಿಷ್ಕಾರ ಮಾಡುವ ಸಾಮರ್ಥ್ಯ ಹೊಂದಿದ್ದು, ಜೀವ ವೈವಿಧ್ಯ, ಪ್ರಾಣಿಗಳ ವರ್ತನೆ ಹಾಗೂ ಪರಿಸರ ವಿಷಯಗಳತ್ತ ಮುಖ ಮಾಡಬೇಕಿದೆ.

– ವೆಂಕಿ ರಾಮಕೃಷ್ಣನ್, ನೊಬೆಲ್ ಪ್ರಶಸ್ತಿ ಪುರಸ್ಕೃತ ಜೀವಶಾಸ್ತ್ರಜ್ಞ

ದೇಹದ ಕೆಲ ಅಂಗಾಂಗಗಳ ಕಾರ್ಯ ಸ್ಥಗಿತವಾದಾಗ ಸಾವು ಸಂಭವಿಸುತ್ತದೆ. ಆದರೆ, ವಿಚಿತ್ರವೆಂದರೆ ಅಂಗಾಂಗಗಳನ್ನು ಬೇರೆಯವರಿಗೆ ದಾನ ಮಾಡಬಹುದು. ನಾವು ಸತ್ತರೂ ಕೆಲವು ಅಂಗಾಂಗಗಳು ಜೀವಂತವಾಗಿ ಇರುತ್ತವೆ. ಮೂತ್ರಪಿಂಡ, ಹೃದಯ, ಯಕೃತ್ ಸೇರಿದಂತೆ ಇನ್ನಿತರೆ ಅಂಗಾಂಗ ದಾನ ಮಾಡಲು ಸಾಧ್ಯವಿದೆ ಎಂದು ಹೇಳಿದರು.

ಆಯಸ್ಸು ಹೆಚ್ಚಿಸಲು ಹಣ ಹೂಡಿಕೆ: ಜನಸಂಖ್ಯೆಯಲ್ಲಿ ವಯಸ್ಕರನ್ನು ಹೆಚ್ಚಿಸಿಕೊಳ್ಳಲು ಹಾಗೂ ಜೀವಿತಾವಧಿ ಹೆಚ್ಚಿಸಲು ದಕ್ಷಿಣ ಕೊರಿಯಾ ಹಾಗೂ ಚೀನಾ ಮುಂದಾಗಿವೆ. ಹೀಗಾಗಿ, ಈ ಸಂಶೋಧನೆಯಲ್ಲಿ 700ಕ್ಕೂ ಹೆಚ್ಚು ಕಂಪನಿಗಳು ಕೋಟ್ಯಾಂತರ ಹಣ ಹೂಡಿಕೆ ಮಾಡುತ್ತಿವೆ. ಸಣ್ಣ ವಯಸ್ಸಿನವರ ರಕ್ತವನ್ನು ಹಿರಿಯ ವಯಸ್ಕರಿಗೆ ವರ್ಗಾಯಿಸುವ ಮೂಲಕ ಆಯಸ್ಸು ಹೆಚ್ಚಿಸುವ ಪ್ರಯತ್ನಗಳು ನಡೆದಿವೆ. ಆದರೆ ಯಾವುದೂ ಯಶಸ್ವಿಯಾಗಿಲ್ಲ. ಸಣ್ಣ ವಯಸ್ಸಿನಲ್ಲಿ ದುಡ್ಡು ಬೇಕು... ದುಡ್ಡು ಬಂದಾಗ ಸಣ್ಣ ವಯಸ್ಸು ಬೇಕು... ಎನ್ನುವಂತೆ ಆಯಸ್ಸನ್ನು ವೃದ್ಧಿಸಿಕೊಳ್ಳಲು ಏನೆಲ್ಲಾ ಮಾಡಬೇಕೋ ಅದನ್ನೆಲ್ಲಾ ಮಾಡುತ್ತಿದ್ದಾರೆ. ಪ್ರಪಂಚದಲ್ಲಿರುವ ಪ್ರತಿಯೊಬ್ಬರ ಇಚ್ಛೆ ಸಾಯುವುದೇ ಬೇಡ ಎಂಬುದಾಗಿದೆ. ಸಾವನ್ನು ತಡೆಯಲು ನಿರಂತರ ಸಂಶೋಧನೆಗಳು ನಡೆಯುತ್ತಿದ್ದು, ಯಾವಾಗ ಫಲ ದೊರೆಯುತ್ತದೆ ಎಂಬುದು ಮಾತ್ರ ಗೊತ್ತಿಲ್ಲ ಎಂದರು. ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ ಹಾಗೂ ವಿಜ್ಞಾನಿ ಪ್ರೊ. ಮೇವಾ ಸಿಂಗ್ ಸಂವಾದ ನಡೆಸಿಕೊಟ್ಟರು. ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕಿ ಶುಭ ಸಂಜಯ್ ಅರಸ್ ಉಪಸ್ಥಿತರಿದ್ದರು.

ಬಂಡೀಪುರದಲ್ಲಿ 2 ಬಸ್, ಆಂಬುಲೆನ್ಸ್ ರಾತ್ರಿ 9 ಗಂಟೆ ನಂತರವೂ ಸಂಚಾರಕ್ಕೆ ಅವಕಾಶ



ಅರಣ್ಯ ಸಚಿವ ಈಶ್ವರ್ ಖಂಡ್ರೆ

ಬೆಂಗಳೂರು, ಜ.8– ಬಂಡೀಪುರ ಅರಣ್ಯ ಪ್ರದೇಶದೊಳಗೆ ರಾತ್ರಿ ವೇಳೆ ವಾಹನ ಸಂಚಾರಕ್ಕೆ ಅವಕಾಶ ಇಲ್ಲ. ನಿರ್ದಿಷ್ಟ ವಾಹನಗಳಿಗೆ ಮಾತ್ರ ಸಂಚಾರಕ್ಕೆ ಅನುವು ಮಾಡಿ ಕೊಡಲಾಗಿದೆ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೇಳಿದ್ದಾರೆ. ವಿಧಾನ ಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ದಿನದ 24 ಗಂಟೆಯೂ ವಾಹನಗಳ ಸಂಚಾರಕ್ಕೆ ಅವಕಾಶ ನೀಡುವಂತೆ ಕೆಲ ಕಾಂಗ್ರೆಸ್ ನಾಯಕರ ಸಲಹೆಗೆ ಪ್ರತಿಕ್ರಿಯಿಸಿ, ಬಂಡೀಪುರದಲ್ಲಿ ರಾತ್ರಿ 9 ಗಂಟೆ ನಂತರ ವಾಹನಗಳ ಸಂಚಾರಕ್ಕೆ ನಿಷೇಧ ಇದೆ. ಆದರೆ ಎರಡು ಬಸ್‌ಗಳು ಮತ್ತು ಆಂಬುಲೆನ್ಸ್ ಸಂಚಾರಕ್ಕೆ ಅವಕಾಶ ಒದಗಿಸಲಾಗಿದೆ. ಈ ಬಗ್ಗೆ ಪಕ್ಷದ ಮುಖಂಡರಿಗೆ ಮನದಟ್ಟು ಮಾಡಲಾಗುವುದು. ವನ್ಯಜೀವಿಗಳ ರಕ್ಷಣೆ ಜತೆಗೆ ಅಂತರ ರಾಜ್ಯಗಳ ಸಂಬಂಧವೂ ಮುಂದುವರಿಯುವಂತೆ ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು.

ಕಾವೇರಿ ತೀರದ ವನ್ಯಜೀವಿ ವಿಸ್ಮಯದ ಸಾಕ್ಷ್ಯಚಿತ್ರ: ಕೋಟ್ಯಾಂತರ ಜೀವ ರಾಶಿಗಳಿಗೆ ಜೀವನದಿಯಾಗಿರುವ ಕಾವೇರಿ ಬೇಸಿಗೆಯಲ್ಲಿ ಹೇಗೆ ಕಾಣಿಸುತ್ತದೆ, ಕಾವೇರಿಯನ್ನೇ ನಂಬಿದ ವನ್ಯಜೀವಿಗಳು ಬೇಸಿಗೆಯಲ್ಲಿ ನೀರಿಗಾಗಿ ಪಡುವ ಪಡಿಪಾಟಲುಗಳೇನು, ಕಾವೇರಿ ನದಿ ತಪ್ಪಲಲ್ಲೇ ಇರುವ ಕಾವೇರಿ ಮತ್ತು ಮಲೆಮಹದೇಶ್ವರ ಬೆಟ್ಟ ವನ್ಯಜೀವಿ ತಾಣದ ವನ್ಯಜೀವಿ ಸಂಪತ್ತುಗಳೇನು ಎಂಬುದಕ್ಕೆ ಉತ್ತರವಾಗಿ ವನ್ಯಜೀವಿ ತಜ್ಞರಾದ ಸರವಣ ಕುಮಾರ್ (ಸರ), ಡಾ. ಸಂಜಯ್ ಗುಬ್ಬಿ ತಂಡ 'ಕಾವೇರಿ ರಿವರ್ ಆಫ್ ಲೈಫ್' ಹೆಸರಿನ ಸಾಕ್ಷ್ಯಚಿತ್ರ ಸಿದ್ಧಪಡಿಸಿದ್ದು, ಅದರ ವಿಶೇಷ ಸ್ಕ್ರೀನಿಂಗ್ ಏರ್ಪಡಿಸಲಾಗಿತ್ತು.



ಸತತ 4 ವರ್ಷಗಳ ಪ್ರಯತ್ನದ ಫಲವಾಗಿ ಕಾವೇರಿ ರಿವರ್ ಆಫ್ ಲೈಫ್ ಮೂಡಿ ಬಂದಿದೆ. ಕಾವೇರಿ ನದಿ, ಕಾವೇರಿ ಮತ್ತು ಮಲೆಮಹದೇಶ್ವರ ಬೆಟ್ಟ ವನ್ಯಜೀವಿ ತಾಣಗಳಲ್ಲಿ ಕಾಲಕ್ಕೆ ತಕ್ಕಂತೆ ಆಗುವ ಬದಲಾವಣೆ, ಆನೆ, ಜಿಂಕೆ, ಕಾಡು ನಾಯಿ, ಕಪ್ಪೆಗಳು, ಪಕ್ಷಿ ಹೀಗೆ ಹಲವು ಜೀವ ವೈವಿಧ್ಯಗಳು, ಹಸಿರು ಕಳೆದುಕೊಂಡ ಅರಣ್ಯದಲ್ಲಿ ಅವುಗಳ ಜೀವನ ಶೈಲಿ ಹೇಗಿರುತ್ತದೆ ಎಂಬಂತಹ ಸೂಕ್ಷ್ಮ ಅಂಶಗಳನ್ನು ಕಣ್ಣಿಗೆ ಕಟ್ಟಿದಂತೆ ಸಾಕ್ಷ್ಯಚಿತ್ರದಲ್ಲಿ ತೋರಿಸಲಾಗಿದೆ. ಅರಣ್ಯ, ವನ್ಯಜೀವಿ ಪ್ರೇಮಿಗಳಿಗೇ ತಿಳಿಯದ ಅನೇಕ ಅಂಶಗಳು ಸಾಕ್ಷ್ಯಚಿತ್ರದಲ್ಲಿದ್ದು, ಎಲ್ಲವನ್ನೂ ನೈಜವಾಗಿ ತೋರಿಸಲಾಗಿದೆ. ಅರಣ್ಯ ಸಚಿವ ಈಶ್ವರ್ ಖಂಡ್ರೆ, ಪಿಸಿಸಿಎಫ್ ಸುಭಾಷ್ ಮಾಲ್ಕಡೆ, ಸಂಸದ ಮತ್ತು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಚಲನಚಿತ್ರ ನಟ ದತ್ತಣ್ಣ ಇತರರು ವಿಶೇಷ ಸ್ಕ್ರೀನಿಂಗ್‌ನಲ್ಲಿ ಪಾಲ್ಗೊಂಡು ಸಾಕ್ಷ್ಯಚಿತ್ರಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸ್ವಚ್ಛ ನೀರು ಕುಡಿಯುವ ಆನೆಗಳು: ಕರ್ನಾಟಕದಲ್ಲಿನ ಆನೆಗಳ ಪೈಕಿ ಅಂದಾಜು ಶೇ. 30ರಷ್ಟು ಆನೆಗಳು ಕಾವೇರಿ ನದಿ ಪಾತ್ರದ ಅರಣ್ಯ ಪ್ರದೇಶದಲ್ಲಿ ಕಾಣಸಿಗುತ್ತವೆ. ಅತಿ ಸೂಕ್ಷ್ಮ ಗುಂಪಿನ ಪ್ರಾಣಿಯಾಗಿರುವ ಆನೆಗಳ ಜೀವನ ಶೈಲಿಯನ್ನು ಸಾಕ್ಷ್ಯಚಿತ್ರದಲ್ಲಿ ವಿವರವಾಗಿ ತೋರಿಸಲಾಗಿದೆ. ಮಳೆಗಾಲದಲ್ಲಿ ಯಥೇಚ್ಛ ನೀರು ಸಿಗುತ್ತದೆ. ಅದೇ ಬೇಸಿಗೆಯಲ್ಲಿ, ಅರಣ್ಯ ಪ್ರದೇಶದ ಹಸಿರೆಲ್ಲ ಮಾಯವಾಗಿ ಕಂದು ಬಣ್ಣಕ್ಕೆ ತಿರುಗು ತ್ತದೆ ಹಾಗೂ ಅರಣ್ಯ ಪ್ರದೇಶದೊಳಗಿನ ನೀರಿನ ತೊರೆಗಳು ಬತ್ತಿ ಹೋಗುತ್ತವೆ. ಈ ಸಂದರ್ಭದಲ್ಲಿ ಆನೆಗಳು ಯಾವ ರೀತಿ ನೀರನ್ನು ಹುಡುಕಿಕೊಂಡು ಹೋಗುತ್ತವೆ. ಸ್ವಚ್ಛ ನೀರಿಗಾಗಿ ನೀರಿನ ಮೂಲಗಳ ದಡಗಳಲ್ಲಿ ಗುಂಡಿಯನ್ನು ತೋಡುವ ವಿಧಾನ ಹೀಗೆ ಹಲವು ವಿಚಾರಗಳನ್ನು ವಿವರಿಸಲಾಗಿದೆ.

ದಿನಗೂಲಿ ನೌಕರರಿಗೆ ಸಮವಸ್ತ್ರ ವಿತರಣೆ



ಸರಗೂರು ತಾಲೂಕು ಪ್ರಾದೇಶಿಕ ವಲಯದ ಕಳ್ಳ ಬೇಟೆ ತಡೆ ಹಾಗೂ ಆನೆ ತಡೆ ಶಿಬಿರದ 25 ದಿನಗೂಲಿ ನೌಕರರಿಗೆ ತಮ್ಮ ತಂದೆ ದಿವಂಗತ ಪಿ.ಶಿವಪ್ಪ ಅವರ 24ನೇ ವರ್ಷದ ಪುಣ್ಯಸ್ಮರಣಾರ್ಥ ಎರಡು ಜೊತೆ ಸಮವಸ್ತ್ರಗಳನ್ನು ಉದ್ಯಮಿ ಹಾಗೂ ಸಮಾಜ ಸೇವಕ ಎಸ್.ಶ್ರೀಕಾಂತ್ ವಿತರಿಸಿದರು. ಈ ವೇಳೆ ಶ್ರೀಕಾಂತ್ ತಾಯಿ ರತ್ನಮ್ಮ, ಸರಸ್ವತಿ ಶ್ರೀಕಾಂತ್, ನೂತನ್ ಎಸ್. ಆರ್ಯ, ದೊಡ್ಡಹುಂಡಿ ಕಿರಣ್, ಸರಗೂರು ವಲಯ ಅರಣ್ಯ ಅಧಿಕಾರಿ ಹನುಮಂತರಾಜು, ಉಪವಲಯ ಅರಣ್ಯ ಅಧಿಕಾರಿಗಳಾದ ಅಭಿಲಾಷ್, ಅಕ್ಷಯ್ ಕುಮಾರ್, ಪ್ರದೀಪ್, ಕಿರಣ್ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಅಕ್ರಮ ಆಸ್ತಿ ಗಳಿಕೆ ಆರೋಪ: 8 ಅಧಿಕಾರಿಗಳ ನಿವಾಸ, ಕಚೇರಿ ಮೇಲೆ ಲೋಕಾಯುಕ್ತ ದಾಳಿ

ಬೆಂಗಳೂರು, ಜ.8– ಆದಾಯಕ್ಕೂ ಮೀರಿ ಅಕ್ರಮ ಆಸ್ತಿ ಗಳಿಕೆ ಆರೋಪದ ಮೇಲೆ ಬೆಂಗಳೂರು ಸೇರಿ ರಾಜ್ಯದ ವಿವಿಧೆಡೆ 8 ಅಧಿಕಾರಿಗಳ ಮನೆ ಹಾಗೂ ಕಚೇರಿ ಮೇಲೆ ಬುಧವಾರ ಬೆಳಗ್ಗೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಬೆಂಗಳೂರಿನಲ್ಲಿ ಸಾರಿಗೆ ಇಲಾಖೆ ಜಂಟಿ ನಿರ್ದೇಶಕಿ ಶೋಭಾ ಮನೆ, ಚಿಕ್ಕಮಗಳೂರು ಜಿಲ್ಲೆ ಕಡೂರಿನ ಆಡಳಿತ ವೈದ್ಯಾಧಿಕಾರಿ ಡಾ. ಎಸ್.ಎನ್. ಉಮೇಶ್ ನಿವಾಸ, ಬೀದರ್ ಜಿಲ್ಲೆಯ ಸಣ್ಣ ನೀರಾವರಿ ಇಲಾಖೆ ಇಂಜಿನಿಯರ್ ರವೀಂದ್ರ ಮನೆ, ಬೆಳಗಾವಿ ಜಿಲ್ಲೆಯ ಖಾನಾಪುರದ ತಹಶೀಲ್ದಾರ್ ಪ್ರಕಾಶ್ ಶ್ರೀಧರ್, ತುಮಕೂರಿನ ನಿವೃತ್ತ ಆರ್‌ಟಿಒ ಅಧಿಕಾರಿ ಎಸ್.ರಾಜು ಮನೆ, ಗದಗ–ಬೆಟಗೇರಿ ನಗರಸಭೆ ಎಇಇ ಆರ್.ಎಚ್. ಹುಚ್ಚೇಶ್ ಮನೆ,ಬಳ್ಳಾರಿ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಮನೆ, ರಾಯಚೂರು ಜಿಲ್ಲೆಯ ಬೆಸ್ಕಾಂ ಜೆಇ ಹುಲಿ ರಾಜ್ ಮನೆ ಮೇಲೆಯೂ ದಾಳಿ ನಡೆದಿದೆ.

ಶಕುಂತಲ ಜಯದೇವ ಶರಣ ಪ್ರಶಸ್ತಿ ಪ್ರದಾನ

● ಸಮರ್ಪಣಾ ಭಾವದ ಸೇವೆಯಿಂದಷ್ಟೇ ಸಾಧನೆ ಸಾಧ್ಯ ● ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸೋಮಶೇಖರ್ ಅಭಿಮತ ● ಇಂದಿನ ತಲೆಮಾರಿನವರು ಹಿರಿಯರ ಆದರ್ಶ ಅನುಸರಿಸಬೇಕು



ಮೈಸೂರಿನ ಅಗ್ರಹಾರದ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹಾಗೂ ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕದ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಸಮಾಜ ಸೇವಕ ಎಸ್.ಮಹದೇವಯ್ಯ, ನಿವೃತ್ತ ಪ್ರಾಧ್ಯಾಪಕರು, ಸಾಹಿತಿಗಳೂ ಆದ ಡಾ.ಎಂ.ಎಸ್.ವೇದಾ ಅವರಿಗೆ 'ಶಕುಂತಲ ಜಯದೇವ ಶರಣ ಪ್ರಶಸ್ತಿ–2024' ಪ್ರದಾನ ಮಾಡಲಾಯಿತು.

ಮೈಸೂರು, ಜ.8(ಎಂಟಿವೈ)– ಮಾಡುವ ಕಾರ್ಯವನ್ನು ನಿರ್ಲಕ್ಷಿಸದೇ, ಸಮರ್ಪಣಾಭಾವದಿಂದ ಸೇವೆ ಸಲ್ಲಿಸಿದಾಗ ಮಾತ್ರ ಸಾಧನೆ ಸಾಧ್ಯ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಿ.ಸೋಮಶೇಖರ ಅಭಿಪ್ರಾಯಪಟ್ಟರು.

ಮೈಸೂರಿನ ಅಗ್ರಹಾರದ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹಾಗೂ ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕದ ವತಿಯಿಂದ ಬುಧವಾರ ಏರ್ಪಡಿಸಿದ್ದ 'ಶಕುಂತಲ ಜಯದೇವ ಶರಣ ಪ್ರಶಸ್ತಿ–2024' ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಧಾರ್ಮಿಕ ಕ್ಷೇತ್ರ, ರಾಜಕೀಯ ಕ್ಷೇತ್ರ, ಶೈಕ್ಷಣಿಕ ಕ್ಷೇತ್ರ, ಸಾಂಸ್ಕೃತಿಕ ಕ್ಷೇತ್ರ ಸೇರಿದಂತೆ ಇನ್ನಿತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವವರನ್ನು ನೋಡಿದರೆ ಜೀವನದಲ್ಲಿ ಶಿಸ್ತು ಮತ್ತು ಸಂಯಮವನ್ನು ರೂಢಿಸಿಕೊಂಡಿರುವುದನ್ನು ಕಾಣುತ್ತೇವೆ. ಮಾಡುವ ಕಾರ್ಯದಲ್ಲಿ ನಿರ್ಲಕ್ಷ್ಯ ತೋರದೆ ಕಾಲದ ಮಹತ್ವವನ್ನು ಅರಿತು ಅವರು ಕೆಲಸ ಮಾಡುತ್ತಾರೆ.

ಆದ್ದರಿಂದ ಇಂದಿನ ತಲೆಮಾರಿನವರು ಸಾಧಕರ ಆದರ್ಶಗಳನ್ನು ಅನುಸರಿಸಬೇಕು. ತಾಯಿಯ ಋಣ, ನಾಡಿನ ಋಣ ಮನುಷ್ಯನಿಗೆ ಬಹಳ ದೊಡ್ಡದು. ಹುಟ್ಟಿದ ಮನುಷ್ಯ ಇವೆರಡರ ಋಣವನ್ನು ತೀರಿಸಿದಾಗ ಜೀವನ ಸಾರ್ಥಕತೆ ಕಾಣುತ್ತದೆ. ಇಂದು ಪ್ರಶಸ್ತಿಗೆ ಭಾಜನರಾಗಿರುವ ಮಹದೇವಯ್ಯ ಅವರು ದೂರದ ಲಂಡನ್‌ನಲ್ಲಿ ವಾಸವಾಗಿದ್ದರು, ಕನ್ನಡ ನಾಡಿನ ಸೇವೆಯನ್ನು ಅವಿರತವಾಗಿ ಮಾಡಿಕೊಂಡು ಬರುತ್ತಿದ್ದಾರೆ. ನಾಡಿನ ಸಾಹಿತಿಗಳು, ಕಲಾವಿದರಿಗೆ ಅವರ ಮನೆಯ ಬಾಗಿಲು ಸದಾ ತೆರೆದಿರುತ್ತದೆ. ಲಂಡನ್ ನಗರದ ಸುತ್ತಮುತ್ತ ಕನ್ನಡದ ಸಾಹಿತ್ಯ– ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ಮೂಲಕ ಕನ್ನಡದ ಕಂಪನ್ನು ಪಸರಿಸಲು ಕೈ ಜೋಡಿಸಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿ, ಲಂಡನ್‌ನಲ್ಲಿ ಎಲ್ಲ ಜನಾಂಗದವರಿಗೂ ಸಮಾನತೆ– ಸಮಾನ ಅವಕಾಶ ನೀಡಬೇಕು ಎಂದು ಹೋರಾಟ, ಚಳವಳಿಯನ್ನು ಮಾಡುತ್ತಿದ್ದ ಮಹದೇವಯ್ಯ ಅವರು ಸಾಮಾಜಿಕ ಸಮಾನತೆಗಾಗಿ ಬಸವ ಇಂಟರ್‌ನ್ಯಾಷನಲ್ ಫೌಂಡೇಷನ್ ಸ್ಥಾಪನೆ ಮಾಡಿ ಸಾಂಸ್ಕೃತಿಕ– ಸಾಹಿತ್ಯಕವಾಗಿ ಎಲ್ಲರನ್ನೂ ಸಂಘಟನೆ ಮಾಡುತ್ತಾ ಬಂದಿದ್ದಾರೆ ಎಂದು ತಿಳಿಸಿದರು.

ಪ್ರಶಸ್ತಿ ಪ್ರದಾನ: ಸಮಾಜ ಸೇವಕ ಎಸ್.ಮಹದೇವಯ್ಯ, ನಿವೃತ್ತ ಪ್ರಾಧ್ಯಾಪಕರೂ, ಸಾಹಿತಿಗಳು ಆದ ಡಾ.ಎಂ.ಎಸ್. ವೇದಾ ಅವರಿಗೆ 'ಶಕುಂತಲ ಜಯದೇವ ಶರಣ ಪ್ರಶಸ್ತಿ–2024' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಪ್ರಶಸ್ತಿ ಪುರಸ್ಕೃತರನ್ನು ಕುರಿತು ಪ್ರೊ.ಮೈಸೂರು ಕೃಷ್ಣಮೂರ್ತಿ ಮಾತನಾಡಿದರು. ದತ್ತಿ ದಾಸೋಹಿ ಶಕುಂತಲ ಜಯದೇವ, ಶಸಾಪ ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಐಡೆಂಟಿಟಿ (ತ) + ಐಡೆಂಟಿಟಿ (ಮ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುಐ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವನವಾಸ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗನ ಅಂಡ್ ರೋಜಸ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುಐ (ಕ)	4 ಪ್ರದರ್ಶನಗಳು
ರಾಜಕಮಲ್	
ವಿಡುದಲೈ–2(ತ)	4 ಪ್ರದರ್ಶನಗಳು
ಸಂಗಂ	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೇಬಿಜಾನ್ (ಹಿ)	4 ಪ್ರದರ್ಶನಗಳು
ಪ್ರಭಾ	
ಗನ್ ಅಂಡ್ ರೋಜಸ್(ಕ) + ಪುಷ್ಪ–2 (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಆಫ್ಟರ್ ದಿ ಬ್ರೇಕಪ್ (ಕ): ಬೆ.9.40ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12.10ಕ್ಕೆ, ಸಂ.5.20ಕ್ಕೆ, ರಾ.7.45ಕ್ಕೆ, ಯುಐ (2024) (ಕ): ಮ.2.35ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಸೋನಿಕ್ ದಿ ಹೆಡ್ಜಾಗ್ 3(ಇಂ): ಬೆ.11.25ಕ್ಕೆ, ಸಂ.4.30ಕ್ಕೆ, ದೇಶಕ್ಕಾರನ್ (ಮ): ಮ.1.55ಕ್ಕೆ, ಮಾರ್ಕೋ (ಹಿಂ): ರಾ.7ಕ್ಕೆ, ಮಾರ್ಕೋ (ಮ): ರಾ.10.10ಕ್ಕೆ
ಸ್ಕ್ರೀನ್ 3	ಹರಿದಾಸರ ದಿನಚರಿ (ಕ): ಬೆ.10.30ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಮ.1.40ಕ್ಕೆ, ಸಂ.4.30ಕ್ಕೆ, ಎ ಲೆಜೆಂಡ್ (ಇಂ): ರಾ.7.20ಕ್ಕೆ, ಐಡೆಂಟಿಟಿ (ಮ): ರಾ.10.05ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.05ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪುಷ್ಪಾ 2 (ಕ): ಮ.1ಕ್ಕೆ, ಸ್ವೇಚ್ಛಾ (ಕ): ಸಂ.4.40ಕ್ಕೆ, ಯುಐ (ಕ): ಸಂ.6.55ಕ್ಕೆ, ದೇಶಕ್ಕಾರನ್ (ಮ): ರಾ.9.25ಕ್ಕೆ.
ಸ್ಕ್ರೀನ್ 2	ಮ್ಯಾಕ್ಸ್ (ಕ): ಮ.1.10ಕ್ಕೆ, ಮ.3.50ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.11.25ಕ್ಕೆ, ಯುಐ (ಕ): ಮ.1.45ಕ್ಕೆ, ಮ್ಯಾಕ್ಸ್ (ಕ): ಸಂ.6.25ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.11ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.1.45ಕ್ಕೆ, ಸಂ.6.55ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಸಂ.4.25ಕ್ಕೆ, ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮಕ್ಕಳಲ್ಲಿ ವಿವೇಚನೆ ಬೆಳೆಸಲು ರಂಗಭೂಮಿ ಸಹಕಾರಿ

ದೇಸಿರಂಗ ರಂಗೋತ್ಸವ ಸಮಾರೋಪದಲ್ಲಿ ಹಿರಿಯ ರಂಗಕರ್ಮಿ ಕೆ.ಜೆ.ನಾರಾಯಣಶೆಟ್ಟಿ ಅಭಿಮತ



ದೇಸಿರಂಗ ರಂಗೋತ್ಸವದ ಸಮಾರೋಪ ಸಮಾರಂಭದಲ್ಲಿ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ವಿತರಣೆ ಮಾಡಲಾಯಿತು.

ಮೈಸೂರು,ಜ.8(ಪಿಎಂ)– ರಂಗಭೂಮಿ ಪ್ರಕ್ರಿಯೆಯಲ್ಲಿ ಮಕ್ಕಳನ್ನು ತೊಡಗಿಸಿದರೆ ಅವರಲ್ಲಿ ಜೀವನಕ್ಕೆ ಅಗತ್ಯವಿರುವ ವಿವೇಚನೆ ಬೆಳೆಯಲಿದೆ ಎಂದು ಹಿರಿಯ ರಂಗಕರ್ಮಿ ಕೆ.ಜೆ. ನಾರಾಯಣಶೆಟ್ಟಿ ಹೇಳಿದರು.

ಮೈಸೂರಿನ ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಎರಡು ದಿನಗಳ ದೇಸಿರಂಗ ರಂಗೋತ್ಸವದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ನಾಟಕ ಬಹಳ ಶಕ್ತಿಯುತ ಮಾಧ್ಯಮ. ಸರಿಯಾದ ತರಬೇತಿ ದೊರೆತರೆ ಬಹಳ ಬೇಗ ಉನ್ನತ ಅಭಿನಯದೊಂದಿಗೆ ಜೀವನ ಮೌಲ್ಯದ ಬಗ್ಗೆಯೂ ಅರಿವು ಹೊಂದಬಹುದು. ರಂಗಭೂಮಿಯು ಮಕ್ಕಳಲ್ಲಿ ಅವರ ಅರಿವಿಲ್ಲದಂತೆ ವಿವೇಚನೆ ಬಿತ್ತಲಿದೆ. ಎಂತಹದ್ದೇ ಸಂಕಷ್ಟದ ಸಂದರ್ಭದಲ್ಲೂ ಚಿಂತನಾತ್ಮಕ ಆಲೋಚನೆ ಮೂಲಕ ಅದರಿಂದ ಹೊರಬರಲು ರಂಗಭೂಮಿ ಸಹಕಾರಿ. ಹೀಗಾಗಿ ಮಕ್ಕಳಲ್ಲಿ ರಂಗಭೂಮಿ ಬಗ್ಗೆ ಆಸಕ್ತಿ ಬೆಳೆಸುವುದು ಅಗತ್ಯವಾಗಿದೆ ಎಂದರು.

ನಾಟಕದ ಅಭ್ಯಾಸದಲ್ಲಿ ಧ್ವನಿ ತರಬೇತಿ ನೀಡಲಾಗುತ್ತದೆ. ಈ ಸಂಭಾಷಣೆಯ ಅಭ್ಯಾಸವು ಮಕ್ಕಳಿಗೆ ಭಾಷೆಯಲ್ಲಿ ಸ್ಪಷ್ಟತೆ ಮೂಡಿಸಿ, ಉಚ್ಚಾರ ಸೂಕ್ತವಾಗಿಸುತ್ತದೆ. ನಾಟಕದಲ್ಲಿ ವೈಜ್ಞಾನಿಕ ಅಂಶಗಳು ಸಾಕಷ್ಟು ದೊರೆಯಲಿವೆ. ಹೀಗಾಗಿ ಬಿಎಡ್‌ನಲ್ಲಿ ನಾಟಕವನ್ನು ಒಂದು ವಿಷಯವಾಗಿ ಮಾಡಲಾಯಿತು. ಆದರೆ ಅಲ್ಲೂ ಸಹ ಸರಿಯಾಗಿ ಬೋಧನೆ ಆಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಮಾರೋಪ ಭಾಷಣ ಮಾಡಿದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ದೇಸಿರಂಗವು ರಂಗಭೂಮಿ ತರಬೇತಿ ಸೇರಿದಂತೆ ವಿವಿಧ ಕಲಾ ಪ್ರಕಾರಗಳ ತರಬೇತಿ ಮೂಲಕ ಯುವ ಸಮುದಾಯವನ್ನು ಸಾಂಸ್ಕೃತಿಕವಾಗಿ ಬೆಳೆಸುವ ಮೂಲಕ ಸಮಾಜದ ಶುದ್ಧೀಕರಣಕ್ಕೆ ಕೊಡುಗೆ ನೀಡುತ್ತಿದೆ. ರಂಗಭೂಮಿ ಬಹುದೊಡ್ಡ ಅಭಿವ್ಯಕ್ತಿ ಮಾಧ್ಯಮ. ಜೊತೆಗೆ ಸಮಾಜದ ಅನಿಷ್ಟಗಳ ವಿರುದ್ಧ ಪ್ರತಿರೋಧಕ್ಕೆ ಪ್ರಬಲ ಮಾಧ್ಯಮವೂ ಹೌದು. ಬಿ.ವಿ.ಕಾರಂತರು ಹೇಳಿದಂತೆ ಮನುಷ್ಯನನ್ನು ಸಿನಿಮಾ ದೊಡ್ಡದಾಗಿ ತೋರಿಸಿದರೆ, ಕಿರುತೆರೆ ಚಿಕ್ಕದಾಗಿ ತೋರಿಸುತ್ತದೆ. ಆದರೆ ರಂಗಭೂಮಿ ಮನುಷ್ಯನನ್ನು ಆತ ಇರುವಂತೆಯೇ ತೋರಿಸುತ್ತದೆ ಎಂದು ತಿಳಿಸಿದರು. ಇದೇ ವೇಳೆ ತರಬೇತಿ ಶಿಬಿರದಲ್ಲಿ ಭಾಗವಹಿಸಿ ನಾಟಕ ಪ್ರದರ್ಶನ ನೀಡಿದ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ವಿತರಣೆ ಮಾಡಲಾಯಿತು. ಬಳಿಕ 'ಯಾನ' ನಾಟಕ ಪ್ರದರ್ಶನಗೊಂಡಿತು. ಈ ನಾಟಕ 1947 ಆಗಸ್ಟ್ 16ರ ನಂತರದಿಂದ 1948 ಜನವರಿ 30ರವರೆಗೆ ಐದೂವರೆ ತಿಂಗಳ ಗಾಂಧೀಜಿಯವರ ಬದುಕಿನ ಪಯಣದ ಚಿತ್ರಣವನ್ನು ಹೊಂದಿದೆ. ಟ್ರಸ್ಟ್ ಅಧ್ಯಕ್ಷ ಕೃಷ್ಣಜನಮನ, ಕಾರ್ಯದರ್ಶಿ ಡಾ. ಬಿ.ಎಸ್.ದಿನಮಣಿ, ಉಪಾಧ್ಯಕ್ಷ ಕುಮಾರ ಸ್ವಾಮಿ ಮತ್ತಿತರರು ಹಾಜರಿದ್ದರು.

ಶೀಘ್ರದಲ್ಲೇ ಹೊಗೇನಕಲ್ ಸಫಾರಿ ಆರಂಭ

ದಂತಚೋರ ವೀರಪ್ಪನ್ ಅಡಗುತಾಣಗಳ ದರ್ಶನ!

ಮೈಸೂರು: ದಂತ ಚೋರ ವೀರಪ್ಪನ್‌ನ ಸಾವಿನ ಎರಡು ದಶಕದ ನಂತರ, ಅರಣ್ಯ ಇಲಾಖೆಯು ಅರಣ್ಯದ ಸೊಬಗಿನ ಪ್ರಯೋಜನ ಪಡೆಯಲು ಉತ್ಸುಕವಾಗಿದೆ, ಹೀಗಾಗಿ ಶೀಘ್ರದಲ್ಲೇ ತಮಿಳುನಾಡು–ಕರ್ನಾಟಕ ಗಡಿಯಲ್ಲಿರುವ ಹೊಗೇನಕಲ್ ಜಲಪಾತದಿಂದ ಸಫಾರಿ ಪ್ರಾರಂಭಿಸಲಿದೆ.

ವೀರಪ್ಪನ್‌ನ ಸ್ಥಳೀಯ ಗ್ರಾಮವಾದ ಗೋಪಿನಾಥನ್‌ನಿಂದ ಸಫಾರಿ ಆರಂಭವಾಗುವುದು. ಪ್ರವಾಸಿಗರಿಂದ 'ಬ್ರಿಗಾಂಡ್ ಟೂರಿಸಂ'ಗೆ ಬೇಡಿಕೆ ಹೆಚ್ಚಿದೆ. ಸಫಾರಿಯು 22 ಕಿಮೀ ಅರಣ್ಯವನ್ನು ಆವರಿಸುತ್ತದೆ, ವಿಶೇಷವಾಗಿ ಕಾವೇರಿ ವನ್ಯಜೀವಿ ಅಭಯಾರಣ್ಯದಲ್ಲಿ ವೀರಪ್ಪನ್ ಅಡಗುತಾಣಗಳು ಸೇರಿವೆ. ಇಲ್ಲಿ ಆನೆಗಳು, ಸಂಬಾರ್, ಜಿಂಕೆಗಳು, ಕರಡಿಗಳು ಮತ್ತು ಇತರ ವನ್ಯಜೀವಿಗಳಿವೆ.

ಕಾವೇರಿ ವನ್ಯಜೀವಿ ಅಭಯಾರಣ್ಯದ ಅಧಿಕಾರಿಗಳು ಹೊಗೇನಕಲ್‌ನಿಂದ ಸಫಾರಿಯನ್ನು ಪ್ರಾರಂಭಿಸಲು ಬಯಸಿದ್ದರು, ವಿಶೇಷವಾಗಿ ಕಾವೇರಿ ನದಿಯಲ್ಲಿ ದೋಣಿ ವಿಹಾರ ಮತ್ತು ಸಾಂಪ್ರದಾಯಿಕ ಮೀನು ಭಕ್ಷ್ಯಗಳಿಗಾಗಿ ಗಡಿಯ ಎರಡೂ ಬದಿಗಳು ಪ್ರವಾಸಿಗರ ನೆಚ್ಚಿನ ತಾಣವಾಗಿದೆ.

ಇಲಾಖೆಯು ನಾಲ್ಕು ಟ್ರಿಪ್‌ಗಳನ್ನು ಯೋಜಿಸಿದೆ–ಬೆಳಿಗ್ಗೆ ಎರಡು ಮತ್ತು ಸಂಜೆ ಎರಡು ಬಾರಿ ಸಫಾರಿ ಇರುತ್ತದೆ. ಎರಡು ವಾಹನಗಳು ತಲಾ 25 ಜನರನ್ನು ಸಾಗಿಸುವ ಸಾಮರ್ಥ್ಯ ಹೊಂದಿರುತ್ತವೆ. ದಟ್ಟ ಕಾಡಿನೊಳಗೆ ಸಾಗುವ ಹೊಸ ಸಫಾರಿ ವಾಹನಗಳಿಗೆ ಆರ್ಡರ್ ಮಾಡಲಾಗಿದೆ.

ಇನ್ನು ಗೋಪಿನಾಥಂನಲ್ಲಿ ವಸತಿಗಾಗಿ ಟೆಂಟ್ ಕಾಟೇಜ್‌ಗಳನ್ನು ಸಹ ತೆರೆದಿದೆ. ಹೆಚ್ಚಿನ ಪ್ರವಾಸಿಗರ ಹರಿವು ಗ್ರಾಮಸ್ಥರು ಹೋಮ್ ಸ್ಟೇಗಳನ್ನು ತೆರೆಯಲು ಮತ್ತು ಅವರ ಮನೆಗಳಲ್ಲಿ ಕೊಠಡಿಗಳನ್ನು ಬಾಡಿಗೆಗೆ ನೀಡುವಂತೆ ಮಾಡಿದೆ.

ಹೊಗೇನಕಲ್ ಜಲಪಾತವು ಜನವರಿ 2024 ರಲ್ಲಿ 3,500 ಪ್ರವಾಸಿಗರನ್ನು ಮತ್ತು ಮಾರ್ಚ್‌ನಲ್ಲಿ 9,381 ಪ್ರವಾಸಿಗರನ್ನು ಆಕರ್ಷಿಸಿದೆ. ಸುಮಾರು 1,400 ವಿದೇಶಿ ಪ್ರವಾಸಿಗರು ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳಿಗೆ ಭೇಟಿ ನೀಡಿದ್ದಾರೆ. ಅರಣ್ಯ ಅಧಿಕಾರಿಗಳು ಸ್ಥಳೀಯ ಮತ್ತು ವಿದೇಶಿ ಪ್ರವಾಸಿಗರನ್ನು ಆಕರ್ಷಿಸಲು ಬಯಸಿದೆ. ಇದರಿಂದ ಸ್ಥಳೀಯ ಆರ್ಥಿಕತೆಗೆ ಕೊಡುಗೆ ನೀಡಿದಂತಾಗುತ್ತದೆ. ಜೊತೆಗೆ ನೇರ ಮತ್ತು ಪರೋಕ್ಷ ಉದ್ಯೋಗವನ್ನು ಸೃಷ್ಟಿಸುತ್ತದೆ. ಬಂಡೀಪುರ, ಕೆಗುಡಿ, ಪಿಜಿ ಪಾಳ್ಯ, ಅಜ್ಜಿಪುರ ಮತ್ತು ಗೋಪಿನಾಥಂ ನಂತರ ಹೊಗೇನಕಲ್‌ನಲ್ಲಿ ಹೊಸ ಸಫಾರಿ ಆರನೆಯದ್ದಾಗಿದೆ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ

ಸಂಖ್ಯೆ : 29/2024-25 ದಿನಾಂಕ: 06-01-2025

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಈ ಕೆಳಕಂಡ ಟೆಂಡರ್‌ಗಳನ್ನು ಲೆಕ್ಕ ಶೀರ್ಷಿಕೆ: ನರೇಗಾ ಯೋಜನೆಯಡಿ ಕರೆದಿರುವ ಕಾಮಗಾರಿಗಳನ್ನು **KG-1 (Stanard Tender Document)** ಪ್ರಕಾರ KPPP ಮುಖಾಂತರ ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮಗಳು **KTPP Act 1999 and KTPP Rule 2000** ರಲ್ಲಿ ಸಿವಿಲ್ ಗುತ್ತಿಗೆದಾರರುಗಳಿಂದ ಏಕ ಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದೆ. ಅಂದಾಜು ಮೊತ್ತ ರೂ. 9.00 ಲಕ್ಷಗಳ ಒಟ್ಟು 01 ಟೆಂಡರ್ ಆಹ್ವಾನಿಸಲಾಗಿದೆ. ಆನ್‌ಲೈನ್ ಟೆಂಡರ್ ಅಪ್‌ಲೋಡ್ ಮಾಡುವ ದಿನಾಂಕ : 08-01-2025 ಕೊನೆಯ ದಿನಾಂಕ: 15-01-2025 ಸಂಜೆ 17.00 ಗಂಟೆಯ ವರೆಗೆ. ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17-01- 2025 ಇನ್ನುಳಿದ ಹೆಚ್ಚಿನ ಮಾಹಿತಿಗಳನ್ನು ***KPPP website www.kppp.karnataka.gov.in*** ನಲ್ಲಿ ಪಡೆಯಬಹುದಾಗಿರುತ್ತದೆ. ಹಾಗೂ ಕಚೇರಿ ದೂರವಾಣಿ ಸಂಖ್ಯೆ: 08226-223019ಕ್ಕೆ ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ

ಸಂ: ವಾಸಾಸಂಇ:ಚಾನಗರ:539:2024-25

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,

ಇ-ಮೇಲ್ : purmymul@gmail.com

ಟೆಂಡರ್ ಪ್ರಕಟಣೆ (ಇ-ಟೆಂಡರ್ ಮುಖಾಂತರ ಮಾತ್ರ)

https://kppp.karnataka.gov.in

ಕ್ರ.ಸಂ	ಟೆಂಡರ್ ಪ್ರಕಟಣೆ ಮತ್ತು ದಿನಾಂಕ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	KMF/2024-25/IND1206	[illegible]	16.01.2025
2	KMF/2024-25/IND1207	[illegible]	22.01.2025

ಸಹಿ/-, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

ಪುರಸಭಾ ಕಾರ್ಯಾಲಯ, ಪಿರಿಯಾಪಟ್ಟಣ ಮೈಸೂರು ಜಿಲ್ಲೆ

ಈ-ಮೇಲ್ :itstaff_ulb_periyapatna@yahoo.com
Phone(O): 08223-273036

ಸಂ:ಪಿಪುಸ/ತಾಂತ್ರಿಕ/ಜೆ.ಎ.2/ಟೆಂಡರ್–18/2024–25 ದಿ: 06.01.2025

ಟೆಂಡರ್ ಪ್ರಕಟಣೆ

ಈ ಮೂಲಕ ಪ್ರಕಟಿಸುವುದೇನೆಂದರೆ 2024–25ನೇ ಸಾಲಿನ ಪುರಸಭಾ ಅನುದಾನದಡಿ ಪುರಸಭಾ ವ್ಯಾಪ್ತಿಯಲ್ಲಿ ಫುಟ್‌ಪಾತ್, ರಸ್ತೆ ಮತ್ತು ಜಂಕ್ಷನ್‌ಗಳನ್ನು ಅಭಿವೃದ್ಧಿ ಪಡಿಸಲು Detailed Project Report ಮಾಡಲು ನೋಂದಾಯಿಸಲ್ಪಟ್ಟಿರುವ ಅರ್ಹ ಸಂಸ್ಥೆ/ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು. **ಟೆಂಡರ್ ಸಲ್ಲಿಸುವ ವಿವರ: 1)** ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿ: 07.01.2025 ರಿಂದ 22.01.2025ರ ವರೆಗೆ. **2)** ಟೆಂಡರ್ ಸ್ವೀಕರಿಸುವ ಕೊನೆಯ ದಿ: 22.01.2025ರ ಸಾಯಂಕಾಲ 04.00 ಗಂಟೆ. **3)** ಟೆಂಡರ್‌ಗಳನ್ನು ತೆರೆಯುವ ದಿ: 23.01.2025ರ ಸಾಯಂಕಾಲ 05.00 ಗಂಟೆ.

ಕ್ರ.ಸಂ.	ಇಂಡೆಂಟ್ ನಂ.	ಅಂದಾಜು ಮೊತ್ತ ರೂ.ಗಳಲ್ಲಿ
1	DMA/2024-25/SE4391	8,90,000/-

ಸೂಚನೆ: ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಪತ್ರವ್ಯಗಳಿಗೆ ಬದ್ಧರಾಗಿರತಕ್ಕದ್ದು ಮತ್ತು ಹೆಚ್ಚಿನ ಮಾಹಿತಿ ಹಾಗೂ ಕಾಮಗಾರಿಗಳ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ಪಿರಿಯಾಪಟ್ಟಣ. ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ, ಪಿರಿಯಾಪಟ್ಟಣ.

DIPR/DDMYS/1060/KSMCA/714/2024-25

CHANGE OF NAME

I, Chandra Shekhar C., residing at D.No. 175, Manchegowdana Koppal, Near Bhyraveshwara Temple, Hebbal 2nd Stage, Mysuru-570 017, have changed my name as Chandra Shekar, on my own free will, in front of Notary C. Mangala on 7-1-2025. I declare that hereafter in all records, deeds and instruments in writing and in all action and proceeding and in all dealing and transaction and upon all occasions whatsoever use and sign the said name of Chandra Shekar.

Sd/- Chandra Shekar

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಓದುಗರು ಪರಿಶೀಲಿಸಬೇಕು. ಜಾಹೀರಾತುದಾರರೊಡನೆ ನಡೆಸುವ ವ್ಯವಹಾರಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು